ಸಂಪುಟ 15
ಸಂಚಿಕೆ 4

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

24 ಜನವರಿ 1993

ರೂ. 2.00

ಇದೋ ಸವಾಲು ಸ್ವೀಕರಿಸಿದ್ದೇವೆ-"ಕೋಮುವಾದಿಗಳಿಗಿನ್ನು ಉಳಿಗಾಲವಿಲ್ಲ'

ಪಾಟ್ನಾದ ಅಭೂತಪೂರ್ವ ರ್‍ಯಾಲಿ ದೇಶಕ್ಕೆ ನೀಡಿದ ಸಂದೇಶ

ಕೋಮುವಾದದ ವಿರುದ್ಧ ದೇಶವ್ಯಾಪಿ ಆಂದೋಳನದ ಎರಡೇ ಹಂತ ಜನವರಿ 20 ರಂದು ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಒಂದು ಅಭೂತಪೂರ್ವ ರ್‍ಯಾಲಿಯೊಂದಿಗೆ ಅತ್ಯಂತ ಯಶಸ್ವಿಯಾಗಿ ಆಗಂಭವಾಗಿದೆ. ಜನವರಿ ತಿಂಗಳ ಮೈನಡುಗಿಸುವ ಚಳಿಯನ್ನು ಲೆಕ್ಕಿಸದೆ 5ಲಕ್ಷಕ್ಕೂ ಹೆಚ್ಚು ಜನ, ಅದರಲ್ಲೂ ಬಹುಪಾಲು ಬಡ ಹಿಂದೂ ಜನಗಳು ಬಿಹಾರದ ಮೂಲೆಮೂಲೆಗಳಿಂದ ಬಂದು ಭಾಗವಹಿಸಿ, ಉತ್ತರ ಭಾರತದಲ್ಲಿ, ಹಿಂದೀ ಪ್ರದೇಶದಲ್ಲಿ 'ಹಿಂದುತ್ವ'ದ ಅಲೆ ಭೋರ್ಗಯುತ್ತಿದೆ, ಅದನ್ನು ಎದುರಿಸಲು ಸಾಧ್ಯವೇ ಇಲ್ಲ ಎಂಬ ಕೋಮುವಾದಿಗಳ ಆಟಾಟೋಪಕ್ಕೆ ತಕ್ಕ ಉತ್ತರ ನೀಡಿದ್ದಾರೆ. ಈ ದೇಶದ ಬಹುಪಾಲು ಜನರಿಗೆ ದೇಶದ ಐಕ್ಯತೆ, ಕೋಮು ಸಾಮರಸ್ಯ ದೇಕಾಗಿದೆ, ಧರ್ಮದ ಹೆಸರಿನಲ್ಲಿಜನರನ್ನು ಒಡೆಯುವ ಕೋಮುವಾದ ಖಂಡಿತಾ ಬೇಡವಾಗಿದೆ. ಆದ್ದರಿಂದ ರಾಜಕೀಯ ಧೃಢತೆಯಿದ್ದರೆ ಕೋಮುವಾದವನ್ನು ಮೂಲೆಗುಂಪು ಮಾಡುವುದು ಸಾಧ್ಯ ಎಂಬುದನ್ನು ಈ ರ್‍ಯಾಲಿ ತೋರಿಸಿಕೊಟ್ಟಿದೆಯೆಂದು ಸಾಮಾನ್ಯವಾಗಿ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್‌ಯಾದವ್‌ರನ್ನು 'ಹಳ್ಳಿಗಮಾರ'ನೆಂದು ಟೀಕಿಸುವ ಇಂಗ್ಲಿಷ್ ಪತ್ರಿಕೆಗಳೂ ಹೇಳಿವೆ. ಡಿಸೆಂಬರ್ 6 ರನಂತರ ಭಂಡತನದಿಂದ ಮೆರೆದಾಡುತ್ತಿರುವ ಕೋಮುವಾದಿ ಶಕ್ತಿಗಳಿಗೆ ಸವಾಲು ಹಾಕಲು ಸಾಧ್ಯವಿದೆಯೆಂದು ತೋರಿಸಿಕೊಟ್ಟಿದ್ದಾರೆ ಎನ್ನುತ್ತಾ ಇತ್ತೀಚಿನ ದಿನಗಳಲ್ಲಿ ಅತೀ ಅಪೂರ್ವವಾದ ರ್‍ಯಾಲಿಯಿದು ಎಂದು ಈ ಪತ್ರಿಕೆಗಳೂ ಗಮನಿಸಬೇಕಾಗಿ ಬಂದಿದೆ. ಜಾತ್ಯಾತೀತ ಶಕ್ತಿಗಳ ನಡುವೆಯೂ ಈಗ ಕೋಮುವಾದದ ವಿರುದ್ಧ ಹೋರಾಟವನ್ನು ಕೈಗೆತ್ತಿಕೊಂಡರೆ ಅದರಿಂದ ಬಿಜೆಪಿಗೇ ಲಾಭ, ಆದ್ದರಿಂದ ಆರ್ಥಿಕ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು ಎಂಬ ಹಿಂಜರಿಕೆ ತೋರುವವರ ಕಣ್ಣು ತೆರೆಸಿದ ರ್‍ಯಾಲಿಯಿದು.

ಇದೊಂದು "ಮಹಾರ್‍ಯಾಲಿ"ಯೆಂದು ಬಿಹಾರದಂತೆ, ಡಿಸೆಂಬರ್ 6ರ ನಂತರ ಕೋಮುವಾದಿಗಳ ವಿರುದ್ಧ ದೃಢ ಕ್ರಮ ಕೈಗೊಂಡು ಮಾದರಿ ಹಾಕಿಕೊಟ್ಟ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಬಣ್ಣಿಸಿದ ಈ ರ್‍ಯಾಲಿಯನ್ನುದ್ದೇಶಿಸಿ ಈ ಇಬ್ಬರು ಮುಖ್ಯಮಂತ್ರಿಗಳಲ್ಲದೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್, ಸಿಪಿಐ ಕಾರ್ಯದರ್ಶಿ ಇಂದ್ರಜಿತ್ ಗುಪ್ತಾ, ಜನತಾದಳದ ಜಾರ್ಜ್ ಫರ್ನಾಂಡಿಸ್, ರಾಮವಿಲಾಸ್ ಪಾಸ್ವಾನ್ ಹಾಗೂ ಶರದ್ ಯಾದವ್, ಎಸ್‌ಜೆಪಿಯ ಚಂದ್ರಶೇಖರ್ ಮತ್ತಿತರರು ಮಾತನಾಡಿದರು.

ಜಾತ್ಯಾತೀತತೆ ಕೇವಲ ಮುಸಲ್ಮಾನರ ಪ್ರಶ್ನೆಯಲ್ಲ, ಜಾತ್ಯಾತೀತತೆಯ ಸಮರವನ್ನು ಕೆಂಬಾವುಟದವರು ಹಸಿರು ಬಾವುಟದವರು ನಡೆಸುತ್ತಾರೆ ಎಂದು ಮುಸಲ್ಮಾನ ಬಾಂಧವರಿಗೆ ಭರವಸೆ ನೀಡಿದರು ಲಾಲೂ ಪ್ರಸಾದ್ ಹಾಗೂ ಇತರ ಮುಖಂಡರು. ಕೋಮು ಶಕ್ತಿಗಳನ್ನೆದುರಿಸುವಲ್ಲಿ ಕಾಂಗ್ರೆಸ್(ಐ)ನ ದುರ್ಬಲ ನಿಲುವನ್ನು ಜ್ಯೋತಿ ಬಸು ಸೇರಿದಂತೆ ಎಲ್ಲಾ ಮುಖಂಡರೂ ಬಲವಾಗಿ ಖಂಡಿಸಿದರು. ವಿಚ್ಛಿದ್ರಕಾರೀ ಶಕ್ತಿಗಳನ್ನು ಮೂಲೆಗುಂಪು ಮಾಡಲು ಐಕ್ಯಹೋರಾಟ ಅಗತ್ಯಎಂದರು. ಐಪಿಎಫ್ ಕೂಡಾ ಸೇರಿದಂತೆ ಎಡಪಕ್ಷಗಳು, ಜನತಾದಳ ಹಾಗೂ ಎಸ್‌ಜೆಪಿ ಸೇರಿ ಈ ರ್‍ಯಾಲಿಯನ್ನು ಸಂಘಟಿಸಿದ್ದರು.

ಡಿಸೆಂಬರ್ 19ರಂದು ದಿಲ್ಲಿಯಲ್ಲಿ 11 ರಾಜಕೀಯ ಪಕ್ಷಗಳು(ಕಾಂಗ್ರೆ, ಬಿಜೆಪಿ ಎರಡೂ ಇದರಲ್ಲಿಲ್ಲ) ಹಾಗೂ 30ಕ್ಕೂ ಹೆಚ್ಚು ಸಾಮೂಹಿಕ ಸಂಘಟನೆಗಳು ಸೇರಿ ರಚಿಸಿಕೊಂಡ ರಾಷ್ಟ್ರೀಯ ಏಕತಾ ಆಂದೋಳನದ ಎರಡನೇ ಹಂತದ ಕಾರ್ಯಕ್ರಮ ಅಂದರೆ ದೇಶದ ಎಲ್ಲೆಡೆ ಸಾರ್ವಜನಿಕ ರ್‍ಯಾಲಿಗಳ ಕಾರ್ಯಕ್ರಮ ಪಾಟ್ನಾ ರ್‍ಯಾಲಿಯೊಂದಿಗೆ ಅತ್ಯಂತ ಯಶಸ್ವಿಯಾಗಿ ಆರಂಭವಾಗಿದೆ. ಈ ರ್‍ಯಾಲಿಯ ಮೊದಲು ರಾಜ್ಯಾದ್ಯಂತ 30 ಕ್ಕೂ ಹೆಚ್ಚು ಪ್ರಾದೇಶಿಕ ರ್‍ಯಾಲಿಗಳು ನಡೆದು ಲಕ್ಷಾಂತರ ಜನಗಳನ್ನು ಈ ಆಂದೋಳನದಲ್ಲಿ ಅಣಿನೆರೆಸಲಾಯಿತು. ಬಿಜೆಪಿ ನೇತೃತ್ವದ ಕೋಮುವಾದಿಗಳನ್ನು ನೇರವಾಗಿ ಟೀಕಿಸುವ ಹಾಡುಗಳ ಮಹಾಪೂರವೇ ಈ ರ್‍ಯಾಲಿಗಳು ಸಮಯದಲ್ಲಿ ಕಂಡು ಬಂತು.

ಮುಂದಿನ ರ್‍ಯಾಲಿಯ ಅಮೃತಸರ(ಜ. 26), ಗುವಾಹಟಿ(ಜ. 29), ಭುವನೇಶ್ವರ(ಜ. 30), ಮದ್ರಾಸ್(ಜ.31), ಬೆಂಗಳೂರು(ಫೆ.1), ವಾರಣಾಸಿ(ಫೆ.2), ಭೂಪಾಲ(ಫೆ.8), ಜಯಪುರ(ಫೆ. 10) ಹಾಗೂ ನಾಗಪುರ(ಫೆ.13)ದಲ್ಲಿ ನಡೆಯಲಿದೆ ಎಂದು ಐಎನ್‌ಎಸ್ ಸುದ್ದಿ ತಿಳಿಸಿದೆ.

ಜೆಟ್ ವೇಗದಲ್ಲಿ ಸಾಗಲು ಗಜಗಾತ್ರದ ಮೊಯಿಲಿ ಸಂಪುಟ!

ವೀರಪ್ಪ ಮೊಯಿಲಿಯವರು ನವಂಬರ್ 20ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರ ಒಂದು ತಿಂಗಳಲ್ಲಿ ಉಪಮುಖ್ಯಮಂತ್ರಿಯನ್ನು ನೇಮಕ ಮಾಡಿ ಎಲ್ಲಾ ಜಿಲ್ಲೆಗಳಿಗೆ, ಜಾತಿಗಳಿಗೆ ಪ್ರಾತಿನಿಧ್ಯ ದೊರಕಿಸಿಕೊಡುವ ದೃಷ್ಟಿಯಿಂದ ಮಂತ್ರಿ ಮಂಡಲವನ್ನು ಎರಡನೇ ಸಲ ವಿಸ್ತತಗೊಳಿಸಲಾಗುವುದೆಂಬ ಆಶ್ವಾಸನೆ ನೀಡಿದ್ದರು. ದೇಶದಲ್ಲಿಯ ರಾಜಕೀಯ ಘಟನೆಗಳಿಂದಾಗಿ ತಾನಿತ್ತ ಆಶ್ವಾಸನೆಯನ್ನು ಪೂರೈಸಲು ಮೊಯಿಲಿಯವರಿಗೆ ಎರಡು ತಿಂಗಳು ಹಿಡಿಯಿತು. ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ನಂತರ ಮೊದಲನೆಯ ಸಲ ಅತಿ ದೊಡ್ಡ ಅಂದರೆ ಮುಖ್ಯಮಂತ್ರಿಯವರನ್ನು ಸೇರಿ 41 ಸದಸ್ಯರನ್ನು ಹೊಂದಿದ ಮಂತ್ರಿ ಮಂಡಲ ರಚಿಸಿ ಚರಿತ್ರೆ ದಾಖಲು ಮಾಡಿದ್ದಾರೆ. 21 ಜನ ಕ್ಯಾಬಿನೆಟ್ 20 ರಾಜ್ಯ ಸಚಿವರ ಮಂತ್ರಿಮಂಡಲ ರಚನೆಯಾಗಿದೆ. ತಮ್ಮ ಜಿಲ್ಲೆಯಾದ ದಕ್ಷಿಣ ಕನ್ನಡಕ್ಕೆ ಅತಿ ಹೆಚ್ಚಿನ ಅಂದರೆ ಐದು ಪ್ರಾತಿನಿಧ್ಯ ನೀಡಿದ್ದಾರೆ. ಹಾಸನ ಜಿಲ್ಲೆಯವರಿಗಿಲ್ಲ.

ಎನ್.ಕೆ. ಉಪಾದ್ಯಾಯ

ಅರ್ಧಕ್ಕಿಂತಲೂ ಹೆಚ್ಚು ಯುವಕರಿಗೆ ಮಂತ್ರಿ ಪದವಿ ದೊರಕಿರುವುದು ಹಾಗೆಯೇ ಕೆಲವು ಅನುಭವಸ್ತರೂ ಮಂತ್ರಿಮಂಡಲದಲ್ಲಿರುವುದು ಸ್ವಾಗತಾರ್ಹ. ಆದರೆ ರಾಜ್ಯ ಹಣಕಾಸಿನ ತೊಂದರೆಯಲ್ಲಿರುವಾಗ ಇಷ್ಟು ದೊಡ್ಡ ಮಂತ್ರಿಮಂಡಲ ಅಗತ್ಯವಿತ್ತೇ ಎಂದು ಕೇಳಬಹುದಾಗಿದೆ. ಅಗತ್ಯ ಇಲ್ಲ ಎಂದು ಉತ್ತರಿಸಬೇಕಾಗಿದೆ. ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಾ ಇನ್ನುಳಿದಿರುವ ಎರಡು ವರ್ಷಗಳಲ್ಲಿ ಐದು ವರ್ಷಗಳ ಕೆಲಸ ಮಾಡಬೇಕಾಗಿದೆ. ಪಕ್ಷ ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸಬೇಕಾಗಿದೆ. ನಾನು ಜೆಟ್ ವೇಗದಲ್ಲಿ ಸಾಗಬೇಕೆಂದಿರುವರು. ಮಂತ್ರಿಮಂಡಲದ ಗಾತ್ರ ಈ ಹೊಣೆ ನಿರ್ವಹಿಸಲು ತಕ್ಕದಾಗಿಯೇ ಇದೆ ಎಂದು ಹೇಳಿ ತಮ್ಮದು ಕಾರ್ಯಶೀಲ ಸರಕಾರವಾಗಬೇಕೆಂಬ ಬಯಕೆಯನ್ನು ವ್ಯಕ್ತಮಾಡಿ "ಜನಸೇವೆ ಮಾಡಲು ಸೈನ್ಯವೊಂದನ್ನೇ ಸಜ್ಜುಗೊಳಿಸಿದ್ದೇವೆ" ಎಂದು ಹೇಳಿದ್ದಾರೆ. ತಮ್ಮ ಆಶ್ವಾಸನೆಯನ್ನು ಎಷ್ಟರಮಟ್ಟಿಗೆ ಪೂರೈಸುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ.

ಹೆಚ್ಚು ಮಂತ್ರಿಗಳ ನೇಮಕವಾದ ನಂತರ ಖಾತೆಗಳ ಹಂಚಿಕೆ ಆಗಬೇಕಲ್ಲ, ಖಾತೆಗಳ ಹಂಚಿಕೆ ನೋಡುವಾಗ ಮಂತ್ರಿಗಳಿಗೆ ಪಾರ್ಟ್‌ಟಾಯಿಮ್ ಕೆಲಸ ಅಂದರೆ ನಾಲ್ಕು ಗಂಟೆಯ ಕೆಲಸ ಮಾತ್ರ ಸಿಕ್ಕಿದಂತಾಗಿದೆಂದು ಕಂಡುಬರುತ್ತಿದೆ. ಉದಾಹರಣೆಗೆ ಶಿಕ್ಷಣ ಖಾತೆಯನ್ನು ನಾಲ್ಕು ವಿಭಾಗ ಮಾಡಿ ನಾಲ್ಕು ಮಂತ್ರಿಗಳಿಗೆ ಹಂಚಲಾಗಿದೆ. ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಗಳನ್ನು ಮೂರು ಸಂಪುಟ ದರ್ಜೆ ಮಂತ್ರಿಗಳಿಗೂ, ವಯಸ್ಕರ ಶಿಕ್ಷಣವನ್ನು ಸಹಾಯಕ ದರ್ಜೆ ಸಚಿವರಿಗೂ ಹಂಚಲಾಗಿದೆ. ಹಾಗೆಯೇ ನೀರಾವರಿ ಖಾತೆಯನ್ನು ನಾಲ್ಕು ವಿಭಾಗಗಳಿಗೂ ಮಾಡಿ ಸಣ್ಣ ನೀರಾವರಿ ಮುಖ್ಯಮಂತ್ರಿಯವರಿಗೂ, ಬೃಹತ್ ನೀರಾವರಿ ಮತ್ತು ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಯನ್ನು ಇಬ್ಬರು ಸಹಾಯಕ ದರ್ಜೆ ಮಂತ್ರಿಗಳಿಗೂ ಹಂಚಲಾಗಿದೆ. ಕೃಷಿ ಮಾರುಕಟ್ಟೆ, ರೇಷ್ಮೆ ಕೈಗಾರಿಕೆ, ಜವಳಿ, ಸಕ್ಕರೆ, ಅರಣ್ಯ ವಸತಿ, ಪಶು ಸಂಗೋಪನ, ಯುವಜನ ಸೇವೆ ಹೀಗೆ ಇಂಥವುಗಳನ್ನು

ಪುಟ 8 ಕ್ಕೆ



ಮೆರವಣಿಗೆಯ ಮುಂಚೂಣಿಯಲ್ಲಿ ಎಸ್‌ಎಫ್‌ಐ ಮುಖಂಡರು

"ಜಾತ್ಯಾತೀತತೆ ರಕ್ಷಿಸಿ - ಭಾರತ ರಕ್ಷಿಸಿ"

ಎಸ್.ಎಫ್.ಐ. 8ನೇ ಸಮ್ಮೇಳನದ ಕರೆ

(ಐ.ಎನ್.ಎಸ್.)

ಭಾರತ ವಿದ್ಯಾರ್ಥಿ ಫೆಡರೇಶನ್‌ನ 8ನೇ ರಾಷ್ಟ್ರ ಸಮ್ಮೇಳನ ತಿರುವನಂತಪುರದಲ್ಲಿ ಜನವರಿ 16ರಂದು ಜಾತ್ಯಾತೀತತೆ ರಕ್ಷಿಸಿ ಭಾರತ ರಕ್ಷಿಸಲು ಬುಡಮಟ್ಟದಿಂದ ತೀವ್ರ ಪ್ರಚಾರ ನಡೆಸಬೇಕೆಂಬ ಕರೆಯೊಂದಿಗೆ ಕೊನೆಗೊಂಡಿತು. ಐದು ದಿನಗಳ ಈ ಸಮ್ಮೇಳನ ಕೇಂದ್ರ ಸರಕಾರದ ವಿನಾಶಕಾರೀ ಆರ್ಥಿಕ, ಕೈಗಾರಿಕಾ ಹಾಗೂ ಶೈಕ್ಷಣಿಕ ನೀತಿಗಳನ್ನು ಸೋಲಿಸಲು ಪ್ರಯತ್ನಗಳನ್ನು ದ್ವಿಗುಣಗೊಳಿಸುವುದಾಗಿ ಪ್ರತಿಜ್ಞೆ ಮಾಡಿದೆ.

ಜಾತ್ಯಾತೀತತೆ ಹಾಗೂ ಕೋಮು ಸಾಮರಸ್ಯವನ್ನು ಎತ್ತಿ ಹಿಡಿಯುವ ಪ್ರತಿಜ್ಞೆಗೆ 5 ಕೋಟಿ ಸಹಿ ಪಡೆಯುವ ಆಂದೋಲನದ ಅಂಗವಾಗಿ ಮಾರ್ಚ್ 23ರ ಭಗತ್

ಪುಟ 8 ಕ್ಕೆ

ವಾರದ ನುಡಿ

ನೇತಾಗಳು ಮುಂಬೈಯನ್ನು ಒಡೆಯುವಲ್ಲಿ ಒಂದಾಗಿದ್ದಾರೆ. ನಾವು ಮುಂಬೈಯನ್ನು ಒಡೆಯುವುದನ್ನು ತಡೆದು ಕಾಪಾಡಿಕೊಳ್ಳಲಿಕ್ಕಾಗಿ ಒಂದಾಗಬೇಕು.

- ಮುಂಬೈಯ ಒಬ್ಬ ಟ್ಯಾಕ್ಸಿ ಚಾಲಕ

ದೇಶದ ದುಡಿಯುವ ಜನ ಮುಂಬೈಯನ್ನಷ್ಟೇ ಅಲ್ಲ ಇಡೀ ಭಾರತವನ್ನು, ಭಾರತದ ಕೋಮು ಸಾಮರಸ್ಯದ ಪರಂಪರೆಯನ್ನು ರಕ್ಷಿಸಲು ಒಂದಾಗುತ್ತಿದ್ದಾರೆ

ಜ. 26 : ಕೈ ಕೈ ಹಿಡಿದು ದೇಶವನ್ನು ರಕ್ಷಿಸೋಣ

ಜ. 30 : ಸಾಮರಸ್ಯ ಕಾಪಾಡಲು ಪ್ರತಿಜ್ಞಾ ಬದ್ಧರಾಗೋಣ

ಭಾರತದ ಗಣತಂತ್ರದಲ್ಲಿ ನಿರ್ಲಕ್ಷಿತ ವಿದ್ಯಾರ್ಥಿ-ಯುವಜನ

ಹೆಚ್.ಎಸ್. ನಾಗಮೋಹನ ದಾಸ್

ಭಾರತ ತನ್ನನ್ನು ಒಂದು ಗಣತಂತ್ರ ಎಂದು ಘೋಷಿಸಿಕೊಂಡು 43 ವರ್ಷಗಳಾಗುತ್ತಿವೆ. ಯಾವುದೇ ಗಣತಂತ್ರದ ವರ್ತಮಾನದ ಹಾಗೂ ಭವಿಷ್ಯದ ಮುಖ್ಯ ಅಂಶವಾಗಿರುವ ವಿದ್ಯಾರ್ಥಿ-ಯುವಜನರ ಸ್ಥಿತಿ ಏನು? ಡಿವೈಎಫ್ಐ ರಾಜ್ಯ ಅಧ್ಯಕ್ಷ ಹೆಚ್.ಎಸ್.ನಾಗಮೋಹನ ದಾಸ್ ವಿಶ್ಲೇಷಿಸಿ ಭವಿಷ್ಯ ಯಾರಿದ್ದೋ ಅಂಥವರ ವಿರುದ್ಧ ಭಾರತವನ್ನಾಳಿದ ಸರಕಾರಗಳು ನಡೆಸಿದ ಅಪರಾಧಗಳನ್ನು ಪರಿಶೀಲಿಸಿದ್ದಾರೆ.

ಯಾವುದೇ ಒಂದು ದೇಶಕ್ಕೆ ಅಥವಾ ಗಣತಂತ್ರಕ್ಕೆ ಅವರ ವಿದ್ಯಾರ್ಥಿ ಸಮುದಾಯ ಮತ್ತು ಯುವಜನ ಬಹುಪ್ರಮುಖವಾಗಿರುತ್ತದೆ. ಯಾವುದೇ ರಾಷ್ಟ್ರದ ಭವಿಷ್ಯ ಸಮಾಜದ ಈ ವಿಭಾಗಗಳ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಈ ಮಾನವ ಸಂಪನ್ಮೂಲ ಇತರೆಲ್ಲಾ ಸಂಪನ್ಮೂಲಗಳಿಗಿಂತ ಶ್ರೇಷ್ಠವಾದುದು. ಇತರ ಸಂಪನ್ಮೂಲಗಳ ಸೂಕ್ತ ಬಳಕೆಗೆ ಯೋಜನೆ-ಯೋಜಿತ ಹಣ ಹೂಡಿಕೆ ಹೇಗೆ ಅಗತ್ಯವೋ ಈ ಬಹುಪ್ರಮುಖ ಸಂಪನ್ಮೂಲದ ಅಭಿವೃದ್ಧಿಗೂ ಅದು ಅತ್ಯಗತ್ಯ. ಆದ್ದರಿಂದ ಯುವಜನ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ವಿಚಾರಗಳನ್ನು ಸಮಗ್ರವಾಗಿ ಅರಿಯುವುದು ಅವಶ್ಯವಾಗುತ್ತದೆ.

ಆದರೆ ನಮ್ಮ ದೇಶದಲ್ಲಿ ಅದನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ನಮ್ಮ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಪ್ರಬಲ ಆಂದೋಲನ ಬೆಳೆಸುವಲ್ಲಿ ಈ ವಿಭಾಗ ಮಹಾನ್ ಪಾತ್ರ ವಹಿಸಿತ್ತು. ಬ್ರಿಟಿಷರ ಹಿಂಸೆಯನ್ನು ಎದುರಿಸಿ ಅಪಾರ ತ್ಯಾಗ ಬಲಿದಾನ ಮಾಡಿತು. ಸ್ವಾತಂತ್ರ್ಯ ಮತ್ತು ವಿಮೋಚನೆಗಾಗಿನ ಜಾಗತಿಕ ಆಂದೋಲನದಲ್ಲಿ ಭಾರತೀಯ ವಿದ್ಯಾರ್ಥಿ ಯುವಜನರ ವಹಿಸಿದ ಪಾತ್ರವನ್ನು ಜಗತ್ತಿನಾದ್ಯಂತ ಗುರುತಿಸಲಾಗಿದೆ.

ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ- ಇವು ನಮ್ಮ ದೇಶದ ವಿಮೋಚನಾ ಚಳುವಳಿ ಅವಧಿಯಲ್ಲಿ ಜನಸಾಮಾನ್ಯರು, ವಿಶೇಷವಾಗಿ ಯುವಜನ ಇಟ್ಟುಕೊಂಡ ಗುರಿಗಳಾಗಿದ್ದವು. 1947ರ ಆಗಸ್ಟ್ 15ರಂದು ತ್ರಿವರ್ಣ ಧ್ವಜ ಕೆಂಪು ಕೋಟೆಯ ಮೇಲೇರಿತು. ಭಾರತದ ಯುವಜನರಿಗೆ ಭವಿಷ್ಯ ಉಜ್ವಲವಾಗಿದೆ, ಅವರ ಆಶೋತ್ತರಗಳು ಶೀಘ್ರವೇ ಈಡೇರುತ್ತವೆ ಎಂದು ಪಂಡಿತ್ ಜವಾಹರಲಾಲ್ ನೆಹರೂ ಈ ಐತಿಹಾಸಿಕ ಸ್ಮಾರಕದ ಮೇಲಿನಿಂದ ಉದ್ಘೋಷಿಸಿದರು. 1950ರಲ್ಲಿ ಭಾರತ ಗಣತಂತ್ರವಾಯಿತು. ಈ ಆಶೋತ್ತರಗಳನ್ನು ಬಿಂಬಿಸುವ ಸಂವಿಧಾನ ಅಂಗೀಕರಿಸಿದೆವು. ಆದರೆ ಆ ಭರವಸೆ ಇನ್ನೂ ಕನಸಾಗಿದೆಯೇ ಉಳಿದಿದೆ. ಈ ವಿಶಾಲ ನಾಡನ್ನು ಆಳುವ ಮಂದಿಗೆ ಇಂಥ ಭರವಸೆಗಳು ನೀರು ಕುಡಿದಷ್ಟು ಸುಲಭ ಎಂಬುದು 12 ಬಾರಿ ಮತ್ತೆ ಮತ್ತೆ ಅದೇ ಭರವಸೆಗಳು ಪುನರಪಿ ಘೋಷಿತವಾಗಿರುವುದನ್ನು ಕಂಡಾಗ ಅರ್ಥವಾಗುತ್ತದೆ.

ನಿರುದ್ಯೋಗದ ಸವಾಲು

ನಿರುದ್ಯೋಗ ನಮ್ಮ ದೇಶದ ಮುಂದಿರುವ ದೊಡ್ಡ ಸವಾಲಾಗಿದೆ. ಉದ್ಯೋಗ ವಿನಿಮಯ ಕೇಂದ್ರದಲ್ಲಿ 3.5 ಕೋಟಿ ಜನರು ನೊಂದಾಯಿಸಿಕೊಂಡಿದ್ದಾರೆ. ಇನ್ನೂ 10 ಕೋಟಿ ನಿರುದ್ಯೋಗಿಗಳು ಗ್ರಾಮಾಣ ಪ್ರದೇಶಗಳಲ್ಲಿ ಇದ್ದಾರೆ. ಅವರು ನೊಂದಾಯಿಸಿಕೊಂಡವರಲ್ಲ. ಹೀಗೆ ನಮ್ಮ ಜನಸಂಖ್ಯೆಯ ಒಂದು ದೊಡ್ಡ ವಿಭಾಗ ದೇಶದ ಉತ್ಪಾದನಾ ಪ್ರಕ್ರಿಯೆಯಿಂದ ವಂಚಿತವಾಗಿದೆ. ಸುಮಾರು 2.70 ಲಕ್ಷ ಕಾರ್ಖಾನೆಗಳು ಮುಚ್ಚಿರುವುದರಿಂದ ನಿರುದ್ಯೋಗಿಗಳ ಸೇನೆಯ ಸಂಖ್ಯಾಬಲ ವೃದ್ಧಿಯಾಗುತ್ತಿದೆ.

ನಿರುದ್ಯೋಗಕ್ಕೆ ಜನಸಂಖ್ಯೆ ಹೆಚ್ಚಳವೊಂದೇ ಕಾರಣವಲ್ಲ. ಅದು ಸರಕಾರದ ಸಾಮಾಜಿಕ ಆರ್ಥಿಕ ನೀತಿಗಳ ಫ. ಉದಾರೀಕರಣ ಕ್ರಮಗಳು, ವಿದೇಶೀ ತಂತ್ರಜ್ಞಾನಕ್ಕೆ ಆಹ್ವಾನ, ಕಂಪ್ಯೂಟರೀಕರಣ ಮೊದಲಾದವುಗಳಿಂದ ಹೆಚ್ಚು ಹೆಚ್ಚು ಮಂದಿ ನಿರುದ್ಯೋಗಿಗಳಾಗುತ್ತಿದ್ದಾರೆ. ಇದು ಭವಿಷ್ಯ ಯಾರಿಗೆ ಸೇರಿದ್ದಾಗಿದೆಯೋ ಅಂಥವರ ವಿರುದ್ಧ ಭಾರತವನ್ನಾಳಿದ ಸರಕಾರಗಳು ನಡೆಸಿದ ಅಪರಾಧವಾಗಿದೆ.

ಬ್ರಿಟಿಷರಿಂದ ಹೇರಲ್ಪಟ್ಟ ಶಿಕ್ಷಣದಿಂದ ನಾವಿನ್ನು ಹೊರಬಂದಿಲ್ಲ. ಶಿಕ್ಷಣ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ಹೆಚ್ಚುತ್ತಲೇ ಇದೆ. ದೇಶದ ಒಟ್ಟು ಮಕ್ಕಳ ಪೈಕಿ ಶೇಕಡಾ 30ರಷ್ಟು ಮಕ್ಕಳಿಗೆ ಮಾತ್ರ ಶಾಲೆ ಕಾಣುವ ಭಾಗ್ಯ ಲಭಿಸಿದೆ. ಅವರಲ್ಲಿಯೂ ಶೇಕಡಾ 40ರಷ್ಟು ಮಕ್ಕಳು ಯಾವುದೇ ಪ್ರಾಥಮಿಕ ಹಂತವನ್ನು ಮುಗಿಸುತ್ತಾರೆ. ಅವರಲ್ಲಿ ಹೈಸ್ಕೂಲ್ ಹಂತ ತಲುಪುವವರು ಶೇಕಡಾ 30 ಮತ್ತು ಅದನ್ನು ಮುಗಿಸುವವರು ಕೇವಲ ಶೇಕಡಾ 10 ಮಂದಿ.

ಭೂತಕಾಲದ ಬಂಧನದಿಂದ ವಿಮುಕ್ತರಾಗಲು ಶಿಕ್ಷಣದ ಅಗತ್ಯ ಯಾರಿಗೆ ಹೆಚ್ಚಾಗಿತ್ತೋ ಅಂಥ ವಿಭಾಗಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹುಡುಗಿಯರು ಇವರೇ ಹೀಗೆ ಮಧ್ಯದಲ್ಲೇ ಶಾಲೆ ಬಿಡುವವರಲ್ಲಿ ಹೆಚ್ಚಾಗಿರುತ್ತಾರೆ. ಈ ಶತಮಾನದ ಕೊನೆಯಲ್ಲಿ ನಮ್ಮ ದೇಶದ ನಿರಕ್ಷರಸ್ಥರ ಸಂಖ್ಯೆ 50 ಕೋಟಿ ಆಗಿರುತ್ತದೆ.

ಸ್ವಾತಂತ್ರ್ಯ ಬಂದು ನಾಲ್ಕೂವರೆ ದಶಕಗಳಾದರೂ ಅನಾರೋಗ್ಯಪೀಡಿತ- ರೋಗಪೀಡಿತ ಲಕ್ಷಾಂತರ ಜನರು ಭಾರತದಲ್ಲಿದ್ದಾರೆ. ಅರ್ಧಕ್ಕಿಂತ ಹೆಚ್ಚು ಜನರು ಬಡತನ ರೇಖೆಗಿಂದ ಕೆಳಗೆ ವಾಸಿಸುತ್ತಿದ್ದಾರೆ. ಶೇಕಡಾ 70ಕ್ಕೂ ಹೆಚ್ಚು ಮಂದಿಗೆ ಸರಿಯಾದ ಕುಡಿಯುವ ನೀರಿಲ್ಲ. ಇದು ಹಲವು ರೋಗಗಳು ಮತ್ತು ಅಕಾಲಿಕ ಸಾವಿಗೆ ಕಾರಣವಾಗಿದೆ.

ಕ್ರೀಡೆಯಲ್ಲಿ ಹಿಂದೆ

ಅಂತರ್ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಜಗತ್ತಿನ ಎರಡನೇ ದೊಡ್ಡದಾದ ಭಾರತೀಯ ಯುವಜನಾಂಗಕ್ಕೆ ಅವಕಾಶವಿಲ್ಲ. ಸಮರ್ಥ ಯುವಕ-ಯುವತಿಯರಿಗೆ ಸೂಕ್ತ ತರಬೇತಿ ನೀಡಲಾಗುತ್ತಿಲ್ಲ. ಅಧಃಪತನಗೊಂಡ ಸಂಸ್ಕೃತಿ ಯುವಜನರ ಬೆನ್ನೆಲುಬನ್ನು ಮುರಿಯಲು ಆಳುವ ವರ್ಗ ಬಳಸಿಕೊಳ್ಳುತ್ತಿರುವ ಸಾಧನವಾಗಿದೆ. ರೇಡಿಯೋ, ಟಿವಿ. ಮೊದಲಾದವುಗಳ ಮೂಲಕ ದಾಳಿ ಮಾಡುತ್ತಿರುವ ಸಾಮ್ರಾಜ್ಯಶಾಹಿ ಸಂಸ್ಕೃತಿ ಯುವಜನರ ಮನಸ್ಸನ್ನು ಕೆಡಿಸುತ್ತಿದೆ. ಅಶ್ಲೀಲತೆ ಹಾಗೂ ಕೊಳೆತು ನಾರುವ ಮೌಲ್ಯಗಳು ನೈತಿಕ ಅಧಃಪತನಕ್ಕೆ ಕಾರಣವಾಗುತ್ತಿವೆ.

ಯುವತಿಯರು ಇನ್ನೂ ಕೌಟುಂಬಿಕ ಹಾಗೂ ಸಾಮಾಜಿಕ ದಾಸ್ಯಕ್ಕೆ ಒಳಗಾಗಿದ್ದಾರೆ. ವರದಕ್ಷಿಣೆ, ಬಹುಪತ್ನಿತ್ವ, ಬಾಲ್ಯ ವಿವಾಹ ಮೊದಲಾದವುಗಳಿಂದ ಅವರು ಜರ್ಝರಿತರಾಗಿದ್ದಾರೆ. ಆ ಧಾರ್ಮಿಕ ಮೂಲಭೂತವಾದ ಮತ್ತು ಪ್ರತಿಗಾಮಿ ಸಿದ್ಧಾಂತಗಳಿಗೆ ಬಲಿಯಾಗುತ್ತಿದ್ದಾರೆ.

ಯುವಜನರನ್ನು ಪುನರುತ್ಥಾನವಾದ ಮತ್ತು ಧಾರ್ಮಿಕ ಮೂಲಭೂತವಾದದ ಸುತ್ತ ಅಣಿನೆರೆಯಿಸಲಾಗುತ್ತಿದೆ. ಕೋಮು, ಜಾತಿ, ಜನಾಂಗ, ಭಾಷೆ, ಪ್ರಾದೇಶಿಕ ಸಂಕುಚಿತವಾದಗಳ ಆಧಾರದಲ್ಲಿ ಅವರನ್ನು ಪ್ರಚೋದಿಸಲಾಗುತ್ತಿದೆ. ಪ್ರತ್ಯೇಕತಾವಾದಿ ಚಳುವಳಿಗಳಿಗೆ ಯುವಜನರನ್ನೇ ಬಳಸಿಕೊಳ್ಳಲಾಗುತ್ತಿದೆ. ನಿರುದ್ಯೋಗ ಹಾಗೂ ಸಮರ್ಪಕ ಮಾರ್ಗದರ್ಶನದ ಅಭಾವವಿರುವ ಯುವಕ- ಯುವತಿಯರು ಆಳುವ ವರ್ಗದ ಹಾಗೂ ಪ್ರತಿಗಾಮಿ ಶಕ್ತಿಗಳ ತಂತ್ರಗಳಿಗೆ ಸುಲಭವಾಗಿ ಬಲಿ ಬೀಳುತ್ತಾರೆ. ಕಳವು, ದರೋಡೆ, ಡಕಾಯಿತಿ, ಮಾದಕ ದ್ರವ್ಯ ವ್ಯಸನ, ವೇಶ್ಯಾವಾಟಿಕೆ, ಭ್ರಷ್ಟಾಚಾರ ಆತ್ಮಹತ್ಯೆ ಮುಂತಾದ ಅಪರಾಧಗಳಿಗೂ ನಿರುದ್ಯೋಗ ಮತ್ತು ಅನಕ್ಷರತೆಯಿಂದ ಉಂಟಾಗುವ ಹತಾಶೆಗೂ ಸಂಬಂಧವಿದೆ ಎನ್ನುವುದನ್ನು ಹಲವು ಅಧ್ಯಯನಗಳು ಸ್ಪಷ್ಟಪಡಿಸಿವೆ.

ದೇಶ ಕೋಮುವಾದಿ ಹಾಗೂ ಫ್ಯಾಸಿಸ್ಟ್ ಶಕ್ತಿಗಳಿಂದ ಭಾರೀ ಗಂಡಾಂತರವನ್ನು ಎದುರಿಸುತ್ತಿರುವ ಈ ಕಾಲಘಟ್ಟದಲ್ಲಿ ಈ ಶಕ್ತಿಗಳ ವಿರುದ್ಧ ಸಂಘರ್ಷ ನಡೆಸುವಂತೆ ಯುವಜನರನ್ನು ಹುರಿದುಂಬಿಸಬೇಕಾಗಿದೆ. ●

'ರಾಮಮಂದಿರವನ್ನೇ ಲೂಟಿ ಹೊಡೆದ 'ಧರ್ಮಯೋಧರು'!

ಧರ್ಮದ ಹೆಸರು ಹೇಳಿ ರಾಜಕೀಯ ಗದ್ದುಗೆಯೇರುವ ಕನಸು ಕಾಣುತ್ತಿರುವ "ಹಿಂದುತ್ವ" ಸಂಸ್ಕೃತಿ ಶುದ್ಧ ಗೂಂಡಾಗಳನ್ನು ಲೂಟಿಕೋರರನ್ನು ಸೃಷ್ಟಿಸಿದರೆ ಆಶ್ಚರ್ಯವೇನು? ಇವರು ನಿಜವಾದ ಹಿಂದೂಗಳಲ್ಲ ಎನ್ನವುದಕ್ಕೆ ಬೇರೆ ಪುರಾವೆ ಬೇಕೆ?

ಡಿಸೆಂಬರ್ 6-7 ರಂದು ಅಯೋಧ್ಯೆಯೇ ಬಾಬ್ರಿ ಮಸೀದಿ ಧ್ವಂಸ ಮಾಡಿದ ಮಂದಿ ಆ ಆವರಣದಲ್ಲಿದ್ದ 'ರಾಮಮಂದಿರ'ವನ್ನು ಅಪವಿತ್ರಗೊಳಿಸಿದರು, ಲೂಟಿ ಮಾಡಿದರು ಎಂದು ಈಗ ಸ್ಪಷ್ಟಪಟ್ಟಿದೆ. ಮಸೀದಿಯ ಹೊರಗಿದ್ದ 'ರಾಮ್ ಚಬೂತರಾ'ವನ್ನು ನಾಶಮಾಡಿದರು.

ಸ್ವಾಮಿ ಲಾಲ್ ದಾಸ್. ಈ ಮಂದಿರದ ಅರ್ಚಕರಾಗಿದ್ದರು. ಇವರ ಪ್ರಕಾರ ಡಿಸೆಂಬರ್ 6-7 ರಂದು ಮಂದಿರದಲ್ಲಿದ್ದ ಹಣ, ಮೂರ್ತಿ ಹಾಗೂ ಇತರ ಬೆಲೆಬಾಳುವ ವಸ್ತುಗಳ ಲೂಟಿಯಾಗಿದೆ. ಮೇ 1992 ರಲ್ಲಿ ಈ ವಿವಾದಿತ ಸ್ಥಳದ ರಿಸೀವರ್ ಆಗಿ ನೇಮಕಗೊಂಡ 84 ವರ್ಷದ ಆರ್.ಕೆ. ಸರ್ಕಾರ್ ಕೂಡಾ ಇದು ನಿಜ ಎಂದಿದ್ದಾರೆ.

ಆ ಮಾರ್ಚ್‌ನಲ್ಲಿ ತಯಾರಿಸಿದ ಪಟ್ಟಿಯಲ್ಲಿ ಎಂಟು ಅಷ್ಟಧಾತುವಿನ ಮಹತ್ವದ ಮೂರ್ತಿಗಳಿದ್ದವು. 'ರಾಮ್‌ಲಲ್ಲಾ' ನ ಎರಡು ರಾಮ-ಲಕ್ಷ್ಮಣ-ಭರತ-ಶತ್ರುಘ್ನರ ನಾಲ್ಕು, ಹನುಮಂತನ ಎರಡು ಮೂರ್ತಿಗಳಿದ್ದವು. ವಿಶೇಷ ಕಲ್ಲಿನ ಮೂರು ಗಣೇಶ ವಿಗ್ರಹಗಳು, ಸಾಲಿಗ್ರಾಮಗಳು ಇದ್ದವು. ಈಗ ಕರಸೇವಕರು 'ನಿರ್ಮಿಸಿರುವ' ಟೆಂಪರರಿ 'ಮಂದಿರ'ದಲ್ಲಿ ಉಳಿದಿರುವುದು ಎರಡೇ ಮೂರ್ತಿಗಳು. ಉಳಿದೆಲ್ಲಾ ಮೂರ್ತಿಗಳು ಬೆಲೆಬಾಳುವ ವಸ್ತುಗಳು ಅಯೋಧ್ಯೆಯಲ್ಲಿಯೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಬಳಿ ಇವೆ. ತನಗೆ ರಕ್ಷಣೆ ಕೊಡುವುದಾದರೆ ಮಾತ್ರ ಅವರ ಹೆಸರು ಹೇಳಬಲ್ಲೆ ಎಂದಿದ್ದರು ಸ್ವಾಮಿ ಲಾಲ್‌ದಾಸ್. ಎಂತಹ ಧಾರ್ಮಿಕರು ಈ 'ಕರಸೇವಕರು'! ಇವುಗಳಲ್ಲಿ ರಾಮ-ಲಕ್ಷ್ಮಣ-ಭರತ-ಶತ್ರುಘ್ನನ ನಾಲ್ಕು ಹಾಗೂ ಹನುಮಂತನ ಎರಡು ವಿಗ್ರಹಗಳು ಮತ್ತೆ 'ಕಾಣಿಸಿ'ಕೊಂಡಿವೆಯಂತೆ. ಸ್ವಾಮಿ ಲಾಲ್ ದಾಸ್‌ರ ಹೇಳಿಕೆ ಇದರಿಂದ ಸಾಬೀತಾದಂತಾಗಿದೆ.

ರಿಸೀವರ್ ಆಗಿರುವ ಆರ್.ಕೆ. ಸರ್ಕಾರ್‌ರವರ ಪ್ರಕಾರ 20 ಮೂರ್ತಿಗಳಿದ್ದವು. ಅವುಗಳಲ್ಲಿ ಹೆಚ್ಚಿನವು ಕಳವಾಗಿವೆ. ಎಂದು ಅವರು ಭಾವಿಸುತ್ತಾರೆ. ಮಂದಿರದ 'ಕಾಣಿಕೆ ನಿಧಿ' ಯಿಂದ ಕನಿಷ್ಠ 2 ಲಕ್ಷ ರೂ. ಅಪಹರಣವಾಗಿದೆಯೆಂದು ಸ್ವಾಮಿ ಲಾಲ್‌ದಾಸ್ ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ ಎರಡು 'ದಾನಪಾತ್ರೆ'ಗಳಿದ್ದವು. ಇವು ತುಂಬಿದಾಗ ಹಣ ಇಡಲು ಐದು ಬಾಕ್ಸ್‌ಗಳಿದ್ದವು. ಅವುಗಳಲ್ಲಿ ಮೂರು ಈಗ ಕಾಣೆಯಾಗಿವೆ. ನವಂಬರ್ ತಿಂಗಳಲ್ಲಿ, ಡಿಸೆಂಬರ್ ಮೊದಲ ವಾರಗಳಲ್ಲಿ ಸುಮಾರು 3 ಲಕ್ಷ ಭಕ್ತರು ಈ ಮಂದಿರದ ದರ್ಶನಕ್ಕೆ ಬಂದಿದ್ದರು. ಅವರೆಲ್ಲಾ ಖಂಡಿತಾ ಕಾಣಿಕೆ ನೀಡಿರುತ್ತಾರೆ. ಅವೆಲ್ಲಾ ಎಲ್ಲಿಗೆ ಹೋದವು. ಎಂದು ಈ ಅರ್ಚಕರು ಪ್ರಶ್ನಿಸುತ್ತಾರೆ.

ಆರ್.ಕೆ. ಸರ್ಕಾರ್ ಪ್ರಕಾರ ನವಂಬರ್ ತಿಂಗಳಲ್ಲಿ ಒಟ್ಟುವಂತಿಗೆ 60 ಸಾವಿರ ರೂ, ಇದರಲ್ಲಿ ಚಿಲ್ಲರೆ ನಾಣ್ಯಗಳು ಸೇರಿಲ್ಲ, ಇವೇ ಸಮಾನ್ಯವಾಗಿ 10-12 ಸಾವಿರ ರೂ. ಆಗುತ್ತಿತ್ತು. ನವಂಬರ್ 10 ರ ನಂತರ ಎಷ್ಟು ಬಂತೋ ತನಗೆ ಅಂದಾಜಿಲ್ಲ ಎನುತ್ತಾರೆ.

ಸ್ವಾಮಿ ಲಾಲ್‌ದಾಸ್ ಪ್ರಕಾರ ತಿಂಗಳಿಗೆ ಸುಮಾರು 70 ಸಾವಿರ ರೂ ನೋಟುಗಳು, 30-35 ಸಾವಿರ ರೂ. ಚಿಲ್ಲರೆ ನಾಣ್ಯಗಳಲ್ಲಿ ಸಂಗ್ರಹವಾಗುತ್ತಿತ್ತು. ನವಂಬರ್-ಡಿಸೆಂಬರ್ 1992 ರಲ್ಲಿ ಇದು ಇನ್ನೂ ಹೆಚ್ಚಾಗಿರಬೇಕು. ಎನ್ನುತ್ತಾ 'ಧ್ವಂಸ ಕಾರ್ಯಾಚರಣೆ'ಯ ಈ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕು. ಎಂದಿದ್ದಾರೆ.

ಪಕ್ಕದಲ್ಲಿರುವ 'ರಾಮ್‌ಚಬೂತರಾ'ದಲ್ಲಿ ನಾಲ್ಕು 25 ಸೆಂ.ಮೀ. ನ ಒಂದು 105 ಸೆಂ. ಮೀ. ಉದ್ದದ ಅಷ್ಟಧಾತು ವಿಗ್ರಹಗಳಿದ್ದವು ಬಹಳಷ್ಟು ಸಣ್ಣ-ವಿಗ್ರಹಗಳಿದ್ದವು. ಒಂದು ಬೆಳ್ಳಿ ಸಿಂಹಾಸನವೂ ಇತ್ತು. ಅದರ ಮೇಲ್ಭಾಗ ಈಗ ಕಾಣೆಯಾಗಿದೆ. ಅದರೊಳಗೆ ಲಕ್ಷಾಂತರ ಬೆಲೆಬಾಳುವ ಅಮೂಲ್ಯ ರತ್ನಗಳಿದ್ದವು ಎನ್ನುತ್ತಾರೆ ಸ್ವಾಮಿ ಲಾಲ್‌ದಾಸ್.

ಚಬೂತರಾದಲ್ಲಿದ್ದ ಸುಮಾರಾಗಿ ಎಲ್ಲಾ ಮೂರ್ತಿಗಳೂ ಈಗ ಕಾಣೆಯಾಗಿವೆ. ಇಲ್ಲಿನ ಅರ್ಚಕ ವಿದ್ಯಾಸಾಗರ ಪ್ರಮುಖ ಮೂರ್ತಿಯನ್ನೇನೋ ಕಾಪಾಡಿದ್ದಾರಂತೆ. ಆದರೆ ಅದರ ಉಪಾಸನೆ ಸಾಧ್ಯವೇ ಎಂಬ ಭಯ ಅವರಿಗಿದೆ. ಭಯ 'ಕರಸೇವಕ'ರದ್ದು ಎಂದು ಪ್ರತ್ಯೇಕವಾಗಿ ಹೇಳಬೇಕೆ?

'ಹಿಂದುತ್ವ'ದ ಪ್ರಚಾರಕರು ಈ 'ಧ್ವಂಸ ಕಾರ್ಯ'ದಲ್ಲಿ ಸಿಕ್ಕಿ ತೆನ್ನಲಾದ ದೇವಸ್ಥಾನದ ಅವಶೇಷಗಳನ್ನು ಸೇರಿಸಿಟ್ಟ ಜಾಗದಲ್ಲಿ ಇರುವ ಎರಡು ಗಂಟೆಗಳು ಮೊದಲೇ ರಾಮಮಂದಿರದಲ್ಲಿ ಇದ್ದವು. ಒಂದರ ಮೇಲೆ "ಯಶೋದಾ ದೇವಿ" ಎಂದು ಕೆತ್ತಿದ ಸಣ್ಣ ಗಂಟೆಯ ಮೇಲೆ 'ಕಾರ್ಲ್‌ಟನ್ ಹೋಟೆಲ್' ಎಂದು ಕೆತ್ತಿರುವುದು ಕಂಡು ಬರುತ್ತದೆ ಎಂದು ಸ್ವಾಮಿ ಲಾಲ್‌ದಾಸ್ ಹೇಳುತ್ತಾರೆ.

ಬಾಬ್ರಿ ಮಸೀದಿಯಲ್ಲಿದ್ದ ಮೀರ್‌ಬಾಕಿ ಹಾಕಿಸಿದ ಶಾಸನ ಕಾಣೆಯಾಗಿದೆ ಎಂದು ಮೊದಲೇ ವರದಿಯಾಗಿತ್ತು. 'ದೇವರು'ಗಳನ್ನೇ ಲೂಟಿ ಹೊಡೆದ 'ಧರ್ಮಾತ್ಮ'ರು ಇದನ್ನು ಬಿಡುತ್ತಾರೆಯೋ?

'ಅಯೋಧ್ಯಾ ಆಂದೋಲನ'ದ ಮೂಲಕ ರಾಜಕೀಯ ಗದ್ದುಗೆ ಕಸಿದುಕೊಳ್ಳುವ ತರಾತುರಿಯಲ್ಲಿ ಧಾರ್ಮಿಕ ಭಾವನೆಗಳನ್ನು ಮೂಲೆಗುಂಪುಮಾಡಿ ಗೂಂಡಾಗಿರಿಗೆ ಭಾರೀ ಪ್ರೋತ್ಸಾಹ ನೀಡಿದೆ ಎಂಬುದಕ್ಕೆ ಇದು ಇನ್ನೊಂದು ಪುರಾವೆ ಸಾಕೆ.

ಸತ್ವವಿಲ್ಲದ ಕವನ.

ಮನುಕುಲದ ಶಾಪದಿಂದ
ವರ್ಣಾಶ್ರಮ ಧರ್ಮದಿಂದ
ಸಾವಿರಾರು ವರ್ಷಗಳಿಂದ
ಹೊರಬರಲಾರದ ಮನುಜರೇ
ಮತ್ತೇ ಸಾಗುತ್ತೀರಿ ಎಲ್ಲಿಗೇ?
ಸುಳ್ಳುಗಳ ಮಡಲಿಗೆ
ಮೋಸಗಾರರ ಒಡಲಿಗೆ

ಧರ್ಮ ಬೇಕು, ಜಾತಿ ಬೇಕು
ಭಾಷೆ ಬೇಕು ಮನುಷ್ಯನಾಗಿ ಬಾಳು ಬೇಡವೇ
ದೇಶವನ್ನು ಉಳಿಸಬೇಡವೇ:
ಕೇಳುತ್ತಿದೆ ಕಂದಮ್ಮಗಳ, ತಾಯಮ್ಮಗಳ ಕೂಗು
ಅಪ್ಪ ಎಲ್ಲಿ, ಅಮ್ಮ ಎಲ್ಲಿ, ಮಗನೆಲ್ಲಿ, ಮಗಳೆಲ್ಲಿ
ಕೈಕಾಲು ಹೋದವರ, ತಬ್ಬಲಿಯಾದವರ
ಬಾಳು ಯಾತನೆ ಓಣಿಯಲ್ಲಿ

-- ಸಿ.ರಾಮಯ್ಯ, ಬೆಂಗಳೂರು

ನೀವು ಪಡಕೊಂಡದ್ದು ?

ಒಂದ್ನೆದು ಮಡ್ತೋ ಒಂಬೂರು ದೈಡ್ತೋ
ಕರವೆತ್ತಿ ಕೊಟ್ಟವರಿಗೆ ಶಿರಬಾಗಿದವ ಅವನು
ಜೈ ರಾಮ ಅಂದವನು ಯಾ ಅಲ್ಲಾ ಅಂದವನು
ಕೊಡದಿದ್ದರೂ ಕೂಡ ಕೊರಗದವನು.

ಇರಲಿಲ್ಲ ಅವನಿಗೆ ಯಾವುದೇ ತಕರಾರು.
ನಿಮ್ಮ ಮಂದಿರದ ಕೂಡ. ನಿಮ್ಮ ಮಸೀದಿಯ ಕೂಡ.
ನಿಮ್ಮ ಕೂಡ. ಬಹುಶಃ ತನ್ನೊಡನೆ ಕೂಡ.
ನಿನ್ನೆಯ ನೆನಪಿಲ್ಲದೆ, ನಾಳೆಯ ಕನಸಿಲ್ಲದೆ
ಹೊಟ್ಟೆಗೆ ಕುಕ್ಕರುಗಾಲು ಕೊಟ್ಟು, ಮಲಗಿ, ಎದ್ದು
ಮತ್ತೆ ಮಂದಿರಕೋ ಮಸೀದಿಗೋ ತೆವಳುವವನು
ತುತ್ತು ಕೂಳಿಗಾಗಿ. ಈ ಬಿಕನೇಸಿ ಬಾಳಿಗಾಗಿ.

ರಕ್ತ ರುಚಿ ಕಂಡ ನಿಮ್ಮ ಚೂರಿ ಅವನ ಒಳಹೊಕ್ಕಾಗ
ಚಿಲ್ಲೆಂದು ಚಿಲ್ಲುವಷ್ಟು ಕೂಡ ರಕ್ತ ಇರಲಿಲ್ಲ.
ಎದೆ ಎದೆ ಬಡಕೊಂಡು ಕಣ್ಣೀರು ಹಾಕುವರಿಲ್ಲ
ಪರಿಹಾರ ಧನಕ್ಕಾಗಿ ಅರ್ಜಿ ಹಾಕುವರಿಲ್ಲ.
ಹೇ ರಾಮ ಅಂದನೋ ಹಾ ರಹೀಮ ಅಂದನೋ...
ಅಥವಾ ಹಾಗೇ ಮೌನದಲ್ಲಿ ಲಯವಾದನೋ...

ಅವನೊಬ್ಬ ಭಿಕ್ಷುಕ. ಕೇವಲ ಭಿಕ್ಷುಕ ಮಾತ್ರ
ಹೇಳಲು ಹೆಸರಿಲ್ಲದ ಮಹಾನ್ ಭಾರತದ ಪುತ್ರ.
ಅದ್ವಾನಿ-ಜೋಷಿ-ಸಿಂಘಾಲರುಗಳೇ
ಉಮಾಭಾರತೀ-ಸ್ವಾಧ್ವಿ ರಿತ್ತಂಬರಿಗಳೇ
ಪೇಜಾವರಗಳೇ ಮೂರು ಸಾವಿರಗಳೇ

ಆ ಪುರುಷೋತ್ತಮನ ನಾಮ ಜಪ ನಿರತರೇ
ರಾಮನ ಕೆರ ಹೊತ್ತ ಪಥಸಂಚಲನ ಭರತರೇ
ನಿಮ್ಮ ಕರಸೇವೆ ಪಡಕೊಂಡ ಆತ ಕೇಳುತ್ತಾನೆ:
'ನೀವು' ಪಡಕೊಂಡಿದ್ದು ಏನು ಮಹಾಶಯರೇ?

-ಚಂದ್ರಶೇಖರ ಪಾಟೀಲ

ಕಾರ್ಮಿಕ ಸಂಘಟನೆಗಳ ಅಭಿಪ್ರಾಯಗಳಿಗೆ ಹಣಕಾಸು ಮಂತ್ರಿಗಳು ಮಹತ್ವ ನೀಡುತ್ತಾರಂತೆ!

ಬಜೆಟ್ ಮೊದಲಿನ 'ಶಾಟಾಚಾರದ' ಕ್ರಮವಾಗಿ ಹಣಕಾಸು ಮಂತ್ರಿ ಡಾ. ಮನಮೋಹನ್ ಸಿಂಗ್ ಕಾರ್ಮಿಕ ಸಂಘಗಳ ಪ್ರತಿನಿಧಿಗಳೊಂದಿಗೆ ಮಾತನಾಡಿದರು. ಕಾರ್ಮಿಕ ಸಂಘಗಳೊಡನೆ ಸಲಹೆಗಳಿಗೆ ತಾನು ಬಹಳ ಮಹತ್ವ ಕೊಡುತ್ತೇನೆಯಾದ್ದರಿಂದ ಬಜೆಟ್ ಮೊದಲ ಕಸರತ್ತುಗಳನ್ನು ಕಾರ್ಮಿಕ ಸಂಘಗಳ ಮುಖಂಡರೊಡನೆ ಮಾತುಕತೆಗೊಳೊಂದಿಗೇ ಆರಂಭಿಸುತ್ತಿದ್ದೇನೆ ಎಂದು ಇದು ಬರೇ 'ಶಾಟಾಚಾರ'ದ ಸಭೆಯಲ್ಲ ಎಂದು ನಂಬಿಸಲು ಪ್ರಯತ್ನಿಸಿದರು.

ಕಳೆದ ಬಾರಿಯದ್ದು 'ಶಾಟಾಚಾರ'ದ ಮಾತುಕತೆ

ಆದರೆ ಕಳೆದ ಬಾರಿಯ ಇಂತಹ ಸಭೆಯಂತೂ ಬರೇ 'ಶಾಟಾಚಾರ'ದ್ದು ಹೇಗಾಗಿತ್ತು ಎಂದು ಮಧ್ಯಪ್ರವೇಶಿಸಿ ಮಾತನಾಡಿದ ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ. ಫಂದೆ ಉದಾಹರಣೆ ಸಹಿತ ವಿವರಿಸಿದರು. ಹಿಂದಿನ ಬಜೆಟ್ ಮುಂದಿನ ಸಭೆಯ, ಕಾರ್ಮಿಕ ಸಂಘಗಳು ನೀಡಿದ ಒಂದೇ ಒಂದು ಸಲಹೆಯನ್ನು ಗಮನಕ್ಕೆ ತಗೊಳ್ಳಲಿಲ್ಲ, ಆದರೆ ಮಾಲಕರು ನೀಡಿದ ಸುಮಾರಾಗಿ ಎಲ್ಲಾ ಸಲಹೆಗಳನ್ನು ಸರಕಾರ ಸ್ವೀಕರಿಸಿತು ಎಂದರು. ಕಳೆದ ಬಜೆಟ್ ನಂತರದ ಸರಕಾರದ ಕೆಲವು ದೇಶ-ವಿರೋಧಿ ಕೃತ್ಯಗಳನ್ನು ಟೀಕಿಸಿದರು.

- ಬಿ.ಹೆಚ್.ಇ. ಎಲ್. ಗೆ ಯಾವುದೇ ಆರ್ಡರ್ ಒದಗಿಸದೆ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ಬಹುಪಾಲು ತಾಪವಿದ್ಯುತ್ ಹಾಗೂ ಜಲವಿದ್ಯುತ್ ತಯಾರಿಸುವ ಯಂತ್ರಗಳ ಸಾಧನಗಳ ಆರ್ಡರನ್ನು ನೀಡಲಾಯಿತು. ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುರಿಯುವ ನೀತಿಯನ್ನು ಸರಕಾರ ಅನುಸರಿಸಿತು ವಿದೇಶಿ ಕಂಪೆನಿ.
- ಏಶ್ಯಾ ಬ್ರೌನ್ ದೋವೆರಿಗೊ ರೈಲ್ವೇ ಇಂಜಿನ್ ಪೂರೈಕೆಯಲ್ಲಿ ಪಕ್ಷಪಾತ ತೋರಲಾಯಿತು.
- ಉಕ್ಕು ಉದ್ದಿಮೆಯಲ್ಲಿ ಭಾರತೀಯ ಉತ್ಪಾದಕರಲ್ಲಿ ಇಡೀ ದೇಶದ ಬೇಡಿಕೆಯನ್ನು ಪೂರೈಸುವಷ್ಟು ದಾಸ್ತಾನು ಇದ್ದರೂ ಸರಕಾರ ಉಕ್ಕಿನಮೇಲೆ ಆಮದು ಸುಂಕ ಇಳಿಸಿತು. ಇದರಿಂದ ವಿದೇಶಿ ವಿನಿಮಯ ಖೋತಾ ಮಾಡಿಕೊಂಡದ್ದಷ್ಟೇ ಅಲ್ಲ ಭಾರತದ ಉಕ್ಕು ಉದ್ದಿಮೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತೆ ಮಾಡಲಾಗಿದೆ.
- ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕಾಗಿ ತ್ರಿಪಕ್ಷೀಯ ಸಮಿತಿಗಳಲ್ಲಿ ಸರಕಾರ ತಾನು ನೀಡಿದ ಭರವಸೆಗಳನ್ನು ಈಡೇರಿಸಲೇ ಇಲ್ಲ. ಇದರಿಂದ ಹಲವು ಘಟಕಗಳು ಮುಚ್ಚಿ ಹೋಗುವ ಸ್ಥಿತಿಯಲ್ಲೇ ಇವೆ. ಕಚ್ಚಾ ಸಾಮಗ್ರಿಗಳನ್ನು ಖರೀದಿಸಲು ಕೂಡಾ ಕೆಲವು ಹತ್ತಿ ಬಟ್ಟೆ ಹಾಗೂ ಸೆಣಬು ಗಿರಣಿಗಳ ಬಳಿ ದುಡ್ಡಿಲ್ಲದಂತಾಗಿದೆ.

ಸರಕಾರದ ಇಂತಹ ನೀತಿಗಳ ಪಟ್ಟಿ ಮಾಡುತ್ತಾ ಕಾಂ. ಫಂದೆ ಯವರು ಶೇರು ಹಗರಣದ ತನಿಖೆ ನಡೆಸುತ್ತಿರುವ ಜಂಟಿ ಸಂಸದೀಯ ಸಮಿತಿಯ ಬ್ಯಾಂಕುಗಳ ಹೇಳಿಕೆಗಳ ಸೆನ್ಸಾರ್ ಬಗ್ಗೆ ಪ್ರಸ್ತಾಪಮಾಡಿದಾಗ "ಕಾರ್ಮಿಕ ಮುಖಂಡರ ಸಲಹೆಗಳಿಗಾಗಿ ಕಾತುರನಾಗಿದ್ದೇನೆ" ಎಂದಿದ್ದ ಹಣಕಾಸು ಮಂತ್ರಿಗಳು ಆಕ್ಷೇಪ ಎತ್ತಿದರಂತೆ.

ದುಡಿಯುವ ಜನಗಳ ಸಲಹೆ ಸೂಚನೆಗಳು

ಮುಂದಿನ ಬಜೆಟ್ ಬಗ್ಗೆ ಸಿಐಟಿಯು ಕೆಲವು ಸಲಹೆಗಳನ್ನು ಮುಂದಿಟ್ಟಿತ್ತು.

- ದೇಶದ ಆರ್ಥಿಕ ಬೆಳವಣಿಗೆ ಸಂಪನ್ಮೂಲ ಸಂಗ್ರಹಿಸಲು ಕೃಷಿ ಆದಾಯ ತೆರಿಗೆ ಹಾಕಬೇಕು.
- ಖಾಸಾಗಿಯವರ ಕೈಯಲ್ಲಿರುವ ಕಪ್ಪು ಹಣವನ್ನು ಹೊರಗೆಳೆಯುವ ದೇದರಿಕೆಗಳನ್ನು ಹಿಂದೆ ಹಲವು ಬಾರಿ ನೀಡಿದ್ದರೂ ಈ ದಿಕ್ಕಿನಲ್ಲಿ ಏನೂ ಮಾಡಿಲ್ಲ. ಶೇರು ಮಾರುಕಟ್ಟೆಗಳಿಗೂ ಹಣದ ಹೊಳೆ ಹರಿಯುವುದು ನೋಡಿದರೆ ಖಾಸಗೀ ಕೈಗಳಲ್ಲಿ ಅಪಾರ ಹೆಚ್ಚುವರಿ ಹಣಯಿದೆಯೆಂಬುದು ಸ್ಪಷ್ಟ. ಸರಕಾರ ಇದನ್ನು ದೇಶದ ಅಭಿವೃದ್ಧಿಗೆ ಪಡೆಯುವ ವಿಧಾನದ ಬಗ್ಗೆ ಏಕೆ ಯೋಚಿಸುತ್ತಿಲ್ಲ.
- ಆಮದು ಉದಾರೀಕರಣದಿಂದ ವಿದೇಶೀ ವಿನಿಮಯದ ಮೇಲೆ ಭಾರೀ ದುಷ್ಪರಿಣಾಮ ಆಗುತ್ತದೆ. ಅದನ್ನು ನಿಲ್ಲಿಸಬೇಕು.
- ಕಾರ್ಖಾನೆಗಳನ್ನು ಮುಂಚ್ಚೆ ಕಾರ್ಮಿಕರನ್ನು ಹೊರಹಾಕಲು "ರಾಷ್ಟ್ರೀಯ ನವೀಕರಣ ನಿಧಿ" ಸ್ಥಾಪಿಸುವ ಬದಲು ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕೆ ಒಂದು ನಿಧಿ ಸ್ಥಾಪಿಸಬೇಕು. ಕಾರ್ಮಿಕರ ಆಕಾಂಕ್ಷೆಗಳಿಗೆ ದನಿ ನೀಡುತ್ತಾ ಸಿಐಟಿಯು
- ಸಾರ್ವಜನಿಕ ವಲಯದ ಮ್ಯಾನೇಜ್‌ಮೆಂಟ್‌ಗಳು ಒಪ್ಪಿರುವ ಪೆನ್ಶನ್ ಯೋಜನೆಯನ್ನು, ತ್ರಿಪಕ್ಷಿಯ ಸಮಿತಿಗಳ ಶಿಫಾರಸುಗಳನ್ನು ಜಾರಿಗೆ ತರಬೇಕು.
- ಬೋನಸ್ ಮೇಲಿನ ಮಿತಿಯನ್ನು ತೆಗೆಯಬೇಕು.
- ಆದಾಯ ತೆರಿಗೆ ವಿನಾಯ್ತಿ ಮಿತಿ ಏರಿಸಬೇಕು.
- ವಿಶ್ವಬ್ಯಾಂಕಿನಿಂದ ಭಾರೀ ಪ್ರಮಾಣದಲ್ಲಿ ಸಾಲ ಪಡೆಯುತ್ತಿರುವುದನ್ನು ನಿಲ್ಲಿಸಿ ದೇಶವನ್ನು ಸಾಲದ ಬಲೆಯಿಂದ ರಕ್ಷಿಸಬೇಕು.

ಎಂದು ಒತ್ತಾಯಿಸಿತು.

> ಕಳೆದ ಬಾರಿಯಂತೂ ಮಹತ್ವ ನೀಡಿರಲಿಲ್ಲ, ಬದಲಾಗಿ ಮಾಲಕರ ಮಾತುಗಳಿಗೆ ಬೆಲೆ ಕೊಟ್ಟಿದ್ದರು- ಈ ಬಾರಿಯಾದರೂ ನೀಡುತ್ತಾರೆಯೇ? ಕಾರ್ಮಿಕರಿಗಂತೂ ವಿಶ್ವಾಸವಿಲ್ಲ.

ಬಡವರಿಗೆ ಪರಿಹಾರ ನೀಡಿ ಇಲ್ಲವಾದರೆ ಇನ್ನಷ್ಟು ದುಸ್ಥಿತಿ

ಸಿಐಟಿಯು ಅಧ್ಯಕ್ಷ ಇ. ಬಾಲಾನಂದನ್ ಮಾತುಕತೆಗಳ ಸಮಯದಲ್ಲಿ ಮಧ್ಯಪ್ರವೇಶಿ ಮಾತನಾಡುತ್ತಾ ಭಾರತದ ಆರ್ಥಿಕ ನೀತಿಗಳನ್ನು ಅಂತರ್ರಾಷ್ಟ್ರೀಯವಾತಾವರಣದ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರು ಅಂತರ್ರಾಷ್ಟ್ರೀಯ ರಂಗದಲ್ಲಿ ಆರ್ಥಿಕ ಹಿಂಜರಿತ ಇರುವಾಗ ಭಾರತ ಸರಕಾರ ಅನುಸರಿಸುತ್ತಿರುವ "ಉದಾರೀಕರಣ" ದೇಶದ ಆರ್ಥಿಕವನ್ನು ಇನ್ನಷ್ಟು ಸ್ಥಗಿತ ಸ್ಥಿತಿಗೆ ತಳ್ಳುತ್ತಿದೆ ಎಂದರು. ರಸಗೊಬ್ಬರ ಸಬ್ಸಿಡಿ ಕಡಿತ ಮಾಡಿ ಕೃಷಿ ಉತ್ಪನ್ನಗಳ ಬೆಲೆಯೇರಿಸಿ, ಜನಗಳ ಜೀವನಮಟ್ಟ ಕೆಳಗಿಳಿಯುವಂತೆ ಮಾಡಲಾಗುತ್ತಿದೆ, ಬಡತನ ನಿವಾರಣೆ ಯೋಜನೆಗಳಿಗೆಲ್ಲಾ ಹಿನ್ನೆಡೆಯುಂಟಾಗಿದೆ ಎಂದರು. ಸರಕಾರದ ವಿಚಿತ್ರ ನೀತಿಗಳ ಇನ್ನೊಂದು ಉದಾಹರಣೆ ನೀಡುತ್ತಾ ದೇಶದ ಆರ್ಥಿಕ ಮುನ್ನಡೆಗಾಗಿ ವಿದ್ಯುತ್, ಕಲ್ಲಿದ್ದಲು ಹಾಗೂ ಪೆಟ್ರೋಲಿನ ಉತ್ಪಾದನೆಯನ್ನು ಅಗ್ಗಗೊಳಿಸುವ ವಿಧಾನಗಳನ್ನು ಯೋಚಿಸುವ ಬದಲು ಸರಕಾರ 'ಜಾಗತೀಕರಣ'ದ ಹೆಸರಿನಲ್ಲಿ ವಿದೇಶಿ ಕಂಪೆನಿಗಳಿಗೆ ಹೆಚ್ಚು ಲಾಭದ ಗ್ಯಾರಂಟಿ ನೀಡಿ ಇವೆಲ್ಲವನ್ನು ಇನ್ನಷ್ಟು ತುಟ್ಟಿಯಾಗಿಸುತ್ತಿದೆ ಎಂದರು. ದೇಶದೊಳಗಿನ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವ ರೀತಿಯಲ್ಲಿ ನಮ್ಮ ಯೋಜನೆಯಿರಬೇಕೆಂಬ ನೀತಿಯನ್ನು ಬಿಟ್ಟು ಸರಕಾರ ಈ ಸಂಪನ್ಮೂಲಗಳನ್ನು ವಿದೇಶೀ ಕಂಪೆನಿಗಳಿಗೆ ಕೊಡ ಮಾಡಿಸಿ ನಮ್ಮ ಆರ್ಥಿಕವನ್ನು ಇನ್ನಷ್ಟು ಶೋಷಿಸಲು ಅವಕಾಶ ಮಾಡಿಕೊಡುತ್ತಿದೆ ಎಂದರು. ಮುಂಬರುವ ಬಜೆಟ್ ಬಡವರಿಗೆ ಪರಿಹಾರ ನೀಡದಿದ್ದಾರೆ ದೇಶದ ಪರಿಸ್ಥಿತಿ ಇನ್ನಷ್ಟು ಬಿಗಾಡಾಯಿಸುತ್ತದೆ ಎಂದು ಎಚ್ಚರಿಸಿದರು.

ಈ ಸಿ.ಐ.ಟಿ.ಯು ಮುಖಂಡರಲ್ಲದೆ ಇಂಟಕ್‌ನ ಪ್ರಧಾನ ಕಾರ್ಯದರ್ಶಿ ಗೋಪೇಶನ್, ಎ.ಐ.ಟಿ.ಯು.ಸಿ. ಅಧ್ಯಕ್ಷ ಎಂ.ಎಸ್. ಕೃಷ್ಣನ್, ಬಿ.ಎಂ.ಎಸ್.ನ ಪ್ರಧಾನ ಕಾರ್ಯದರ್ಶಿ ಆರ್. ಕೆ. ಭಕ್ತ, ಡಿ.ಯು.ಸಿ.ಸಿ. ಉಪಾಧ್ಯಕ್ಷ ಡಿ.ಡಿ. ಶಾಸ್ತ್ರಿ, ಯುಟಿಯುಪಿ ಲೆನಿನ್ ಸರಣಿ ಅಧ್ಯಕ್ಷ ಪ್ರತೀಶ್ ಚಂದಾ ಹಾಗೂ ಯುಡಿಯುಸಿಯ ಸುನಿಲ್‌ಸೇನ್‌ಗುಪ್ತಾ ಈ ಸಭೆಯಲ್ಲಿ ಮಾತನಾಡಿದರು.

ಕಾರ್ಮಿಕ ಸಂಘಗಳೊಡನೆ ಮಾತುಕತೆಗಳಿಗೆ ಮಹತ್ವ ನೀಡುತ್ತೇನೆನ್ನುವ ಹಣಕಾಸು ಮಂತ್ರಿಗಳು ಈ ಬಾರಿಯಾದರೂ ತಾನು ನಿಜ ಹೇಳುತ್ತಿದ್ದೇನೆ ಎಂದು ಸಾಬೀತು ಪಡಿಸುತ್ತಾರೋ, ಅಥವಾ ಇದೂ ಕೂಡಾ ಇನ್ನೊಂದು 'ಶಾಟಾಚಾರ'ದ ಮಾತು ಆಗಬಹುದೆಂಬ ಕಾರ್ಮಿಕರ ಭಯ ಮತ್ತೊಮ್ಮೆ ನಿಜವಾಗುತ್ತದೋ ಕಾದು ನೋಡೋಣ.

ಬಿಜಾಪುರದಲಿ ಏಕತಾ ಸಂಗ್ರಾಮ ಸಮಿತಿ ರಚನೆ

ಬಾಬ್ರಿ ಮಸೀದಿ ಕೆಡವಿದ ಹಿನ್ನೆಲೆಯಲ್ಲಿ ದೇಶದಲ್ಲುಂಟಾದ ಮತೀಯ ಕ್ಷೋಭೆ, ಜೀವ-ಆಸ್ತಿ-ಪಾಸ್ತಿ ಹಾನಿಯ ಹಿನ್ನೆಲೆಯಲ್ಲಿ ಅಯೋಧ್ಯೆಯ ಸಮಸ್ಯೆಯನ್ನು ಬಿಜೆಪಿ- ಆರ್‌ಎಸ್‌ಎಸ್-ವಿಎಚ್‌ಪಿಗಳೆಲ್ಲಾ ವೈಭವೀಕರಿಸಿ ದೇಶದ ಕೋಮು ಸಾಮರಸ್ಯವನ್ನು ಹಾಳು ಮಾಡುತ್ತಿರುವಾಗ, ದೇಶದಲ್ಲಿ ಏನೂ ನಡೆದೇ ಇಲ್ಲ ಎಂಬಂತೆ ಕಾಂಗ್ರೆಸ್ ಮೌನವಾಗಿರುವಾಗ ಎಡ ಮತ್ತು ರಾಷ್ಟ್ರೀಯ ರಂಗ ಕೇಂದ್ರ ಕಾರ್ಮಿಕ ಸಂಘಟನೆಗಳ ಜೊತೆ ಸೇರಿ ದೇಶದಲ್ಲಿ ಕೋಮು ಸೌಹಾರ್ದತೆ ಕಾಪಾಡಿ, ಐಕ್ಯತೆ ಸಮಗ್ರತೆಯನ್ನು ರಕ್ಷಿಸುವ ಸಲುವಾಗಿ ರಾಷ್ಟ್ರೀಯ ಏಕತಾ ಆಂದೋಲನ ಸಮಿತಿ ರಚಿಸಿ ಹಲವಾರು ತರದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳನ್ನು ಯಶಸ್ವಿಗೊಳಿಸಲು ಕರೆ ನೀಡಿದೆ.

ಬಿಜಾಪುರದಲ್ಲಿ ಕರ್ಪೂರಿಮಠ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಜನತಾದಳ, ಸಿಪಿಐ(ಎಂ), ಸಿಪಿಐ, ಡಿಎಸ್‌ಎಸ್ ಹಾಗೂ ಕಾರ್ಮಿಕ, ವಿದ್ಯಾರ್ಥಿ ಯುವಜನ, ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಜಿಲ್ಲಾ ಮಟ್ಟದ ಏಕತಾ ಸಂಗ್ರಾಮ ಸಮಿತಿಯನ್ನು ರಚಿಸಿ, ಸಹಿ ಸಂಗ್ರಹ, ಜನವರಿ 26ರಂದು ಮಾನವ ಸರಪಳಿ, ಡಿ. 30ರಂದು ಪ್ರತಿಜ್ಞಾ ಸ್ವೀಕಾರದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ನಿರ್ಣಯಿಸಿತು. ಸಿಪಿಐ(ಎಂ) ಮುಖಂಡರಾದ ಎನ್.ಕೆ.ಉಪಾಧ್ಯಾಯ, ಭೀಮಸಿ ಕಲಾದಗಿ, ಪ್ರಕಾಶ ಹಿಟ್ನಳ್ಳಿ ಮೊದಲಾದವರು ಮಾತನಾಡಿ ದಿಲ್ಲಿಯ ಸಮಾವೇಶದ ಮಹತ್ವ ತಿಳಿಸಿ ಹೇಳಿ ಕೂಡಲೇ ಪ್ರಚಾರ ಪ್ರಕ್ರಿಯೆಗೆ ಇಳಿಯಬೇಕೆಂದು ಕರೆ ನೀಡಿದರು.

ಜನ. 13ರಂದು ಧರಣಿ-ಸಹಿ ಸಂಗ್ರಹ ಉದ್ಘಾಟನೆ

ರಾಷ್ಟ್ರೀಯ ಏಕತಾ ಸಂಗ್ರಾಮ ಸಮಿತಿಯ ಕರೆಯ ಮೇರೆಗೆ ಫೆ. 23ರಂದು ರಾಷ್ಟ್ರಾಧ್ಯಕ್ಷರಿಗೆ ಅರ್ಪಿಸುವ ಕೋಮು ಸೌಹಾರ್ದತೆ ಮತ್ತು ಐಕ್ಯತೆ ಕಾಪಾಡುತ್ತೇವೆಂಬ ಮನವಿಯಲ್ಲಿ ಸಹಿ ಸಂಗ್ರಹದ ಉದ್ಘಾಟನೆಯನ್ನು ಹಾಗೆಯೇ ಧರಣಿಯನ್ನು ಜ. 13ರಂದು ಬಿಜಾಪುರದಲ್ಲಿ ಗಾಂಧಿಚೌಕದಲ್ಲಿ ಪ್ರಾರಂಭಿಸಲಾಯಿತು. ಸ್ವಾತಂತ್ರ್ಯಯೋಧ ಶರಣಯ್ಯ ವಸ್ತ್ರ ಅವರು ಸಹಿ ಸಂಗ್ರಹವನ್ನು ಉದ್ಘಾಟಿಸಿದರು. ಸಿಪಿಐ(ಎಂ), ಸಿಪಿಐ, ಜೆಡಿ. ಕಾಂಗ್ರೆಸ್, ಡಿಎಸ್‌ಎಸ್, ಡಿವೈಎಫ್‌ಐ, ರೈತ ಸಂಘ ಮೊದಲಾದ ಸಂಘಟನೆಗಳ ಮುಖಂಡರು ಮತ್ತು ನೀಲಗುಂದ ಸ್ವಾಮಿಗಳು ಧರಣಿಯಲ್ಲಿ ಭಾಗವಹಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಎನ್.ಕೆ.ಉಪಾಧ್ಯಾಯ, ನೀಲಗುಂದ ಸ್ವಾಮಿ, ಭೀಮಸಿ ಕಲಾದಗಿ ಮೊದಲಾದವರು ಭಾಷಣ ಮಾಡಿ ಮತೀಯ ಶಕ್ತಿಗಳ ವಿರುದ್ಧ ತೀವ್ರ ಹೋರಾಟ ನಡೆಸಲು ಕರೆ ನೀಡಿದರು. ಧರಣಿ ಕೂತಲ್ಲಿಯೂ 300ರಷ್ಟು ಮಹಿಳೆಯರು ಸೇರಿ ಎರಡು ಸಾವಿರ ಸಹಿ ಸಂಗ್ರಹಿಸಲಾಯಿತು. ಡಿವೈಎಫ್‌ಐ ಸಂಘಟನೆ ಹತ್ತು ಜನರ ಗುಂಪು ಮಾಡಿ ಮನೆ ಮನೆಗೆ ಹೋಗಿ ಸಹಿ ಸಂಗ್ರಹಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. ರೈತ ಸಂಘದವರು ಗ್ರಾಮಾಂತರ ಪ್ರದೇಶದಲ್ಲಿ ಸಹಿ ಸಂಗ್ರಹ ಪ್ರಾರಂಭಿಸಿದ್ದಾರೆ. ಸೀತಾರಾಂ ಯೆಚೂರಿಯವರು ಬರೆದ "ಖೋಟಾ ಹಿಂದೂವಾದಿಗಳ ನಿಜ ಸ್ವರೂಪ" ಎಂಬ ಪುಸ್ತಕವನ್ನು ಜನ ಉತ್ಸಾಹದಿಂದ ಕೊಂಡು ಓದುತ್ತಿದ್ದಾರೆ. ಎಡ ಪಕ್ಷಗಳ ಈ ಚಳುವಳಿ ಜನರನ್ನು ಆಕರ್ಷಿಸುತ್ತಿದೆ. ಹಾಗೆಯೇ ಪುಸ್ತಕದ ಕುರಿತು ಒಳ್ಳೆ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಹಿಂದೂ ಮುಸಲ್ಮಾನರೊಳಗೆ ಜಗಳ ಹಚ್ಚುವ ದೇಶಾದ್ಯಂತ ದಳ್ಳುರಿಗೆ ಕಾರಣವಾದ, ಮತೀಯ ಕ್ಷೋಭೆ ಹಬ್ಬಿಸುವ ಅಯೋಧ್ಯೆ ರಾಮ ನಮಗೆ ಬೇಡರಿ, ನಮ್ಮ ಊರಲ್ಲೇ ರಾಮ ಮಂದಿರ ಕಟ್ಟುತ್ತೇವೆ ಎಂದು ಕೆಲವು ಹಳ್ಳಿಯವರು ಹೇಳುತ್ತಿರುವಂತೆಯೇ ಇನ್ನು ಕೆಲವು ಹಳ್ಳಿಗಳಲ್ಲಿ ಜನ "ಸುಮ್ಮನೆ ನಮ್ಮಲ್ಲಿ ಜಗಳ ಯಾಕೆ ಹಚ್ಚುತ್ತೀರಪ್ಪಾ, ನಾವು ಹಿಂದೂ. ಮುಸಲ್ಮಾನರೆಲ್ಲಾ ಅಣ್ಣ ತಮ್ಮಂದಿರಂತಿದ್ದೇವೆ. ನಮಗೆ ಬಾಬ್ರಿ ಮಸೀದಿಯೂ ತಿಳಿಯದು. ರಾಮಮಂದಿರವೂ ಗೊತ್ತಿಲ್ಲ. ಅದೆಲ್ಲಾ ಪೇಪರ ಓದಿ ತಲೆಕೆಡಿಸಿಕೊಳ್ಳುವವರಿಗೆ ಸ್ವಾಮಿ. ನಮಗೆ ತಿನ್ನಲಿಕ್ಕೆ ರೊಟ್ಟಿ ಇಲ್ಲ. ನಮ್ಮ ಚಿಂತೆ ನಮಗೆ ಎಲ್ಲಿ ಮಂದಿರ ಎಲ್ಲಿ ಮಸೀದಿ" ಎಂಬ ಉದ್ಗಾರ ತೆಗೆದು ದೇಶದ ಆಗು ಹೋಗುಗಳ ಕುರಿತು ತಮ್ಮ ನಿರ್ಲಿಪ್ತತೆಯನ್ನು ತೋರಿಸಿಕೊಡುತ್ತಿದ್ದಾರೆ. ನಗರ-ಪಟ್ಟಣಗಳಲ್ಲಿ ಆರೆಸ್ಸೆಸ್ ಬಿಜೆಪಿಯವರೆಲ್ಲಾ ಪ್ರಚಾರ ನಡೆಸಿದ್ದಾರೆ. ಸಹಿ ಸಂಗ್ರಹ ಕೂಡ ಪ್ರಾರಂಭಿಸಿದ್ದಾರೆ. ನಮ್ಮವರು ಸಹಿ ತೆಗೆದುಕೊಳ್ಳುವಾಗ ವಿಷಯ ವಿವರಣೆ ನೀಡುತ್ತಾರೆ. ಆರೆಸ್ಸೆಸ್ ಬಿಜೆಪಿಯವರು ಒತ್ತಾಯ ಮಾಡಿ ಸಹಿ ಸಂಗ್ರಹಿಸುತ್ತಿದ್ದಾರೆ.

ವಿವೇಕಾನಂದ ಜನ್ಮ ದಿನಾಚರಣೆ

ವಿಜಾಪುರ : ಡಿವೈಎಫ್‌ಐ ವಿಜಾಪುರ ಜಿಲ್ಲಾ ಸಮಿತಿ ಆಶ್ರಯದಲ್ಲಿ ಜನವರಿ 12ರಂದು ನಗರದಲ್ಲೆಲ್ಲಾ ಕೋಮು ಸಾಮರಸ್ಯಕ್ಕಾಗಿ ಶಾಂತಿ ಯಾತ್ರೆ ಹಾಗೂ ವಿಚಾರ ಸಂಕಿರಣ ಏರ್ಪಡಿಸುವ ಮೂಲಕ ಸ್ವಾಮಿ ವಿವೇಕಾನಂದರ ಜನ್ಮ ದಿನವನ್ನು ಆಚರಿಸಲಾಯಿತು.

ಅಯೋಧ್ಯೆಯ ಘಟನೆಯ ನಂತರ ದೇಶದಲ್ಲಿ ಅಶಾಂತಿ ಉಂಟಾಗಿದ್ದು, ಕೋಮುವಾದಿ ಶಕ್ತಿಗಳು ಈ ದೇಶವನ್ನು ಒಡೆಯಲಿಕ್ಕೆ ಪ್ರಯತ್ನ ನಡೆಸಿದ್ದು, ಕೋಮುವಾದಿಗಳ ದೇಶವನ್ನು ಒಡೆಯುವ ಯತ್ನವನ್ನು ತಡೆಗಟ್ಟಲು ಡಿವೈಎಫ್‌ಐ ಮುಂದಾಗಿದ್ದು, ಕೋಮು ಸಾಮರಸ್ಯವನ್ನು ಸಾರಿದ ಸ್ವಾಮಿ ವಿವೇಕಾನಂದರ ಜನ್ಮ ದಿನದಂದು ನಗರದಲ್ಲಿ ಡಿವೈಎಫ್‌ಐದಿಂದ ಕೋಮು ಸಾಮರಸ್ಯ ಯಾತ್ರೆಯನ್ನು ಎಪಿಎಂಸಿಯಿಂದ ಹೊರಟು ನಗರದ ಪ್ರಮುಖ ರಸ್ತೆಯಲ್ಲಿ ಕೋಮು ಸಾಮರಸ್ಯದ ಘೋಷಣೆಗಳನ್ನು ಮುಗಿಲು ಮುಟ್ಟಿಸುತ್ತಿದ್ದ ಯುವಕರು ನಮ್ಮ ದೇಹಗಳು ಛಿದ್ರವಾದರೂ ಸರಿ ದೇಶವನ್ನು ಛಿದ್ರ ಮಾಡಲಿಕ್ಕೆ ಬಿಡಲಾರೆವು ಎಂಬಿತ್ಯಾದಿ ಘೋಷಣೆಗಳನ್ನು ಕೂಗಿದರು. ನಂತರ ಎನ್‌ಜಿಓ ಭವನದಲ್ಲಿ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

ಮೆರವಣಿಗೆಯ ನೇತೃತ್ವವನ್ನು ಮೈಬೂಬ ಗುಡಗುಂಟಿ, ಶೇಶರಾವ್ ಮಾನಾಧೀಕ ಹಂಚಿನಾಳ, ಯೆಲ್ಲಪ್ಪಾ ಇರಕಲ್ ಬಸೀರ ಹೂಟಗಿ, ದುತ್ತರ ಅಹ್ಮದ್ ಮುಲ್ಲಾ, ಅನುಸೂಯಾ ಕಾಶೆ ಮುಂತಾದವರು ವಹಿಸಿದ್ದರು.

ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಡಿವೈಎಫ್‌ಐ ರಾಜ್ಯ ಸಹ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸ್ವಾಮಿ ವಿವೇಕಾನಂದರು ಒಳ್ಳೆಯ ಆದರ್ಶ ಜೀವಿ ಆಗಿದ್ದರು ಎಂದರು. ಅಲ್ಲದೇ ಎಲ್ಲ ಧರ್ಮಗಳನ್ನು ಸಮಾನವಾಗಿ ಕಾಣುವಂತೆ ಬೋಧಿಸುತ್ತಿದ್ದರು. ಅಲ್ಲದೇ ಬಡವರ ಕಷ್ಟ ಕಾರ್ಪಣ್ಯಗಳ ಬಗ್ಗೆ ಕಳಕಳ ಹೊಂದಿದ್ದಂತ ಮಹಾನುಭಾವರು ಎಂದು ಹೇಳಿದರು. ಕೆಲವು ಕೋಮುವಾದಿಗಳು ಸ್ವಾಮಿ ವಿವೇಕಾನಂದರ ಬಗ್ಗೆ ಯುವ ಜನರಲ್ಲಿ ತಪ್ಪು ತಿಳುವಳಿಕೆಯನ್ನು ಮೂಡಿಸುತ್ತಿದ್ದು ನಾವೆಲ್ಲಾ ಅವರ ಖೋಟಾ ಮುಖವಾಡವನ್ನು ಬಯಲಿಗೆ ಎಳೆದು ಸ್ವಾಮಿ ವಿವೇಕಾನಂದರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಸಭೆಯಲ್ಲಿ ಕೃಷಿ ಕೂಲಿಕಾರರ ರಾಜ್ಯ ಉಪಾಧ್ಯಕ್ಷರಾದ ಜಿ.ಎಸ್.ನಾಗರಾಜ, ಕಾರ್ಮಿಕ ಮುಖಂಡರಾದ ಎನ್.ಕೆ.ಉಪಾಧ್ಯಾಯ, ನಗರಸಭೆಯ ಅಧ್ಯಕ್ಷರಾದ ಶಿವಾನಂದ ಪಾಟೀಲ, ಡಿಎಸ್‌ಎಸ್ ಸಂಚಾಲಕರಾದ ರಾಜು ಅಲಗೂರ ನಿವೃತ್ತ ಪ್ರಾಚಾರ್ಯರಾದ ವಿ.ಎಸ್.ತೊರಗಲ್, ಕೆ.ಎಫ್. ಅಂಕಲಗಿ ಮತ್ತು ಟಿ.ಎಸ್. ಪಡಿತರ ವಕೀಲರು, ರೈತ ಮುಖಂಡ ಭೀಮಸಿ ಕಲಾದಗಿ, ದಲಿತ ವಿಮೋಚನಾ ರಂಗದ ಶ್ರೀಕಾಂತ ಖರಾಬಿ ಹಾಗೂ ಪ್ರಜಾವಾಣಿ ವರದಿಗಾರರಾದ ಬಿ.ಎಂ. ಹನಿಫ್ ಮಾತನಾಡಿ ಕೋಮುವಾದಿ ಶಕ್ತಿಗಳು ಯಾವ ರೀತಿಯಾಗಿ ಸ್ವಾಮಿ ವಿವೇಕಾನಂದರ ಬಗ್ಗೆ ತಪ್ಪು ತಿಳುವಳಿಕೆ ಮೂಡಿಸುತ್ತಿದ್ದರು ಬಗ್ಗೆ ವಿವರಿಸಿದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್‌ಐ) ಇಂತಹ ಕಾರ್ಯಕ್ರಮ ಹಾಕಿಕೊಂಡು ಈ ಸಂದರ್ಭದಲ್ಲಿ ಪ್ರಸ್ತುತ ಇನ್ನೂ ಹೆಚ್ಚಿನ ಕಾರ್ಯಕ್ರಮ ಹಾಕಿಕೊಂಡು ಜನರಿಗೆ ಕೋಮು ಸಾಮರಸ್ಯ ಬಗ್ಗೆ ಹೆಚ್ಚಿನ ತಿಳುವಳಿಕೆ ಕೊಡುವಲ್ಲಿ ಮುಂದಾಗಬೇಕೆಂದು ಕರೆ ನೀಡಿದರು. ಕೃಷಿ ಕಾರ್ಮಿಕರ ರಾಜ್ಯ ಕಾರ್ಯದರ್ಶಿಯವರಾದ ಪಿ.ಜಗನ್ನಾಥ್‌ರವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಮನ್ನೂಸಾಹೇಬ್ ಕಲಾದಗಿ ವಹಿಸಿದ್ದರು. ಕಾರ್ಯದರ್ಶಿ ಸದಾನಂದ ಮೋದಿ ಕಾರ್ಯಕ್ರಮ ನಿರೂಪಿಸಿದರು. ಎಲ್.ವೈ. ಹಂದ್ರಾಳ ಸ್ವಾಗತಿಸಿದರು. ಎಂ.ಎ.ಮೊಕಾಶಿ ವಂದಿಸಿದರು.

"ಮಾನವ ಸರಪಳಿ"

ರಾಷ್ಟ್ರೀಯ ಏಕತಾ ಆಂದೋಳನದ ಕರ್ನಾಟಕ ಸಮಿತಿಯು ಕರೆಗೆ ಓಗೊಟ್ಟು ಬೆಂಗಳೂರಿನಲ್ಲಿ ನಡೆಯಲಿರುವ "ಮಾನವ ಸರಪಳಿ"ಯಲ್ಲಿ ಬೆಂಗಳೂರಿನ ಕಾರ್ಮಿಕರೆಲ್ಲಾ ಕೈ ಜೋಡಿಸಬೇಕು ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ ಇತರ ಕಾರ್ಮಿಕ ಸಂಘಟನೆಗಳು ಸದಸ್ಯರಾಗಿರುವ ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಮನವಿ ಮಾಡಿದೆ.

ಜನವರಿ 10ರಂದು ರಾಜ್ಯಮಟ್ಟದ ಸಮಾವೇಶವೊಂದರಲ್ಲಿ ರಚನೆಗೊಂಡ 'ಕೋಮು ಸಾಮರಸ್ಯ ವೇದಿಕೆ'ಯೂ ಒಂದು ಪತ್ರಿಕಾ ಹೇಳಿಕೆ ನೀಡಿ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿ ಹೇಳಿದೆ.

ನಮ್ಮ ಗಣತಂತ್ರದ ಸಂವಿಧಾನಕ್ಕೀಗ ಬಂದಿದೆ ಫ್ಯಾಸಿಸ್ಟ್ ಬೆದರಿಕೆ

ಬಿಜೆಪಿ -ಆರ್.ಎಸ್.ಎಸ್.-ವಿಹೆಚ್‌ಪಿ ಕೂಟ ಬಾಬ್ರಿ ಮಸೀದಿ ರಾಮಜನ್ಮಭೂಮಿ ಪ್ರಶ್ನೆಯನ್ನು ಸಾಮೂಹಿಕ ಭಾವೋನ್ಮಾದ ಎಬ್ಬಿಸಲು ನಿರ್ಧರಿಸಿದಂದಿನಿಂದ ದೇಶದ ರಾಜಕೀಯದಲ್ಲಿ "ಸಾಧುಗಳ" "ಸಂತ"ರ ಮಹಂಥರ ಗುಂಪುಗಳ ಆಟಾಟೋಪ ಹೆಚ್ಚಿದೆ. ಬಿಜೆಪಿ ಕೂಟವೇ ಅಯೋಧ್ಯೆಗೆ ಸಂಬಂಧಪಟ್ಟಂತೆ ಎಲ್ಲಾ ಕಾರ್ಯಕ್ರಮಗಳ ಯೋಜನೆ ತಯಾರಿಸಿದರೂ ಅದಕ್ಕೊಂದು ಧಾರ್ಮಿಕ ವೇಷ ತೊಡಿಸಲು ಸಾಧು-ಸಂತರುಗಳನ್ನೂ, ಮಹಂತರುಗಳನ್ನೂ ಎದುರಿಗೆ ಇಟ್ಟುಕೊಂಡಿತು. ಇದರಿಂದಾಗಿ ಸರಕಾರದಿಂದ, ಪತ್ರಿಕೆಗಳಲ್ಲಿ ಭಾರೀ ಪ್ರಚಾರ ಗಿಟ್ಟಿಸಿದ ಇವರ ದಾಹ ಇನ್ನೂ ಹೆಚ್ಚಾದಂತೆ ಕಾಣುತ್ತಿದೆ. ಇತ್ತೀಚೆಗೆ ಅವರು ಭಾರತದ ಸಂವಿಧಾನದ ಮೇಲೂ ಧಾಳಿಯಿಟ್ಟಿದ್ದಾರೆ. ಅದು ಹಿಂದೂ- ವಿರೋಧಿಯಾದ್ದರಿಂದ ಅದನ್ನು ಬದಲಿಸಬೇಕು ಎಂದು ಹೇಳಲಾರಂಭಿಸಿದ್ದಾರೆ. ಕೆಲವು ವರ್ಷಗಳ ಹಿಂದೆ ಇಂತಹ ಹೇಳಿಕೆ ನೀಡಿದ್ದರೆ ಹುಚ್ಚುತನ ಎನ್ನುವ ಸ್ಥಿತಿಯಿತ್ತು. ಆದರೆ ಕಳೆದ ಕೆಲವು ತಿಂಗಳ ಘಟನೆಗಳ ಸ್ಥಿತಿಯಿತ್ತು. ಇದು ಭಾರತ ಗಣತಂತ್ರದ ಸಂವಿಧಾನಕ್ಕೆ ಒಡ್ಡಿರುವ ಒಂದು ಗಂಭೀರ ಸವಾಲು.

ಈ ವಿಹೆಚ್‌ಪಿ "ಸಾಧುಸಂತ"ರ ಮತ್ತು ಇತರ ಸಾಧುಸಂತರ ಇತ್ತೀಚಿನ ಹೇಳಿಕೆಗಳಲ್ಲಿ ಎರಡು ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದನೆಯದು - "ಹೊರಗಿನವರ" ಬಗ್ಗೆ ಅಂದರೆ ಮುಖ್ಯವಾಗಿ ಮುಸಲ್ಮಾನರ ಬಗ್ಗೆ ಅವರ ಆಳವಾದ ದ್ವೇಷ ಮತ್ತು ಭಾರತದಲ್ಲಿ ಮುಸಲ್ಮಾನರ ಹೇಳ- ಹೆಸರಿಲ್ಲದಂತೆ ಮಾಡಬೇಕೆಂದು ಅಪೇಕ್ಷೆ, ಎರಡನೆಯದು - ಕಳೆದ ಹಲವು ದಶಕಗಳಲ್ಲಿ ಹಿಂದೂ ಧರ್ಮದೊಳಗೆ ನಡೆದಿರುವ ಸುಧಾರಣೆಗಳನ್ನೆಲ್ಲಾ ಮೂಲೆಗೆಸೆದು ಮತ್ತೆ ಮೂಲಭೂತವಾದಿ "ಹಿಂದೂ ವ್ಯವಸ್ಥೆ"ಯನ್ನು ಅಂದರೆ ಮೇಲು-ಕೀಳುಗಳಿಂದ ಕೂಡಿದ ಅತ್ಯಂತ ದುಷ್ಟ ಜಾತಿ-ಪದ್ಧತಿಗೆ ಹಿಂದಿರುಗುವುದು.

ಜನವರಿ 1ರಂದು ವಿಹೆಚ್‌ಪಿ ಸಾಧುಗಳು ದೆಹಲಿಯ ಜಾಮಾ ಮಸೀದಿ ಕೂಡಾ ಮೂಲತಃ ವಿಷ್ಣು ದೇವಸ್ಥಾನ. ಆದ್ದರಿಂದ ಅದನ್ನು ಹಿಂದಿರುಗಿಸಬೇಕೆಂದು ಒತ್ತಾಯಿಸಿದರು. ದೇಶದಲ್ಲಿ 3 ಸಾವಿರ ಮಸೀದಿಗಳನ್ನು ದೇವಸ್ಥಾನಗಳನ್ನು ಕೆಡವಿ ಮಾಡಲಾಗಿದೆ.ಇವುಗಳಲ್ಲಿ ಮುಖ್ಯವಾದ ಮೂರನ್ನು(-ಅಯೋಧ್ಯೆ ವಾರಣಾಸಿ, ಮಥುರಾ) ಮುಸಲ್ಮಾನರು ತಮ್ಮ ವಶಕ್ಕೆ ಒಪ್ಪಿಸದಿದ್ದರೆ ಒಂದೊಂದಾಗಿ ಎಲ್ಲವನ್ನೂ ವಶಪಡಿಸಿಕೊಳ್ಳಲಾಗುವುದು ಎಂಬ ಬೆದರಿಕೆ ಹಾಕಿರುವುದಲ್ಲದೆ ಸಂವಿಧಾನದ ಮೇಲೂ ಹಲ್ಲೆ ಆರಂಭಿಸಿದ್ದಾರೆ. ಆ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಅಯೋಧ್ಯಾ ಆಂದೋಲನದ ಒಬ್ಬ ಪ್ರಮುಖ ವಾಮದೇವ ಮಹಾರಾಜ್ ಅಕ್ಟೋಬರ್ 13-14ರಂದು ಸಭೆ ಸೇರಿದ 'ಸಂತ ಸಮಿತಿ' ಭಾರತದ ಸಂವಿಧಾನವನ್ನು ಬದಲಿಸಿ ಅದನ್ನೂ ಪುನರ್ರಚಿಸುವ ಬಗ್ಗೆ ನಾಲ್ವರು ಸಾಧುಗಳ ಸಮಿತಿಯನ್ನು ರಚಿಸಿದೆ ಎಂದೂ ತಿಳಿಯಪಡಿಸಿದರು. ಸ್ವಾಮಿ ಮುಕ್ತಾನಂದ ಎಂಬುವರ ಅಧ್ಯಕ್ಷತೆಯಲ್ಲಿದ್ದ ಈ ಸಮಿತಿ ಆಗಲೇ ಸಂವಿಧಾನದ ಬಗ್ಗೆ ಒಂದು 63 ಪುಟಗಳ ಟೀಕೆಯನ್ನು ತಯಾರಿಸಿದ್ದು ಆ ಪತ್ರಿಕಾ ಸಮ್ಮೇಳನದಲ್ಲಿ ಅದನ್ನು ಬಿಡುಗಡೆ ಕೂಡಾ ಮಾಡಲಾಯಿತು.

ಈಗಿನ ನಮ್ಮ ಸಂವಿಧಾನ ಬ್ರಿಟಿಷರು ತಯಾರಿಸಿದ ಕಾನೂನುಗಳ ಮೇಲೆ ನಿಂತಿದೆ. ಆದ್ದರಿಂದ ನಮ್ಮ ಸನಾತನ ಭೂಮಿಯ ಪರಂಪರೆಗೆ ಅನುಗುಣವಾಗಿಲ್ಲವಂತೆ. ಯಾವುದಿದು ಸನಾತನ ಪರಂಪರೆ? ಒಂದು ಉದಾಹರಣೆ ನೋಡಿ - ಈ ಸಾಧು ಸಂತರ ಪ್ರಕಾರ ಯಾರಿಗೂ "ವಿಶೇಷ ಹಕ್ಕು"ಗಳನ್ನು ನೀಡಬಾರದು - ಮುಸಲ್ಮಾನರು, ಕ್ರಿಶ್ಚಿಯನ್ನರು ಮುಂತಾದ ಅಲ್ಪಸಂಖ್ಯಾತರ ಪ್ರಶ್ನೆ ಮಾತ್ರವಲ್ಲ, ಹರಿಜನ-ಗಿರಿಜನರಿಗೆ ಮೀಸಲಾತಿಯ ಪ್ರಶ್ನೆಯೂ ಇರಲೇಬಾರದು! 'ಜನಗಣಮನ' ರಾಷ್ಟ್ರಗೀತೆ ಯಾಕಿರಬೇಕು - ಬದಲಿಗೆ 'ವಂದೇ ಮಾತರಂ' ಆಗಬೇಕು. ನಮ್ಮ ರಾಷ್ಟ್ರೀಯ ಧ್ವಜದಲ್ಲಿ ಅಶೋಕ ಚಕ್ರವನ್ನು ತೆಗೆಯಬೇಕು! ಏಕೆಂದರೆ ಅದು ಒಬ್ಬ ಬೌದ್ಧ ಸಾಮ್ರಾಟನ ಚಿಹ್ನೆ! ಸಾಧು-ಸಂತರು ಜನವರಿ 1 ರಂದು ಬಿಡುಗಡೆ ಮಾಡಿದ ಕಿರು ಪುಸ್ತಕದಿಂದ ಕೆಲವು ಅಂಶಗಳಿವು.

ಈ ಪುಸ್ತಕ 'ಹಿಂದೂ' ಪರ್ಯಾಯ ಸಂವಿಧಾನದ ವಿವರವೇನೂ ನೀಡಿಲ್ಲ. ಆದರೆ ಒಂದಂಶವನ್ನಂತೂ ಸ್ಪಷ್ಟಪಡಿಸಿದೆ. ಭಾರತದಲ್ಲಿ ಭಾರತೀಯ ಪಾಲಕರಿಗೆ ಹುಟ್ಟಿದ ಮಕ್ಕಳಿಗೆ ತಂತಾನೇ ಭಾರತದ ಪೌರತ್ವ ನೀಡಬಾರದಂತೆ. ಮತ್ತೆ ಹೇಗೆ ನೀಡಬೇಕು? "ವಿಧೇಯತೆ ಮತ್ತು ದೇಶಭಕ್ತಿ"ಯ ಆಧಾರದ ಮೇಲೆ! ಈ "ವಿಧೇಯತೆ"ಯನ್ನು ನಿರ್ಧರಿಸುವವರು ಯಾರು? 'ಸಾಧು ಸಂತ'ರಲ್ಲದೆ ಇನ್ನಾರು?

ಈ ವಿಹೆಚ್‌ಪಿ ಸಂತರುಗಳ ಪುಸ್ತಕದಲ್ಲಿ ಅವರ 'ಹಿಂದೂ ರಾಷ್ಟ್ರ'ದ ನಿಜವಾದ ಸ್ವರೂಪದ ಬಗ್ಗೆ ಉದ್ದೇಶಪೂರ್ವಕವಾದ ಅಸ್ಪಷ್ಟತೆಯಿದೆ. ಆದರೆ ಕೆಲವು 'ಸಾಧುಗಳು' ವಿವಿಧ ಸಂದರ್ಶನಗಳಲ್ಲಿ, ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಈ ಬಗ್ಗೆ ಸಾಕಷ್ಟು ಬೆಳಕು ಬೀರುತ್ತವೆ. ಸ್ವಾಮಿ ಮುಕ್ತಾನಂದ ಸರಸ್ವತಿಯವರು 'ಪೇಟ್ರಿಯಾಟ್' ಪತ್ರಿಕೆಗೆ ನೀಡಿದ ಸಂದರ್ಶನದ ಪ್ರಕಾರ ಹಿಂದೂ ಪರಂಪರೆಯಲ್ಲಿ ಯಾವುದೇ ಮೇಲು ಕೀಳುಗಳಿಲ್ಲ. ಆದ್ದರಿಂದ ಜಾತಿ-ಭಾಷೆ- ಧರ್ಮದ ಆಧಾರದಲ್ಲಿ ಮೀಸಲಾತಿ ಇರಲೇಬಾರದು-ಎಲ್ಲರಿಗೂ 'ಸಮಾನ ಕಾನೂನು' ಅಂದರೇನು? ಉದಾಹರಣೆ ನೋಡಿ - "ಈಗ ಒಬ್ಬ ಹಿಂದೂ ಒಂದೇ ಮದುವೆ ಮಾಡಿಕೊಳ್ಳಬಹುದು. ಮುಸಲ್ಮಾನ ನಾಲ್ಕು ಮಾಡಿಕೊಳ್ಳಬಹುದು. ಮದುವೆಯ ಬಗ್ಗೆ ಕಾನೂನು ಏಕಿರಬೇಕು? ಒಬ್ಬ 25 ಹೆಂಡತಿ ಇಟ್ಟುಕೊಳ್ಳುವುದಾದರೆ ಇಟ್ಟುಕೊಳ್ಳಲಿ ಬಿಡಿ' ಇದು ಈ ಸ್ವಾಮಿಗಳ ತರ್ಕ. ಅಂದರೆ 'ಸಮಾನ ಕಾನೂನು' ಎಂದರೆ ಈಗಾಗಲೇ ಹಿಂದೂ ಸಮಾಜದಲ್ಲಿ ಬಾಲ್ಯ ವಿವಾಹ, ವರದಕ್ಷಿಣೆ, ಸತಿ, ಅಸ್ಪೃಶ್ಯತೆ, ಬಹುಪತ್ನಿತ್ವ ಇತ್ಯಾದಿಗಳಿಗೆಲ್ಲಾ ಅವಕಾಶಕೊಡಬೇಕು ಎಂದೇ ಈ ಸ್ವಾಮಿಗಳ ಅರ್ಥ."

ಇನ್ನೂ ವಿಹೆಚ್‌ಪಿಗೆ ಸೇರಿದ ಸಾಧುಸಂತರುಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಆರ್.ಎಸ್.-ಎಸ್.ಗೆ ವರ್ಣಾಶ್ರಮ ಪದ್ಧತಿಯಲ್ಲಿ ನಂಬಿಕೆಯಿಲ್ಲ ಎಂಬುದು ಪುರಿ ಶಂಕರಾಚಾರ್ಯರ ಆಪಾದನೆ - ಆದ್ದರಿಂದ ಅದು ದಿಲ್ಲಿಯಲ್ಲಿ ಅಧಿಕಾರಕ್ಕೆ ಬಂದರೆ 'ಧರ್ಮ ಶಾಸ್ತ್ರ'ಗಳಲ್ಲಿ ತಲೆ ಹಾಕಲು ಅದಕ್ಕೆ ಬಿಡಬಾರದು - ಇದು ಅವರ ಒತ್ತಾಯ. ಬಾಬ್ರಿ ಮಸೀದಿಯ ನಾಶವನ್ನು ಸಮರ್ಥಿಸಿಕೊಳ್ಳುತ್ತಾ ಇನ್ನೊಬ್ಬ ಸ್ವಾಮಿ ಚಿನ್ಮಯಾನಂದ ಎಂಬಾತ "ಬಹುಸಂಖ್ಯಾತ"ರು ಬಯಸಿದರೆ ಸಂವಿಧಾನವನ್ನು ಬದಲಿಸಬೇಕು ಎಂದಿದ್ದಾರೆ. ಅವರ ಪ್ರಕಾರ ಮಸೀದಿ ಒಡೆದವರು "ಬಹುಸಂಖ್ಯಾತ"ರು ಎನ್ನುವಾಗ ಅವರ ಮಾತಿನ ಹಿಂದಿರುವ ಅಪಾಯ ಸ್ಪಷ್ಟ. ಹಿಂದೂ ಧರ್ಮದೊಳಗೆ ಹಲವಾರು ಪಂಗಡಗಳಿರುವುದರಿಂದ ಇನ್ನೂ ಒಂದು 'ಏಕೀಕೃತ ಹಿಂದೂ ಪರ್ಯಾಯ' ಸಂವಿಧಾನ ರೂಪುಗೊಂಡಿಲ್ಲ. ಆದರೆ ಅದರ ಮುಖ್ಯ ಅಂಶವಂತೂ ಸ್ಪಷ್ಟ.

ತಮ್ಮ ಸ್ವಾರ್ಥ ಸಾಧನೆಗಾಗಿ ಈ 'ಸಾಧು ಸಂತರು' ಎಂದೆನಿಸಿಕೊಳ್ಳುವವರಿಗೆ ರಾಜಕೀಯಪ್ರಚಾರದ ರುಚಿ ತೋರಿಸಿದ ಬಿಜೆಪಿ ಈ ಸಾಧು-ಸಂತರ ಈ ಹೊಸ ಆಟಾಟೋಪಗಳ ಬಗ್ಗೆ ಏನೆನ್ನುತ್ತಾರೆ? ಇದರಲ್ಲಿರುವ ಮುಸ್ಲಿಂ-ವಿರೋಧಿ ಅಂಶಗಳ ಬಗ್ಗೆ ಅವರದ್ದೇನೂ ಆಕ್ಷೇಪವಿಲ್ಲ. ಜಾಮಾ ಮಸೀದಿಯನ್ನು ಒಪ್ಪಿಸಬೇಕೆನ್ನುವ ಬಗ್ಗೆ ಬಿಜೆಪಿ ಉಪಾಧ್ಯಕ್ಷ ಸುಂದರ್‌ಸಿಂಗ್ ಭಂಡಾರಿ "ಇನ್ನೂ ಯೋಚನೆ ಮಾಡಿಲ್ಲ"ವೆಂದರೆ ಪ್ರಧಾನ ಕಾರ್ಯದರ್ಶಿ ಗೋವಿಂದಾಚಾರ್ಯ "ಇದು ಸೂಕ್ತವಾದುದಲ್ಲ" ಎಂದರು. ಮುಂದೊಮ್ಮೆ ಈ ಬಗ್ಗೆ ಬಿಜೆಪಿ ಯೋಜನೆ ಮಾಡಬಹುದೋ,

ಡಿಸೆಂಬರ್ 6ರ ನಂತರ ... ಆದರ ಬೆನ್ನ ಹಿಂದೆಯೇ ಈ ಕ... ಅದೇ ವೇಳೆಗೆ ಇದು ಸಂಕುಚಿತ... ನಂಬಿಕೆಗಳ ಸನಾತನ ಪದ್ಧತಿಯ... ಅರಿವಿಗೆ ಬರುತ್ತಿದೆ - ವಿಹೆಚ್‌ಪಿ ... ಬಂದಿರುವ ಈ ಸವಾಲನ್ನು ಎದ...

ಫಂಡ್-ಬ್ಯಾಂಕ್ ಹುಕುಂನ ಪರಿಣಾಮ
ಹಣದುಬ್ಬರ-ವಿದೇಶೀ ವಿನಿಮಯ ಕೊರತೆ ಹೆಚ್ಚಳ

ದೆ ಹಲಿಯ ಚಳಿಗಾಲ ಪ್ರವಾಸಿಗರು ಬರುವ ಸಮಯ. ಆದರೆ ಈ ವರ್ಷ ಪ್ರವಾಸಿಗರುಬಹಳ ಕಡಿಮೆ - ಒಂದು ವಿಭಾಗದ ಪ್ರವಾಸಿಗರನ್ನು ಬಿಟ್ಟರೆ. ಭಾರತದ ಆರ್ಥಿಕತೆಯ ಬಗ್ಗೆ ಕಣಿ ಹೇಳುವ ಅನಿವಾಸಿ ಭಾರತೀಯ ಅರ್ಥಶಾಸ್ತ್ರಜ್ಞರು ಮಾತ್ರ. ಇವರು ಐಎಂಎಫ್-ವಿಶ್ವ ಬ್ಯಾಂಕ್ ಹೊರಿಸಿರುವ 'ಆರ್ಥಿಕ ಸುಧಾರಣೆ'ಯಿಂದ, ದೇಶದಲ್ಲಿ ಹಾಲು-ಜೇನುಗಳ ಹೊಳೆ ಹರಿಯುತ್ತಿದೆ ಎನ್ನುವವರು. ನಮ್ಮ ಪತ್ರಿಕೆಗಳೂ ಇದಕ್ಕೆ ಮಸಾಲೆ ಹಾಕಿ ಬರೆಯುವವರು. 1992ರ ಆರ್ಥಿಕ ಚಿತ್ರ, ಐಎಂಎಫ್-ವಿಶ್ವಬ್ಯಾಂಕ್ ಬೆಂಬಲಿತ 'ಆರ್ಥಿಕ ಸುಧಾರಣೆ' ವಿರೋಧಿಸುವವರನ್ನು ಚಕಿತಗೊಳಿಸಿದೆ ಎಂದೆಲ್ಲಾ ಸಾರುತ್ತಿದ್ದಾರೆ. 1992ರ ಆರ್ಥಿಕ ಚಿತ್ರ ಏನು? ಚಳಿ ಹುಟ್ಟಿಸಿ ನಡುಕ ತರಿಸುವಂತಹುದು. ಮುಂದಿನ ಬಜೆಟ್‌ನ ಕಸರತ್ತುಗಳು ಆರಂಭವಾಗಿರುವಾಗ ಒಂದು ಹಿನ್ನೋಟ.

ಫಂಡ್ ಬ್ಯಾಂಕ್ ಬೆಂಬಲಿಗರ ಡಂಗುರ 1

* ಹಣದುಬ್ಬರದ ದರ ಇಳಿಮುಖವಾಗಿದೆ. ವಾರ್ಷಿಕ ಹಣದುಬ್ಬರದ ದರ ಕೇವಲ ಶೇಕಡಾ 8!!

- ನಿಜವಾದ ಹಣದುಬ್ಬರ ಇನ್ನೂ ಭಯಂಕರ - ಶೇಕಡಾ 14.1 ರಿಂದ 19.3

ಹಣದುಬ್ಬರದ ದರ ಈ ವರ್ಷ ಶೇಕಡಾ 8 ಇದ್ದರೆ, ಕಳೆದ ವರ್ಷದ ಹಣದುಬ್ಬರದ ದರ ಶೇಕಡಾ 15. ನಿರಂತರ ಎರಡು ವರ್ಷ ಈ ರೀತಿಯ ಹಣದುಬ್ಬರದ ಏರಿಕೆ, ಕೆಲವೇ ವರ್ಷಗಳ ಹಿಂದೆ ಅತ್ಯಂತ ಪ್ರತಿಗಾಮಿ ಬೂರ್ಜ್ವಾ ಅರ್ಥ ಶಾಸ್ತ್ರಜ್ಞರೂ ತಲೆಕೆಡಿಸಿಕೊಳ್ಳುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಅಂತಹ ಕಾಳಜಿ ಅಪರೂಪದ ವಸ್ತುವಾಗಿ ಬಿಟ್ಟಿದೆ.

ಹಣದುಬ್ಬರದ ವಾರ್ಷಿಕ ಹೆಚ್ಚಳದ ದರವಷ್ಟೇ ಮುಖ್ಯ ಸೂಚಕವಲ್ಲ. ಕೂಲಿಯ ಹೆಚ್ಚಳದ ದರದ ಜತೆ ಈ ದರವನ್ನು ಇಟ್ಟಾಗ ನಿಜವಾದ ಚಿತ್ರ ಸಿಗುತ್ತದೆ. ಉದಾಹರಣೆಗೆ ಶೇಕಡಾ 8 ಹಣದುಬ್ಬರದ ವಾರ್ಷಿಕ ಹೆಚ್ಚಳದ ಜತೆ ಕೂಲಿ ಸ್ಥಗಿತವಾಗಿರುವ ಸ್ಥಿತಿ ಒಂದು ಕಡೆ. ಶೇಕಡಾ 12 ಹಣದುಬ್ಬರದ ಹೆಚ್ಚಳ ಮತ್ತು ಶೇಕಡಾ 5 ಕೂಲಿಯ ಹೆಚ್ಚಳ ಇನ್ನೊಂದು ಕಡೆ. ಮೊದಲನೆಯ ಸ್ಥಿತಿ ಎರಡನೆಯ ಸ್ಥಿತಿಗಿಂತ ಹೆಚ್ಚು ಕಷ್ಟಕರ ಸ್ಥಿತಿ.

ಈ ವರ್ಷದ ಹಣದುಬ್ಬರದ ಹೆಚ್ಚಳ ಜತೆ ಸ್ಥಗಿತತೆ ಸೇರಿರುವುದು ಭೀಕರಸ್ಥಿತಿ. ಕೂಲಿ ಸ್ಥಗಿತಗೊಂಡಿರುವುದು ಮಾತ್ರವಲ್ಲ ನಿಜ ಮೌಲ್ಯದಲ್ಲಿ ಇಳಿಯುತ್ತಿದೆ. ಇನ್ನೊಂದು ಕಡೆ ಆರ್ಥಿಕ ಸ್ಥಗಿತತೆಯಿಂದ ಆಗಿರುವ ಕಾರ್ಖಾನೆಗಳ ಮುಚ್ಚುವಿಕೆ, ಲೇ-ಆಫ್, ರಿಟ್ರೆಂಚ್‌ಮೆಂಟ್.

ಸರಕಾರದ ಅಂಕೆ-ಸಂಖ್ಯೆಯಲ್ಲಿಯೇ ಸ್ವಲ್ಪ ಗೋಲ್‌ಮಾಲ್ ಇದೆ. ಕಳೆದ ವರ್ಷ ಹಾಗೂ ಈ ವರ್ಷಗಳು ಅದೇ ವಾರದ ಸಗಟು ಬೆಲೆ ತೆಗೆದುಕೊಂಡರೂ ಶೇಕಡಾ 10.6 ಹೆಚ್ಚಳವಾಗಿದೆ. ಈ ದರ ಸಗಟು ಬೆಲೆಗಳ ಮೇಲೆ ಆಧರಿಸಿದ್ದು. ಆದರೆ ಸಾಮಾನ್ಯ ಜನತೆ ತೆರುವ ಬೆಲೆ - ಇನ್ನೂ ಹೆಚ್ಚು.

ಈ ಬೆಲೆಗಳ ಆಧಾರದ ಮೇಲೆ ಹಣದುಬ್ಬರದ ಶೇಕಡಾ 14.1 ಕೃಷಿ ಕೂಲಿಕಾರರು ಎದುರಿಸುವ ಬೆಲೆಯೇರಿಕೆಯ ಆಧಾರದ ಮೇಲೆ ಇದು ಶೇಕಡಾ 19.3

ಇಂತಹ ಪರಿಸ್ಥಿತಿಯಲ್ಲಿ ಹಣದುಬ್ಬರ ಕಡಿಮೆಯಾಗಿದೆ ಎಂದು ಡಂಗುರ ಹೊಡೆಯುವುದು ಕ್ರೂರ ಜೋಕು ಅಲ್ಲವೇ?

ಫಂಡ್ ಬ್ಯಾಂಕ್ ಬೆಂಬಲಿಗರ ಡಂಗುರ -- 2

* ವಿದೇಶೀ ವಿನಿಮಯದ ಕೊರತೆ ಪರಿಸ್ಥಿತಿ ಸುಧಾರಿಸಿವೆ. 1992 ಆಗಸ್ಟ್- ಅಕ್ಟೋಬರ್‌ನಲ್ಲಿ ಕೊರತೆ 1800 ಕೋಟಿ ರೂಗೆ ಇಳಿದಿತ್ತು. ಈ ಬೆಳವಣಿಗೆ ಮುಂದುವರೆಯುವ ಸಂಭವವಿದೆ. ಕೈಗಾರಿಕಾ ಸ್ಥಗಿತತೆ, ಹಣದ ಪೂರೈಕೆ ಅಭಾವದಿಂದ ಸ್ಥಳೀಯ ಮಾರುಕಟ್ಟೆಗೆ ಸಿಗದ ಕೈಗಾರಿಕೋದ್ಯಮಿಗಳು ರಫ್ತು ಹೆಚ್ಚಿಸುತ್ತಾರೆ. ಇದರಿಂದ ವಿದೇಶೀ ವಿನಿಮಯ ಕೊರತೆ ನೀಗಿ ಹೆಚ್ಚುವರಿ ಸಹ ಆಗಬಹುದು!!!

- ಎಂತಹ ಸುಂದರ ಕನಸು! - ಆದರೆ ನನಸು ವಿದೇಶೀ ಸಾಲದ ಹೊರೆ

1990-92ರ ವಿದೇಶೀ ವಿನಿಮಯದ ಕೊರತೆ 10,640 ಕೋಟಿ ರೂ ಆಗಿತ್ತು. ಕಳೆದ ವರ್ಷದ ತೀವ್ರ ಆಮದು ನಿರ್ಬಂಧದಿಂದ 1991-92ರಲ್ಲಿ ಅದು 3835 ಕೋಟಿ ರೂ.ಗಿಳಿದಿತ್ತು. ಆದರೆ ಫಂಡ್ ಬ್ಯಾಂಕ್‌ನ ನಿರ್ದೇಶನದ ಮೇರೆಗೆ ಆಮದು ನಿರ್ಬಂಧ ಕಿತ್ತುಹಾಕಿದ್ದರಿಂದ ಕೊರತೆ ಮೊದಲ ನಾಲ್ಕು ತಿಂಗಳಲ್ಲೇ 5073 ಕೋಟಿ ರೂಗೆ ಏರಿತು. ಆಗಸ್ಟ್-ಅಕ್ಟೋಬರ್‌ನಲ್ಲಿ 1800 ಕೋಟಿ ರೂ ಕೊರತೆ ಇತ್ತು. ಅಂದರೆ ಅಕ್ಟೋಬರ್‌ನವರೆಗೆ ಒಟ್ಟು ಕೊರತೆ 8000 ಕೋಟಿ ... ಇದೇ ಗತಿ ಮುಂದುವರಿದರೂ, ವರ್ಷದ ಕೊನೆಯ ಹೊತ್ತಿಗೆ 12 ಸಾವಿರ ಕೋಟಿ ರೂ ಕೊರತೆ ಗ್ಯಾರಂಟಿ. ಆಗಸ್ಟ್-ಅಕ್ಟೋಬರ್ ಅವಧಿಯ ಕೊರತೆ ಅಪವಾದವಾದರೆ ಒಟ್ಟು ಕೊರತೆ ಇನ್ನೂ ಹೆಚ್ಚಾಗಬಹುದು.

ಈ ಕೊರತೆಯ ಹೆಚ್ಚಳಕ್ಕೆ ಮೂಲ ಕಾರಣ ಆಮದು ನಿರ್ಬಂಧ ಸಡಿಲಿಸಿದ್ದೇ ಎಂಬುದಕ್ಕೆ ಸಂದೇಹವೇ ಇಲ್ಲ. ಏಕೆಂದರೆ ಕಳೆದ ಎರಡು ವರ್ಷಗಳಿಂದ ಕೈಗಾರಿಕೆ ಬೆಳವಣಿಗೆ ದರ ಹೆಚ್ಚು ಕಡಿಮೆ ಸೊನ್ನೆ. ಆದ್ದರಿಂದ ಆಮದು ಕೈಗಾರಿಕಾ ಬೆಳವಣಿಗೆಗೆ ಕಾರಣವಾಗುತ್ತಿದೆ ಎನ್ನುವಂತಿಲ್ಲ. ನಿರ್ಬಂಧವಿಲ್ಲದೆ ಅನಗತ್ಯ ಆಮದು, ವಿದೇಶಿ ವಿನಿಮಯ ಕೊರತೆಗೆ ಕಾರಣವಾಗುತ್ತಿದೆ ಅಷ್ಟೇ!

ಸ್ಥಳೀಯ ಮಾರುಕಟ್ಟೆ ಸಿಗದ ಕೂಡಲೇ ರಫ್ತುಗಳು ಏರಲು ಆರಂಭವಾಗುತ್ತದೆ ಎನ್ನುವುದು ಸುಂದರ ಕನಸಷ್ಟೇ ಎನ್ನಲಿಕ್ಕೆ ಹೆಚ್ಚಿನ ಅರ್ಥಶಾಸ್ತ್ರದ ಜ್ಞಾನದ ಅಗತ್ಯವೂ ಇಲ್ಲ. ಏಕೆಂದರೆ ಜಗತ್ತಿನ ಎಲ್ಲೆಡೆ, ವಿಶೇಷವಾಗಿ ವಿಕಸಿತ ದೇಶಗಳಲ್ಲಿ ತೀವ್ರ ಆರ್ಥಿಕ ಹಿಂಜರಿತವಿದೆ. ಇದರಿಂದಾಗಿ ಆ ದೇಶಗಳಲ್ಲಿ ಆಮದಿನ ಮೇಲೆ ತೀವ್ರ ಪ್ರತಿಬಂಧಗಳಿವೆ. ಮಾರುಕಟ್ಟೆಯೂ ಸ್ಥಗಿತತೆಯಿಂದ ಕುಗ್ಗಿದೆ. ನಿಜವಾದ ರಫ್ತು ಅಂಕೆಸಂಖ್ಯೆಗಳನ್ನು ನೋಡಿದರೂ ಇದು ತಿಳಿಯುತ್ತದೆ. ಇಂಜಿನಿಯರಿಂಗ್ ರಫ್ತು ನವಂಬರ್ ಹೊತ್ತಿಗೆ ಶೇಕಡಾ 10ರಷ್ಟು ಕುಸಿದಿದೆ.

ಇನ್ನೊಂದು ಕಾರಣ. ಫಂಡ್ ಬ್ಯಾಂಕ್ ಬೆಂಬಲಿಗರ ಕಣಿ ನಿಜವಾಗದಿರಲು - ಭಾರತ ತೆಗೆದುಕೊಳ್ಳುತ್ತಿರುವ ಭಾರೀ ಪ್ರಮಾಣದ ಸಾಲಗಳು. ಐಎಂಎಫ್, ಅನಿವಾಸಿ ಭಾರತೀಯರು, ಏಶ್ಯಾ ಅಭಿವೃದ್ಧಿ ಬ್ಯಾಂಕ್, ಇತ್ಯಾದಿ ಸೇರಿ ದೇಶದ ಸಾಲ 12 ಶತಕೋಟಿ ಡಾಲರುಗಳಷ್ಟು ಏರಿದೆ. ಈ ಸಾಲದ ಬಡ್ಡಿ, ಅಸಲು ಮರುಪಾವತಿ ವಿದೇಶೀ ವಿನಿಮಯದ ಕೊರತೆಯನ್ನು ಇನ್ನಷ್ಟು ಹೆಚ್ಚಿಸಲಿದೆ. ಈ ಸಾಲದ ಹೊರೆಯಿಂದಾಗಿ ರಫ್ತು ಹೆಚ್ಚಿಸಿ ಕೈಗಾರಿಕಾ ಬೆಳವಣಿಗೆ ತರುವುದು ಬರಿಯ ಕನಸಷ್ಟೇ!

ಲ್ಯಾಟಿನ್ ಅಮೇರಿಕಾದ ಹೆಚ್ಚಿನ ದೇಶಗಳು ಬಡ್ಡಿ ಸಾಲದ ಕೂಪದತ್ತ ಭಾರತ ಸರಿಯುತ್ತಿದೆ. ಆರ್ಥಿಕ ಸ್ಥಗಿತತೆ, ಕೈಗಾರಿಕಾ ಬೆಳವಣಿಗೆ ಕುಂಠಿತ ಮತ್ತು ಭಾರೀ ಸಾಲದ ಹೊರೆ ಅತೀ ಅಪಾಯಕಾರಿ ಸ್ಥಿತಿ. ಬೆಳವಣಿಗೆ ಇಲ್ಲದ ದಶಕವನ್ನು ಕಳೆದ ಲ್ಯಾಟಿನ್ ಅಮೇರಿಕಾದ ದುಸ್ಥಿತಿ ನಮ್ಮ ಕಣ್ಣು ತೆರೆಸಬೇಕು.

ಖ್ಯಾತ ಕೋಮುವಾದ ಅಲ್ಪಸಂಖ್ಯಾತರ - ವಿರುದ್ಧ ಎಂತಹ ಫ್ಯಾಸಿಸ್ಟ್ ವಿಷ ಹರಡಿದ ಎಂಬುದನ್ನು ಕಾಣುತ್ತಿದ್ದಂತೆಯೇ ವಾದ ಹೇಗೆ ಸಂಕುಚಿತ ಪ್ರಾಂತೀಯವಾದಕ್ಕೂ ನೀರೆರೆದಿದೆ ಎಂದು ಮುಂಬೈಯ ಶಿವಸೇನೆಯ 'ಪ್ರತಾಪಗಳಲ್ಲಿ' ಕಂಡವು ೀಯವಾದಕ್ಕೆ ಮಾತ್ರವಲ್ಲ, ಇಡೀ ದೇಶದ ಬಹುಪಾಲು ಹಿಂದೂಗಳನ್ನು ಶತಮಾನಗಳ ಕಾಲ ದಮನಿಸಿದಷ್ಟು ಕುರುಡು ನುಸ್ಮೃತಿ'ಯನ್ನು ಹೊಲಸು ಜಾತಿಪದ್ಧತಿಯನ್ನು ಮತ್ತೆ ತರುವ ಪ್ರಯತ್ನಗಳನ್ನು ಪೋಷಿಸಿದೆ ಎಂಬುದು ಈಗ ಎಲ್ಲರ ಂತರ ಹೇಳಿಕೆಗಳಿಂದ. ಜಾತ್ಯಾತೀತ ಶಕ್ತಿಗಳು ಭಾರತೀಯ ಗಣತಂತ್ರದ ಸಂವಿಧಾನದ ಹಲವು ಸಕಾರಾತ್ಮಕ ಅಂಶಗಳಿಗೂ ಹು ಎನ್ನುತ್ತಾರೆ 'ಇಂಡಿಯಾ ನ್ಯೂಸ್ ನೆಟ್ ವರ್ಕ್'ನ ಮಾನಿನಿ ಚಟರ್ಜಿ.



ದೊಮ್ಮೆ ಇದು ಸೂಕ್ತವಾಗಬಹುದೋ ಬಗ್ಗೆ ಏನೂ ಹೇಳಲು ಸಿದ್ಧರಿರಲಿಲ್ಲ. ಇನ್ನು ಸಾಧು-ಸಂತರು ಹಿಂದೂ ದ ಒಳಗಿನ ವಿಷಯಗಳ ಬಗ್ಗೆ ವ್ಯಕ್ತ-ಸಿದ ಅಭಿಪ್ರಾಯಗಳ ಬಗ್ಗೆ ಮಾತ್ರ ಪಿ ಮುಖಂಡತ್ವಕ್ಕೆ ಭಾರೀ ಕಸಿವಿಸಿ-ದಂತಿದೆ. ಏಕೆಂದರೆ ಧರ್ಮದ ಹೆಸರ-ಳಸಿ ಇತ್ತೀಚಿನ ವರ್ಷಗಳಲ್ಲಿ ಹಿಂದೂ ಜದ ಕೆಳ ಮತ್ತು ಮಧ್ಯಮ ಜಾತಿಗ- ಅದು ತನ್ನತ್ತ ಆಕರ್ಷಿಸಿದೆ. ಆದ್ದರಿಂದ ರುಗಳು ಬಹಿರಂಗವಾಗಿಯೇ ಪುರಾ- ಬ್ರಾಹ್ಮಣ ಪ್ರಾಬಲ್ಯದ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಘೋಷಿಸಿದರೆ 'ಇಮೇಜ್' ಹೋಗುತ್ತದೆಂಬ ಭಯ ಾವಿಕ ಅಲ್ಲವೇ? ಆದ್ದರಿಂದ ಜಾತಿ ತಿಯನ್ನು ಮತ್ತೆ ಸ್ಥಾಪಿಸಬೇಕೆಂಬ ಅಭಿ-ರುವನ್ನು ಬಿಜೆಪಿ ಒಪ್ಪುವಂತಿಲ್ಲ ಎಂದು ಮು ಭಂಡಾರಿ ಹೇಳಿದರಂತೆ.

ಆದರೆ ಈ ಬಿಜೆಪಿಯ ಈಪ್ರಯತ್ನ ರನ್ನು ಮರಳು ಮಾಡಲು ಸಾಧ್ಯ- ಸಾಮಾನ್ಯ ರಾಜಕೀಯ ದಾರಿ , ಯಾವುದೇ ಜಾಗರೂಕತೆಯಿಲ್ಲದೆ ರ್ಮಿಕ ಭಾವನೆಗಳನ್ನು ತನ್ನ ಲಾಭ- ಉದ್ರೇಕಿಸುತ್ತಾ ಬಂದಿರುವ ಪ್ರಕ್ರಿಯೆ- ಬಿಜೆಪಿಗೆ ಒಂದೆಡೆ 'ಭಜರಂಗದಳ' ನ್ನೊಂದೆಡೆ ಈ 'ಸಾಧುಸಂತರು' ಎರಡು ಂತಿದ್ದರು. ಈಗ ಅವೆರಡೂ ಕೈಗಳು ದೆಂಬಲಕ್ಕೆ ಬೆಲೆ ತೆರಬೇಕೆಂದು ಕೇಳು-ತ್ತಿವೆ. ಭಜರಂಗ ದಳದ 'ಕರಸೇವಕ'ರಂತೂ ಡಿಸೆಂಬರ್ 6ರಂದು ತಮ್ಮ ವಿನಾಶಕಾರೀ ಸಾಮರ್ಥ್ಯ ತೋರಿದರು. ಈಗ "ಸಂತರು ರಾಜಕೀಯ ಅಧಿಕಾರದ ಬಗ್ಗೆ ಅಷ್ಟೇ ಬಲ-ವಾದ ಅಪೇಕ್ಷೆಯನ್ನು ತೋರಿಸುತ್ತಿದ್ದಾರೆ". ವಿಹೆಚ್‌ಪಿಯ ರಾಜಕೀಯದ ರುಚಿ ಕಂಡ ಸಾಧುಸಂತರು ವಿಶ್ವದ ಅತ್ಯಂತ ಹಳೆಯ ಜೀವಂತ ಧರ್ಮವಾದ ಹಿಂದೂ ಧರ್ಮದ ಸಕಾರಾತ್ಮಕ ಅಂಶಗಳತ್ತ ಗಮನ ಹರಿಸದೆ, ಅದರಲ್ಲಿದ್ದ ನಕಾರಾತ್ಮಕ ಅಂಶಗಳ ಮರು-ಸ್ಥಾಪನೆಗೆ ಒತ್ತಾಯಿಸಿದರೆ ಆಶ್ಚರ್ಯಪ-ಡಬೇಕಿಲ್ಲ. ಅವರಿಗೆ ಸ್ಫೂರ್ತಿ ನೀಡು-ವುದು ಉಪನಿಷತ್ತುಗಳಲ್ಲ, ಭಕ್ತಿಪಂಥವಲ್ಲ, ಬ್ರಾಹ್ಮಣ ಪ್ರಧಾನ ಜಾತಿ ವ್ಯವಸ್ಥೆಯನ್ನು-ಪುರುಷ-ಪ್ರಧಾನ ಸಮಾಜ ವ್ಯವಸ್ಥೆಯನ್ನು ಪ್ರತಿಪಾದಿಸುವ "ಮನುಸ್ಮೃತಿ"ಯೇ ಅವರ ಸ್ಫೂರ್ತಿಯ ಸೆಲೆ.

'ಕರಸೇವಕ'ರನ್ನು ತಡೆಯಲು ತನ-ಗಾಗಲಿಲ್ಲ ಎಂದು ಸ್ವತಃ ಅಸಹಾಯ-ಕನಂತೆ ಹೇಳಿಕೊಂಡ ಬಿಜೆಪಿಗೆ ಈಗ ಸಾಧು ಸಂತರುಗಳು ದೇಶದ ಆಳ್ವಿಕೆಯಲ್ಲಿ ಮೂಗುತೂರದಂತೆ ತಡೆಯಲು (ತಡೆಯ-ಬೇಕೆಂದು ಅದು ಬಯಸಿದರೂ ಕೂಡಾ) ಶಕ್ತಿಯಿದೆಯೇ? ಕೋಮು ದೃಷ್ಟಿಕೋಣ, ಮತಾಂಧತೆ, ತರ್ಕ ಹೀನತೆಯೇ ಮೆರೆದಾ-ಡುತ್ತಿರುವ ಈಗಿನ ಸನ್ನಿವೇಶದಲ್ಲಿ ಜಾತ್ಯಾ-ತೀತ ಶಕ್ತಿಗಳು ಅಲ್ಪಸಂಖ್ಯಾತರ ವಿರುದ್ಧ ಫ್ಯಾಸಿಸ್ಟ್ ದ್ವೇಷವನ್ನು ತಡೆಯಲು ಕಟಿಬ-ದ್ಧರಾಗಬೇಕಷ್ಟೇ ಅಲ್ಲ, ದೇಶದಲ್ಲಿ ಬಾಳುವೆ ನಡೆಸುತ್ತಿರುವ ಬಹುಪಾಲು ಹಿಂದೂಗ-ಳಿಗೂ ಕೇಡು ತರಲಿರುವ ಕುರುಡು ಮೂಢನಂಬಿಕೆಗಳ ವಿರುದ್ಧವೂ ಸೆಟೆದು ನಿಲ್ಲಬೇಕು.

ಸಾಮಾನ್ಯ ರಾಜಕೀಯ ದಾರಿ ಬಿಟ್ಟು, ಯಾವುದೇ ಜಾಗರೂಕತೆಯಿಲ್ಲದೆ ಧಾರ್ಮಿಕ ಭಾವನೆಗಳನ್ನು ತನ್ನ ಲಾಭ-ಕ್ಕಾಗಿ ಉದ್ರೇಕಿಸುತ್ತಾ ಬಂದಿರುವ ಪ್ರಕ್ರಿಯೆಯಲ್ಲಿ ಬಿಜೆಪಿಗೆ ಒಂದೆಡೆ 'ಭಜರಂಗದಳ' ಇನ್ನೊಂದೆಡೆ ಈ 'ಸಾಧುಸಂತರು' ಎರಡು ಕೈಗಳಂತಿದ್ದರು. ಈಗ ಅವೆರಡೂ ಕೈಗಳು ತಮ್ಮ ಬೆಂಬಲಕ್ಕೆ ಬೆಲೆ ತೆರಬೇಕೆಂದು ಕೇಳುತ್ತಿವೆ. ಭಜರಂಗ ದಳದ 'ಕರಸೇವಕ'ರಂತೂ ಡಿಸೆಂಬರ್ 6ರಂದು ತಮ್ಮ ವಿನಾಶಕಾರೀ ಸಾಮರ್ಥ್ಯ ತೋರಿದರು. ಈಗ "ಸಂತರು ರಾಜಕೀಯ ಅಧಿಕಾರದ ಬಗ್ಗೆ ಅಷ್ಟೇ ಬಲವಾದ ಅಪೇಕ್ಷೆಯನ್ನು ತೋರಿಸುತ್ತಿದ್ದಾರೆ".



ವಿದ್ಯುತ್ ಕ್ಷೇತ್ರ: ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ

ಮಣಿ



ನರಸಿಂಹರಾವ್ ಸರ್ಕಾರದ 20ನೇ ತಿಂಗಳಲ್ಲಿ

ಅಂತೆ ನವದೆಹಲಿಯಲ್ಲಿ ವಿದ್ಯುತ್ ಕ್ಷೇತ್ರದ ಬಗ್ಗೆ ವಿಚಾರ ಸಂಕಿರಣವೊಂದು ನಡೆಯಿತು. ವಿದ್ಯುತ್ ಆಧು-ನಿಕ ಜೀವನದ ಅವಿಭಾಜ್ಯ ಅಂಗ. ಯಾವುದೇ ಆ ದೇಶ ಆರ್ಥಿಕ ಮುನ್ನಡೆ ಸಾಧಿಸಲು ವಿದ್ಯುತ್ ಬೇಕೆ ಬೇಕು. ಆದರೆ ನಮ್ಮಲ್ಲಿ ನಾವು ಅವಶ್ಯವಿರುವ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸುತ್ತಿಲ್ಲ. ಅಂದರೆ ಬೆಳವಣಿಗೆಗೆ ಇದೂ ಒಂದು ತಡೆ. ಪರಿಹಾರವೇನು? ನಮ್ಮ ಸರ್ಕಾರದ ಅರ್ಥ ಮಂತ್ರಿಗಳ ಪ್ರಕಾರ ವಿದೇಶೀ ಬಂಡವಾಳ ಹೂಡಿಕೆ. ಸರ್ಕಾರಿ ಕ್ಷೇತ್ರವಾಗೇ ಇದ್ದ ಈ ಕ್ಷೇತ್ರ ಇಂದು ಅಸ್ತವ್ಯಸ್ತವಾಗಿದೆ. ರಾಜ್ಯಗಳ ವಿದ್ಯುತ್ ಮಂಡಳಿಗಳು ಹಾನಿ ತೋರುತ್ತಿವೆ. ಇವೆಲ್ಲಕ್ಕೂ ಇವುಗಳ ಸ್ವಾಮ್ಯ ಹೊಂದಿದ್ದ ಸರ್ಕಾರವೇ ಕಾರ-ಣವಾಗಿರಬೇಕಾದರೆ ಈ ಸರ್ಕಾರ ಇದನ್ನು ಹಳೆಯ ವ್ಯವಸ್ಥೆಯ ಮೇಲೆ ಹೊರಿಸುತ್ತಿದೆ.

ಈ ಎಲ್ಲಾ ನೆವಗಳನ್ನು ಮುಂದೆ ಮಾಡಿ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಉದಾರೀಕರಿಸುತ್ತಿದೆ ಇದರಿಂದಾಗಿ ಆಗಬಹುದಾದ ದುಷ್ಪರಿಣಾಮಗಳು.

ಕೃಷಿಗೆ ದೊರೆಯುತ್ತಿದ್ದ ರಿಯಾಯಿತಿ ದರದಲ್ಲಿ ವಿದ್ಯುತ್ ಇದು ಮುಂದೆ ಲಭ್ಯವಾಗುವುದಿಲ್ಲ.

ವಿದ್ಯುತ್ ಬೆಲೆ ಏರಿಕೆ.

ಸರ್ಕಾರ ಹಾತೊರೆಯುತ್ತಿರುವ ವಿದೇಶಿ ಹೂಡಿಕೆ ಧ್ಯದಲ್ಲಿ ಬರುವ ಸಂಭವ ಕಡಿಮೆ (ಅದು ಯಾವತ್ತೂ ಡಿಮೆಯೇ) ಪರಿಣಾಮವಾಗಿ ಉತ್ಪಾದನೆಯಲ್ಲೂ ಚ್ಚಳ ಆಗದೇ ಇರುವುದು.

ಎಲ್ಲವೂ ಖಾಸಗೀಕರಣದಿಂದ ವಿದೇಶೀ ಂಡವಾಳ ಹೂಡಿಕೆಯಿಂದ ಸಾಧ್ಯವೆನ್ನುವ ಸರ್ಕಾರ ೇಶವನ್ನು ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಕೊಂಡೊಯ್ಯುತ್ತಲಿದೆ.

ಮುಂಬಯಿ ಗಲಭೆ ಹಾನಿ 1000 ಕೋಟಿ

ಕೋಮುಗಲಭೆಗಳಿಂದಾಗಿ ದೇಶ ಸಾವಿರಾರು ಕೋಟಿ ರೂಪಾಯಿಗಳ ಹಾನಿ ಅನುಭವಿಸಿತ್ತು. ಈಗ ಮತ್ತೆ ಮುಂಬಯಿಯಲ್ಲಿ ಗಲಭೆಗಳು ಸಂಭವಿಸಿದೆ. ಈ ಗಲ-ಬೆಗಳಿಂದ ಸ್ಥಗಿತಗೊಂಡ ಕೈಗಾರಿಕಾ ಉತ್ಪಾದನೆ, ವ್ಯಾಪಾರ, ರಫ್ತು ಇತ್ಯಾದಿಗಳಿಂದಾಗಿರುವ ಹಾನಿಯ ಮೊತ್ತ 1000 ಕೋಟಿ ರೂಪಾಯಿಗಳಿಗೂ ಮೀರಿದೆ.

ಸರ್ಕಾರಗಳು ಬಹುಶಃ ಮುಕ್ತ ಮಾರುಕಟ್ಟೆಯ ತತ್ವವನ್ನು ಈ ಸ್ಥಿತಿಗಳಿಗೂ ಅನ್ವಯಿಸುತ್ತಿವೆಯೇ ಎಂಬಂತೆ ತೋರುತ್ತಿದೆ. ಕಾನೂನು ಮತ್ತು ವ್ಯವ-ಸ್ಥೆಯ ಪಾಲನೆಗೆ ಸರ್ಕಾರ ಸರಿಯಾದ ಗಮನ ನೀಡಿದ್ದರೆ ಈ ಪ್ರಮಾಣದ ಗಲಭೆಗಳೂ ಆಗುತ್ತಿರ-ಲಿಲ್ಲ, ಈ ಪ್ರಮಾಣದ ಹಾನಿಯೂ ದೇಶದ್ರೋಹಿಗಳ ಕೈಗೆ ಒಪ್ಪಿಸಿ ಕುಳಿತುಕೊಂಡಿದ್ದರಿಂದಲೇ ಈ ಹಾನಿ-ಯಾಗಿದೆ.

ಆದರೆ ಬರುವ ದಿನಗಳಲ್ಲಿ ಈ ಹಾನಿಯನ್ನು ದೇಶದ ಜನಸಾಮಾನ್ಯರು ಹಂಚಿಕೊಂಡು ಅನುಭವಿ-ಸಬೇಕಾಗುತ್ತದಲ್ಲವೆ?

ಉಕ್ಕು ಉದ್ಯಮದಲ್ಲೂ ಹಿನ್ನಡೆ

ಉಕ್ಕು ಎಲ್ಲ ಕೈಗಾರಿಕೆಗಳಿಗೂ ಒಂದಿಲ್ಲೊಂದು ವಿಧದಲ್ಲಿ ಅವಶ್ಯವಿರುವ ವಸ್ತು. ದೇಶದ ಅಭಿವೃದ್ಧಿಯ ಮಟ್ಟವನ್ನೇ ಅಲ್ಲ ಎಷ್ಟು ಉಕ್ಕು ಉಪಯೋಗಿಸಲ್ಪ-ಡುತ್ತದೆ ಎಂಬುದರ ಮೇಲೆಯೇ ಅಳೆಯಲಾಗುತ್ತದೆ. ಅಂತಹ ಉಕ್ಕು ಉದ್ಯಮ ನಮ್ಮ ದೇಶದಲ್ಲಿ ಹಿನ್ನಡೆ ತೋರುತ್ತಿದೆ. ಉಕ್ಕು ಮಂತ್ರಿಗಳು ಈಗ ಉದ್ಯಮಕ್ಕೆ ಹಲವು ರಿಯಾಯಿತಿಗಳನ್ನು ಕೊಡುವ ಮಾತನ್ನಾ-ಡುತ್ತಿದ್ದಾರೆ. ಉದಾರೀಕರಣದ ಫಲವಾಗಿ ಬಂದಿರುವ ಈ ಹಿನ್ನಡೆಗಳು ರಿಯಾಯಿತಿಗಳಿಂದಲೇ ಪರಿಹಾರ-ವಾಗುವ ಸಾಧ್ಯತೆಯಂತೂ ಕಾಣುತ್ತಿಲ್ಲ, ಜನರ ಕಣ್ಣಿಗೆ ... ಬೇಕಲ್ಲವೇ?

'ಆರ್ಥಿಕ ಸುಧಾರಣೆಗಳಿಗೆ ಇನ್ನೂ ಹೆಚ್ಚಿನ ವಿಶ್ವಬ್ಯಾಂಕ್ ನೆರವು ಬೇಕು'

ಇದನ್ನು ನಮ್ಮ ದೇಶದ ಹಣಕಾಸು ಮಂತ್ರಿಗಳು ಹೇಳಿದ್ದಲ್ಲ. ವಿಶ್ವಬ್ಯಾಂಕ್ ಅಂಗ ಸಂಸ್ಥೆಯಾದ ಅಂತರ್‍ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ಈ ಮಾತನ್ನು ಹೇಳಿದೆ. ಸ್ವಲ್ಪ ಮಟ್ಟಿಗೆ ಭಾರತದ ಸುಧಾರಣೆಗ-ಳನ್ನು ಹೊಗಳಿರುವ ಈ ಸಂಸ್ಥೆ ಭಾರತಕ್ಕೆ ಇಂದಿನ ಸಂದರ್ಭದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ 'ಆರ್ಥಿಕ ನೆರವಿನ ಅವಶ್ಯಕತೆಯಿದೆ ಎಂಬ ಶಿಫಾರಸ್ಸನ್ನು ಸಹ ಮಾಡಿದೆ.'

ತಾನು ನೀಡುವ ಪ್ರತಿ ಸಾಲಕ್ಕೂ ಹಲವಾರು ಷರ-ತ್ತುಗಳನ್ನು ಹಾಕುವ ವಿಶ್ವಬ್ಯಾಂಕ್‌ನ ಒಂದು ತಂತ್ರವಿದು. ತನ್ನ ನಿರ್ದೇಶನದಂತೆ ನಡೆದ ಸರ್ಕಾರಗಳ ಕ್ರಮಗಳನ್ನು ತನ್ನ ಹಿಡಿತದಲ್ಲಿರುವ ಹಲವು ಸಂಸ್ಥೆಗಳಿಂದ ಅಧ್ಯಯನ ನಡೆಸಿ ಹೊಗಳಿಸುವುದು. ಹೆಚ್ಚಿನ ಸಾಲಗಳ ಜೊತೆಗೆ ಹೆಚ್ಚಿನ ಷರತ್ತುಗಳನ್ನು ಹೇರುವುದು.

ಬಜೆಟ್ ಖೋತಾ ಕಡಿತ ಎಂಬ ಮರಿಚಿಕೆ

ವಿಶ್ವಬ್ಯಾಂಕ್ ಐ.ಎಂ.ಎಫ್ ನಿರ್ದೇಶನದಂತೆ, ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಹಣಕಾಸಿನ ಖೋತಾ ಪ್ರಮಾಣದಲ್ಲಿ ಕಡಿತವುಂಟು ಮಾಡುವ ಹಲವು ಕ್ರಮ-ಗಳನ್ನು ಕೈಗೊಳ್ಳುತ್ತಲೇ ಇದ್ದಾರೆ. ಅವುಗಳಿಂದ ಈ ಹಣಕಾಸಿನ ಖೋತಾವಂತೂ ಕಡಿಮೆಯಾಗುವ ಲಕ್ಷ-ಣಗಳು ಕಾಣುತ್ತಿಲ್ಲ. ಕಳೆದ ವರ್ಷ ಅಂದರೆ 1991-92 ರಲ್ಲಿ ಶೇ. 6.5 ರಷ್ಟಿದ್ದ ಖೋತಾವನ್ನು 1992-93 ಒಳಗೆ ಶೇ. 5 ಕ್ಕೆ ಇಳಿಸಬೇಕೆಂಬುದು ಸಾಲದಾ-ತರ ನಿರ್ದೇಶನ. ಆದರೆ ಅದು ಸಾಧಿತವಾಗುವಂತೆ ಕಾಣುವುದಿಲ್ಲ. ಈ ಖೋತಾ ಕಡಿತದ ಹೆಸರಿನಲ್ಲಿ ಕೈಗೊಂಡಿರುವ ಕ್ರಮಗಳಂತೂ ದೇಶದ ಜನಸಾಮಾ-ನ್ಯನ ಅಂದರೆ ದುಡಿವ ಬಡಜನರ ಜೀವನವನ್ನು ಹೆಚ್ಚು ದುರ್ಬಲಗೊಳಿಸಿದೆ.

ಮಾರುಕಟ್ಟೆ ಆರ್ಥಿಕತೆ ಬಡತನ ಹೋಗಲಾಡಿಸುವುದಿಲ್ಲ.

ದೇಶದ ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಡಿ.ಎಂ. ನಂಜುಂಡಪ್ಪ ಈ ಮಾತನ್ನು ಹೇಳಿದ್ದಾರೆ. ಹೊಸ ಆರ್ಥಿಕನೀತಿಗಳ ಬಗೆಗಿನ ಸೆಮಿನಾರೊಂದರಲ್ಲಿ ಮಾತ-ನಾಡಿದ ಅವರು ಆದಾಯ ವಿತರಣೆಯಲ್ಲಿ ಸಮಾನತೆ ಸಾಧಿಸುವ ಗುರಿಗಳನ್ನೇ ಈಗ ಬಿಟ್ಟುಕೊಡಲಾಗಿದೆ ಎಂದಿದ್ದಾರೆ. ನಿರುದ್ಯೋಗ ಮತ್ತು ಬಡತನವನ್ನು ಹೋಗಲಾಡಿಸಲು ಪರಿಣಾಮಕಾರಿ ಸರ್ಕಾರದ ಅವ-ಶ್ಯಕತೆಯಿದೆ ಎಂದಿರುವ ಅವರು ಪಾಶ್ಚಾತ್ಯ ದೇಶಗಳು ತಮ್ಮ ರಫ್ತನ್ನು ಹೆಚ್ಚಿಸಿಕೊಳ್ಳುವಲ್ಲಿ ಮಾತ್ರ ಆಸಕ್ತರಾ-ಗಿದ್ದಾರೆ. ಆದ್ದರಿಂದ ಅವರು ಭಾರತದಿಂದ ರಫ್ತನ್ನು ಹೆಚ್ಚಿಸುವ ಮುಖ್ಯ ಗುರಿಯಿಂದ ಸರ್ಕಾರ ಮಾಡಿರುವ ಸುಧಾರಣೆಗಳ ಫಲವೇನು ಎಂದು ನಾವು ಮೋಹನಸಿಂಗರನ್ನು ಕೇಳಬಹುದೇ?

ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಮರು ಸ್ಥಾಪನೆ ಗುರಿ

ಅರೆಫ್ಯಾಸಿಸ್ಟ್ ಆಡಳಿತ ವ್ಯವಸ್ಥೆಯನ್ನು ಕಿತ್ತು ಹಾಕಿ ಪ್ರಜಾಪ್ರಭುತ್ವವನ್ನು ಮರಳಿ ಸ್ಥಾಪಿಸುವುದು, ಮೂಲಭೂತ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯಗಳಿಗೆ ಖಾತರಿ ಒದಗಿಸುವುದು, ಭೀತಿಯಿಲ್ಲದೆ ಮುಕ್ತವಾಗಿ ಮತ ಚಲಾಯಿಸುವ ಹಕ್ಕನ್ನು ಖಾತರಿ ಪಡಿಸುವುದು, ಅರಣ್ಯ ಶಾಸನವನ್ನು ಕಿತ್ತೊಗೆದು ಕಾನೂನುಬದ್ಧ ಆಡಳಿತವನ್ನು ಸ್ಥಾಪಿಸುವುದು......

- ಇವು ತ್ರಿಪುರಾ ರಾಜ್ಯ ವಿಧಾನಸಭೆಗೆ ನಡೆಯುವ ಚುನಾವಣೆಗಳಲ್ಲಿ ಎಡರಂಗ ಮತ್ತು ಅದರ ಮಿತ್ರ ಪಕ್ಷಗಳು ಅಧಿಕಾರಕ್ಕೆ ಬಂದರೆ ಮೊದಲು ಮಾಡಬೇಕಾದ ಗುರಿಗಳಾಗಿವೆ.

ಎಡರಂಗ, ಜನತಾದಳ, ಟಿಎಚ್‌ಪಿಪಿ ಇವುಗಳ ಜಂಟಿ ಚುನಾವಣಾ ಪ್ರಣಾಳಿಕೆಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಎಡರಂಗ ಸಮಿತಿಯ ಸಂಚಾಲಕ ದಶರಥ್ ದೇಬ್ ಈ ಗುರಿ ಸಾಧನೆಯ ದೃಷ್ಟಿಕೋನದ ಬಗ್ಗೆ ವಿವರಣೆ ನೀಡಿದರು.

ಎಡರಂಗ ಮತ್ತು ಅದರ ಮಿತ್ರ ಪಕ್ಷಗಳು ಈಗಾಗಲೇ ಆರಂಭಿಸಿರುವ ಸಾಮೂಹಿಕ ಆಂದೋಲನ ಪ್ರತಿಗಾಮಿಗಳ ಮೂಲವನ್ನು ಆಗಲೇ ಅಲುಗಾಡಿಸತೊಡಗಿದ್ದು ಅಂತಿಮ ಪ್ರಹಾರ ಕೊಡಲು ಮುನ್ನುಗ್ಗುತ್ತಿದ್ದಾರೆ ಎಂದು ದೇಬ್ ಹೇಳಿದರು.

ನಿರ್ಣಾಯಕ ಚುನಾವಣೆ : ಈ ಚುನಾವಣೆ ರಾಜ್ಯದ ಜನರಿಗೆ ನಿರ್ಣಾಯಕವಾದುದಾಗಿದೆ. ಯಾಕೆಂದರೆ ಪ್ರಸಕ್ತ ಕಾಂಗ್ರೆ-ಟಿಯುಜೆಎಸ್ ಮೈತ್ರಿಕೂಟ ಸರಕಾರವನ್ನು ಬದಲಾಯಿಸಿ ಜನಪ್ರಿಯ ಸಂಪುಟಕ್ಕೆ ಅಧಿಕಾರ ವಹಿಸಿಕೊಡುವ ಬಗ್ಗೆ ಜನರು ಪಕ್ಷ ಭೇದವಿಲ್ಲದ ಬಯಕೆ ವ್ಯಕ್ತಪಡಿಸುತ್ತಿದ್ದಾರೆ.

ಮತದಾರರು ಎಡರಂಗ ಮತ್ತು ಅದರ ಬೆಂಬಲಿಗ ಪಕ್ಷಗಳಿಗೇ ಮತ ನೀಡಬೇಕು ಎಂದು ಶೈಲೇನ್ ಮನವಿ ಮಾಡಿಕೊಂಡರು.

ಆದಷ್ಟು ಬೇಗ ಪಂಚಾಯತ್, ಪುರಸಭೆ ಮತ್ತು ಸಹಕಾರಿ ಸಂಘಗಳಿಗೆ ಚುನಾವಣೆಗಳನ್ನು ನಡೆಸುವುದು ಎಡರಂಗ ಜೊತೆ ಮಿತ್ರಕೂಟದ ಚುನಾವಣಾ ಪ್ರಣಾಳಿಕೆಯ ಪ್ರಧಾನ ಅಂಶಗಳಲ್ಲಿ ಒಂದು. ಎಲ್ಲಾ ಸುಳ್ಳು ಮೊಕದ್ದಮೆಗಳನ್ನು ರದ್ದು ಪಡಿಸುವುದು, ಎಲ್ಲಾ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡುವುದು ಇವೇ ಮೊದಲಾದವುಗಳು ಪ್ರಣಾಳಿಕೆಯ ಇತರ ಆಶ್ವಾಸನೆಗಳಾಗಿವೆ.

ರಾಜ್ಯದ ಜನರ ತಕ್ಷಣದ ಹಾಗೂ ಪ್ರಮುಖ ಸಮಸ್ಯೆಗಳು ಚುನಾವಣಾ ಪ್ರಣಾಳಿಕೆಯಲ್ಲಿ ಪ್ರತಿಬಿಂಬಿತವಾಗಿದೆ ಎಂದು ದಶರಥದೇವ್ ಸುದ್ದಿಗಾರರಿಗೆ ತಿಳಿಸಿದರು.

ತನಿಖಾ ಆಯೋಗ ಕಾಂಗ್ರೆ-ಟಿಯುಜೆಎಸ್ ಮೈತ್ರಿಕೂಟ ಅಧಿಕಾರದಲ್ಲಿದ್ದಾಗ ನಡೆದ ಎಲ್ಲಾ ರಾಜಕೀಯ ಸಾಮೂಹಿಕ ಕೊಲೆ ಪ್ರಕರಣಗಳ ಬಗ್ಗೆ ತನಿಖೆ ನಡೆಸಲು ಆಯೋಗವನ್ನು ರಚಿಸಲಾಗುತ್ತದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ದೇವ್ ಹೇಳಿದರು. ಮಹಿಳೆಯರ ವಿರುದ್ಧ ನಡೆದ ದೌರ್ಜನ್ಯದ ಪ್ರಕರಣಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತದೆ ಎಂದರು.

ನಾನ್‌ಗೆಜೆಟೆಡ್ ಪೋಲೀಸರಿಗೆ ಸಂಘ ಕಟ್ಟಿಕೊಳ್ಳುವ ಹಕ್ಕನ್ನು ನೀಡಲಾಗುತ್ತದೆ ಎಂದು ಹೇಳಿದರು.

ವಿವಿಧ ಪಕ್ಷಗಳಿಗೆ ನಾಯಕರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪಂಜಾಬ್ ಸಂಗಾತಿಗಳಿಂದ ನಿಧಿ ಅರ್ಪಣೆ

ಸಿಪಿಐ(ಎಂ) ತ್ರಿಪುರಾ ಚುನಾವಣಾ ನಿಧಿಗೆ ಪಕ್ಷದ ಪಂಜಾಬ್ ರಾಜ್ಯ ಸಮಿತಿ 80000 ರೂಗಳನ್ನು ನೀಡಿದೆ. ಈ ಮೊತ್ತವನ್ನು ರಾಜ್ಯ ಕಾರ್ಯದರ್ಶಿ ಮಂಗತ್ ರಾಮ್ ಪಾಸ್ಲಾ ಪೊಲಿಟ್‌ಬ್ಯೂರೋ ಸದಸ್ಯ ಇ.ಬಾಲಾನಂದನ್ ಅವರಿಗೆ ಹಸ್ತಾಂತರಿಸಿದರು.

ಕಳೆದ ವರ್ಷ ಡಿಸೆಂಬರ್‌ನಲ್ಲಿ ನಿಧನರಾದ ಪಕ್ಷದ ಹಿರಿಯ ನಾಯಕ ದಲೀಪ್ ಸಿಂಗ್ ಜೋಹಾಲ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಏರ್ಪಡಿಸಲಾದ ಸಾರ್ವಜನಿಕ ಸಭೆಯಲ್ಲಿ (ಜನವರಿ 10) ತ್ರಿಪುರಾದ ಪಕ್ಷಕ್ಕೆ ಬೆಂಬಲವಾಗಿ ಹಣವನ್ನು ನೀಡಲಾಯಿತು. ಇನ್ನೂ ಹಣ ಸಂಗ್ರಹ ಕಾರ್ಯ ಮುಂದುವರಿದಿದೆ ಎಂದು ಪಾಸ್ಲಾ ಪ್ರಕಟಿಸಿದರು.

ಕೊರೆಯುವ ಚಳಿ ಹಾಗೂ ಮಳೆಯನ್ನು ಲೆಕ್ಕಿಸದೆ ಸುಮಾರು 5000 ಜನರು ಸಭೆಯಲ್ಲಿ ಭಾಗವಹಿಸಿದ್ದರು. ಅಗಲಿದ ನಾಯಕನಿಗೆ ಗೌರವ ಸೂಚಿಸಲು ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

1934ರಲ್ಲೇ ಕಮ್ಯುನಿಸ್ಟ್ ಚಳುವಳಿಯನ್ನು ಸೇರಿದ್ದ ಜೊಹಾಲ್ ರಾಜ್ಯದಲ್ಲಿ ಪಕ್ಷದ ಪ್ರಮುಖ ನಾಯಕರಲ್ಲಿ ಒಬ್ಬರಾಗಿದ್ದರು.

ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರ ಕಂಡುಕೊಳ್ಳುವಂತೆ ಇ. ಬಾಲಾನಂದನ್ ಸಭೆಯಲ್ಲಿ ಕರೆ ನೀಡಿದರು. ಸರಕಾರ ಕೇವಲ ಆಡಳಿತಾತ್ಮಕ ಕ್ರಮಗಳನ್ನು ಅವಲಂಬಿಸಿರುವುದನ್ನು ಅವರು ಟೀಕಿಸಿದರು. ಭಾರತದ ಏಕತೆಯನ್ನು ನಾಶ ಮಾಡಲು ಯತ್ನಿಸುತ್ತಿರುವ ದೇಶದ್ರೋಹಿ ಕೋಮುವಾದಿ ಶಕ್ತಿಗಳ ಆಟಗಳನ್ನು ವಿಫಲಗೊಳಿಸುವಂತೆ ಇ.ಬಾಲಾನಂದನ್ ಕರೆ ನೀಡಿದರು.

ಸರಕಾರದ ಆರ್ಥಿಕ ನೀತಿಗಳು ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಏಕಕಾಲದಲ್ಲಿ ಹೋರಾಟ ನಡೆಸುವಂತೆ ಮಂಗತ್ ರಾಮ್ ಪಾಸ್ಲಾ ಕರೆ ನೀಡಿದರು.

ಸತ್ಯಾಗ್ರಹ

ಜನವರಿ 27ರಂದು ಪುನರಾರಂಭವಾಗಲಿರುವ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಪಾಸ್ಲಾ ಮನವಿ ಮಾಡಿದರು. ಪಂಜಾಬ್ ಸಮಸ್ಯೆಗೆ ಸಮಗ್ರ ರಾಜಕೀಯ ಪರಿಹಾರ ಕಂಡುಹಿಡಿಯಬೇಕು ಎಂದು ಒತ್ತಾಯಿಸಿ ರಾಜ್ಯದಲ್ಲಿ ಸಿಪಿಐ(ಎಂ) ಕಳೆದ ವರ್ಷ 27 ರಂದು ಸತ್ಯಾಗ್ರಹ ನಡೆಸಿದ್ದನ್ನು ನೆನಪಿಸಿಕೊಳ್ಳಬಹುದು.

ಕೋಮು ಸೌಹಾರ್ದಕ್ಕೆ ಒಂದೇ ದಿನ 80 ಬೃಹತ್ ಸಭೆ


ಪಶ್ಚಿಮ ಬಂಗಾಳದಲ್ಲಿ ಕೋಮುವಾದಿ ವಿರೋಧಿ ಆಂದೋಳನವನ್ನು ತುಂಬಾ ಕಳಕಳಿಯಿಂದ ನಡೆಸಲಾಗುತ್ತಿದೆ. ಉತ್ತರ 24 ಪರಗಣ ಜಿಲ್ಲೆಯೊಂದರಲ್ಲೇ ಒಂದೇ ದಿನ(ಜನವರಿ 10) 80 ಬೃಹತ್ ಸಾರ್ವಜನಿಕ ಸಭೆಗಳನ್ನು ನಡೆಸಲಾಯಿತು.

ಎಡರಂಗ ಜಿಲ್ಲೆಯಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಜನರ ಭಾಗವಹಿಸುವಿಕೆ ಪ್ರೋತ್ಸಾಹದಾಯಕವಾಗಿತ್ತು.

ರಾಜ್ಯದ ಸಚಿವರಿಂದ ಸುಭಾಷ್ ಚಕ್ರವರ್ತಿ, ಡಾ.ಅಶೀಮ್ ದಾಸ್‌ಗುಪ್ತಾ, ಸಂಸತ್ ಸದಸ್ಯರಾದ ಸೋಮನಾಥ ಚಟರ್ಜಿ, ದಿಪೇನ್ ಘೋಷ್, ಸುಕೋಮಲ್ ಸೇನ್, ತಾರಿತ್ ತೋಪದಾರ್, ಫಾರ್ವರ್ಡ್ ಬ್ಲಾಕ್ ನಾಯಕ ಚಿತ್ತ ಬಸು ಮತ್ತು ಇತರರು ವಿವಿಧ ಕಡೆಗಳಲ್ಲಿ ಸಭೆಗಳನ್ನುದ್ದೇಶಿಸಿ ಮಾತನಾಡಿದರು.

'ಗಣ ಶಕ್ತಿ' 26 ನೇ ವಾರ್ಷಿಕೋತ್ಸವ

ಪಕ್ಷದ ಪಶ್ಚಿಮ ಬಂಗಾಳ ಘಟಕದ ಮುಖವಾಣಿ 'ಗಣಶಕ್ತಿ'ಯ 26 ನೇ ವಾರ್ಷಿಕೋತ್ಸವ ಸಮಾರಂಭ ಜನವರಿ ಏಳರಂದು ಕಲ್ಕತ್ತದಲ್ಲಿ ನಡೆಯಿತು. ಸಭೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಜ್ಯೋತಿಬಸು ಮಾತನಾಡಿದರು. ಪತ್ರಿಕೆಯ ಮುಖ್ಯ ಸಂಪಾದಕ ಅನಿಲ್ ಬಿಶ್ವಾಸ್ ಕೂಡಾ ಈ ಸಂದರ್ಭದಲ್ಲಿ ಮಾತನಾಡಿದರು. ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಶೈಲೇನ್ ದಾಸ್‌ಗುಪ್ತಾ ಅಧ್ಯಕ್ಷತೆ ವಹಿಸಿದ್ದರು.



ವಿಶ್ವ

ವ್ಯಾಪಕ ಅಭಿಯಾನಕ್ಕೆ ಎಲ್.ಡಿ.ಎಫ್ ನಿರ್ಧಾರ

ಕೋಮುವಾದಿ ಶಕ್ತಿಗಳ ವಿರುದ್ಧದ ರಾಜ್ಯವ್ಯಾಪಿಯಾದ ಆಂದೋಳನದಲ್ಲಿ ಎಲ್ಲಾ ಜಾತ್ಯತೀತ ವಿಭಾಗಗಳನ್ನು ಅಣಿನೆರೆಯಿಸಲು ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ನಿರ್ಧರಿಸಿದೆ.

ಡಿಸೆಂಬರ್ 19 ರಂದು ದೆಹಲಿಯಲ್ಲಿ ನಡೆದ 11 ಪಕ್ಷಗಳು, 30[illegible] ಹೆಚ್ಚು ಸಾಮೂಹಿಕ ಸಂಘಟನೆಗಳು ಹಾಗೂ ಪ್ರಮುಖ ವ್ಯಕ್ತಿಗಳ ಸಮಾವೇಶ ಅಂಗೀಕರಿಸಿದ ನಿರ್ಣಯಕ್ಕೆ ಅನುಗುಣವಾಗಿ ಈ ಚಳವಳಿ ನಡೆಯಲಿದೆ.

ರಾಜ್ಯ ಮಟ್ಟದ ಸಮಾವೇಶ, ಜಿಲ್ಲಾ ಮಟ್ಟದ ರ‍್ಯಾಲಿಗಳು, ಪ್ರತಿಜ್ಞೆ ಸ್ವೀಕಾರ ಮೊದಲಾದ ಕಾರ್ಯಕ್ರಮಗಳು ನಡೆಯಲಿವೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರತ್ಯೇಕವಾದ ಪ್ರಚಾರ ಚಳುವಳಿಯನ್ನು ನಡೆಸಲಾಗುವುದು ಎಂದು ಲಾರೆನ್ಸ್ ಸುದ್ದಿಗಾರರಿಗೆ ವಿವರಿಸಿದ್ದಾರೆ.



ಕೆರೆಕೋಣದಲ್ಲಿ ಯಶಸ್ವಿ ಪಂದ್ಯಾಟ

ಕೆರೆಕೋಣ : ಇತ್ತೀಚೆಗೆ ಕೆರೆಕೋಣ ಡಿವೈಎಫ್‌ಐ ಘಟಕದ ಆಶ್ರಯದಲ್ಲಿ ಹೊನ್ನಾವರ ತಾಲೂಕು ಮಟ್ಟದ ವಾಲಿಬಾಲ್ ಪಂದ್ಯಾಟ ಯಶಸ್ವಿಯಾಗಿ ನಡೆಯಿತು.

ಉದ್ಘಾಟಕರಾಗಿ ಆಗಮಿಸಿದ ಪಿ.ವಿ.ಭಟ್ಟ ಮಾತನಾಡಿ ಕ್ರೀಡೆ ಎಂದರೆ ಕೆಲಸವಿಲ್ಲದ ಹುಡುಗರು ಮೋಜಿಗಾಗಿ ನಡೆಸುವ ನಿರುಪಯೋಗಿ ಕ್ರಿಯೆ ಎಂದು ಭಾವಿಸಿದ್ದ ಇಂಥ ಗ್ರಾಮೀಣ ಪ್ರದೇಶದಲ್ಲಿ ಎರಡು ದಿನಗಳ ಕಾಲ ಈ ರೀತಿಯ ಕಾರ್ಯಕ್ರಮ ಹಮ್ಮಿಕೊಂಡಿರುವುದು ನಿಜವಾಗಿಯೂ ಶ್ಲಾಘನೀಯವಾದುದು ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆಲೂ ಮರಾಠಿ ಹೇಳಿದರು.

ಎರಡನೇ ದಿನದ ಅಂತ್ಯದಲ್ಲಿ ನಡೆದ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಡಾ.ಎಂ.ಜಿ. ಹೆಗಡೆ ವಹಿಸಿದ್ದರು. ಮುಖ್ಯ ಅ[illegible]ಗಳಾಗಿ ಬಿ.ಜೆ. ಚವ್ಹಾಣ, ಸುರೇಶ ನಾಯ್ಕ [illegible]ಗಾಟ ಕಲಾವಿದ ಶ್ರೀಪಾದ ಭಟ್ಟ ಆಗಮಿಸಿ[illegible] ಕ್ರೀಡೆ ಏಕಕಾಲದಲ್ಲಿ ಮನುಷ್ಯನ ದೈಹಿಕ [illegible] ಮಾನಸಿಕ ಬಲವರ್ಧನೆಗೆ ಸಹಾಯ[illegible] ಎಂದು ಹೇಳಿದ ಚವ್ಹಾಣರವರು [illegible]ಂದಲೂ ಕ್ರೀಡೆಗೆ ಸಂದ ಪ್ರಾಶಸ್ತ್ಯವನ್ನು ವಿವರಿಸಿದರು.

ಮಹೇಶಭಂಡಾರಿ ಸ್ವಾಗತ ಕೋರಿ ವಂದನೆ ಸಲ್ಲಿಸಿದ್ದು ಘಟಕದ ಉಪಾಧ್ಯಕ್ಷ, ಮಲ್ಲು ನಾಯ್ಕ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಪಂದ್ಯಾಟವನ್ನು ಹಳದೀಪುರ ತಂಡ, ಜಡ್ಡಿಗದ್ದೆ ತಂಡ, ಹೊನ್ನಾವರ ತಂಡ ಮತ್ತು ಹಳಗೇರಿ ತಂಡಗಳು ಅನುಕ್ರಮವಾಗಿ ಒಂದು, ಎರಡು, ಮೂರು ಮತ್ತು ನಾಲ್ಕನೇ ಬಹುಮಾನವನ್ನು ಪಡೆದರು. ಮೊದಲ ಬಹುಮಾನ ಪಡೆದ ತಂಡಕ್ಕಿರುವ ರೋಲಿಂಗ್ ಕಪ್‌ನ್ನು ಹಳದೀಪುರ ತಂಡದವರು ಪಡೆದರು.

ಕೇಂದ್ರ ಸಚಿವರಿಗೆ ಮನವಿ ಅರ್ಪಣೆ

ವಿಜಾಪುರ : ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಶೀಘ್ರ ಸ್ಥಾಪಿಸುವಂತೆ ಆಗ್ರಹಪಡಿಸುವ ಮನವಿಯೊಂದನ್ನು ಡಿವೈಎಫ್‌ಐ ವಿಜಾಪುರ ಜಿಲ್ಲಾ ಸಮಿತಿ ಇತ್ತೀಚೆಗೆ ಇಲ್ಲಿಗೆ ಆಗಮಿಸಿದ್ದ ಕೇಂದ್ರ ಕಲ್ಲಿದ್ದಲು ಖಾತೆ ಸಹಾಯಕ ಸಚಿವ ಸಿದ್ದು ನ್ಯಾಮಗೌಡ(ಈಗ ಅವರು ಸಚಿವರಾಗಿಲ್ಲ) ಅವರಿಗೆ ಮನವಿ ಪತ್ರವೊಂದನ್ನು ಅರ್ಪಿಸಿತು.

ಜಿಲ್ಲಾ ಸಮಿತಿ ಕಾರ್ಯದರ್ಶಿ ಸದಾನಂದ ಮೋದಿ ನೇತೃತ್ವದ ನಿಯೋಗ ಸಚಿವರನ್ನು ಭೇಟಿಯಾಗಿ ಮನವಿಯನ್ನು ಒಪ್ಪಿಸಿ ಕೇಂದ್ರದ ಮೇಲೆ ಒತ್ತಡ ತರುವಂತೆ ಆಗ್ರಹಪಡಿಸಿತು.

ಎಸ್‌ಎಫ್‌ಐ ರಾಯಚೂರು ಜಿಲ್ಲಾ ಸಮ್ಮೇಳನ

ರಾಯಚೂರು : ಎಸ್‌ಎಫ್‌ಐನ 9ನೇ ರಾಯಚೂರು ಜಿಲ್ಲಾ ಸಮ್ಮೇಳನ ಯಲಬುರ್ಗಾ ತಾಲೂಕಿನಲ್ಲಿ ಬಸವ ಸಮುದಾಯದಲ್ಲಿ ಜನವರಿ 5 ಮತ್ತು 6ರಂದು ನಡೆಯಿತು. ಧ್ವಜಾರೋಹಣವನ್ನು ಎಸ್‌ಎಫ್‌ಐನ ಜಿಲ್ಲಾ ಅಧ್ಯಕ್ಷರಾದ ಪ್ರಭುಗೌಡ ಪಾಟೀಲರವರು ನೆರವೇರಿಸಿದರು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕಾ ಅಧ್ಯಕ್ಷ ಶಿವನಗೌಡ ಪಾಟೀಲ ವಹಿಸಿದ್ದರು. ರಾಷ್ಟ್ರದ ಐಕ್ಯತ ಸಮಗ್ರತೆಗಾಗಿ ವಿದ್ಯಾರ್ಥಿಗಳು ಶ್ರಮಿಸಬೇಕೆಂದು ಸಮ್ಮೇಳನವನ್ನು ಉದ್ಘಾಟಿಸುತ್ತಾ ಬಿ.ಲಿಂಗಪ್ಪ ಕರೆ ನೀಡಿದರು. ಸರಕಾರಿ ಕಿರಿಯ ಕಾಲೇಜ್ ಪ್ರಾಚಾರ್ಯ ಜೆ.ಎಂ.ಲಂಗೋಟಿ ಮತ್ತು ಕೃಷ್ಣ ಕುಲಕರ್ಣಿ ಉಪನ್ಯಾಸಕರು, ವಿದ್ಯಾನಂದ ಗುರುಕುಲ ಕಾಲೇಜ್ ಕುಕನೂರು ಇವರು ಹಿಂದೂಗಳೇ ಮೊದಲು ಗುಡಿಗಳನ್ನು ಹಾಳು ಮಾಡಿದ್ದರು. ಜಾತ್ಯಾತೀತ ರಾಷ್ಟ್ರದಲ್ಲಿ ಯಾವುದೇ ಗುಡಿ ಇರಲಿ ಅದನ್ನು ಕೆಡವುವುದು ತಪ್ಪು ಎಂದು ಹೇಳಿದರು. ಎಸ್‌ಎಫ್‌ಐನ ರಾಜ್ಯ ಅಧ್ಯಕ್ಷರಾದ ಜೆ.ಸಿ.ಬಯ್ಯಾರೆಡ್ಡಿ ಮಾತನಾಡುತ್ತಾ ಜಾತ್ಯಾತೀತತೆ ಐಕ್ಯತೆ ಸಮಗ್ರತೆ ಚಿರಾಯುವಾಗಬೇಕು ಹಿಂದು- ಮುಸ್ಲಿಂ ಮಧ್ಯದಲ್ಲಿ ಕೋಮುಗಲಭೆ ಎಬ್ಬಿಸಿ ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವ ಬಿಜೆಪಿ ಬಣ್ಣವನ್ನು ಹೊರಗೆ ಹಾಕಬೇಕು, ಭಾರತ ದೇಶದಲ್ಲಿ ಶಿಕ್ಷಣ ಮಾರಾಟ ಮಾಡುತ್ತಿರುವಾಗ ಅದರ ಬಗ್ಗೆ ಚಕಾರ ಎತ್ತುವುದಿಲ್ಲ. ಕೃಷಿ ಕೂಲಿಕಾರರಿಗೆ ಆಗುವ ಅನ್ಯಾಯದ ಬಗ್ಗೆ ಮಾತನಾಡುವುದಿಲ್ಲ. ರಸಗೊಬ್ಬರದ ಸಬ್ಸಿಡಿ ಬಗ್ಗೆ ರದ್ದು ಮಾಡಿದಾಗ ಪಾರ್ಲಿಮೆಂಟಿನಲ್ಲಿ ಒಂದು ವಿಷಯವಾದರೂ ಕೂಡಾ ಮಾತನಾಡಲಿಲ್ಲ. ಗುಡಿಯನ್ನೇ ಆಧಾರವಾಗಿಟ್ಟುಕೊಂಡು ಹೋಗುವುದು ಸರಿಯಲ್ಲ ಎಂದು ಖಂಡಿಸಿದರು.

ಜಿಲ್ಲಾ ಸಮ್ಮೇಳನ ಆಯ್ಕೆ ಮಾಡಿದ ಹೊಸ ಪದಾಧಿಕಾರಿಗಳು ಈ ರೀತಿ ಇದ್ದಾರೆ. ಅಧ್ಯಕ್ಷರು - ಪ್ರಭುಗೌಡ ಪಾಟೀಲ, ಉಪಾಧ್ಯಕ್ಷರು - ಇ.ಬಸವರಾಜ, ಎಸ್. ಮಾರುತಿ, ಜೆ.ನಾಗರಾಜ, ಕಾರ್ಯದರ್ಶಿ - ಚಂದ್ರಪ್ಪಾಹೊಸ್ಕೆರಾ, ಸಹ ಕಾರ್ಯದರ್ಶಿ ಅಕ್ಕಮಹಾದೇವಿ, ಅಮರೇಶ, ಪಿ.ಗಿರಿಯಪ್ಪ, ಮೋದಿನಸಾಬ ಮತ್ತು 11 ಮಂದಿ ಸದಸ್ಯರು.

ಬತ್ತನಹಳ್ಳಿ ಗ್ರಾಮ ರೈತ ಸಂಘ ಎಚ್ಚರಿಕೆ

ಬತ್ತನಹಳ್ಳಿ : ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಿಂದ 6 ಕಿ.ಮಿ. ದೂರದಲ್ಲಿರುವ ಬತ್ತನಹಳ್ಳಿ ಗ್ರಾಮ ನೂರಕ್ಕೆ ನೂರರಷ್ಟು ಕೊರಚರು ವಾಸಿಸುವ ಗ್ರಾಮವಾಗಿದ್ದು ಒಟ್ಟು ಜನಸಂಖ್ಯೆ ಸಾವಿರ ಮೀರಿದ್ದು ಸರಕಾರದ ಬಳಿ ನೂರಾರು ಯೋಜನೆ ಇದ್ದರೂ ಈ ಗ್ರಾಮಕ್ಕೆ ಕುಡಿಯುವ ನೀರಿಲ್ಲದೆ ದಿನಾಲೂ ಪೇಚಾಡುವ ಪರಿಸ್ಥಿತಿ ಇದೆ. ಸಂಬಂಧಪಟ್ಟ ಅಧಿಕಾರಿಗಳು ಗಮನಿಸಿ ಕುಡಿಯುವ ನೀರಿಗಾಗಿ ಒಂದು ವರ್ಷದ ಹಿಂದೆ ಎರಡು ಬೋರ್ ಹಾಕಿದರು. ಒಳ್ಳೆಯ ನೀರು ಬಂದಿದೆ. ಅದಕ್ಕೆ ಮೋಟಾರ ಬಂದಿಲ್ಲ. ಸಣ್ಣ ಪ್ರಮಾಣದ ಕುಡಿಯುವ ನೀರಿನ ಯೋಜನೆ ಮಾಡಿ ತೀವ್ರಗತಿಯಲ್ಲಿ ಕೆಲಸ ಮಾಡಬೇಕಾಗಿ ಹಾಗೂ ಇನ್ನೂ 8-10 ದಿನಗಳಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳದೇ ಹೋದಲ್ಲಿ ದಿನಾಂಕ 22-1-93 ರಂದು ತೀವ್ರ ರೀತಿಯ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರಾಂತ ರೈತ ಸಂಘದ ಘಟಕ ಎಚ್ಚರಿಕೆ ನೀಡಿದೆ. ಈ ಹೋರಾಟಕ್ಕೆ ಡಿವೈಎಫ್‌ಐನ ಕೂಡ್ಲಿಗಿ ತಾಲೂಕಿನ ಸಮಿತಿ ಸಂಪೂರ್ಣವಾಗಿ ಬೆಂಬಲ ಘೋಷಿಸಿದೆ. ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ, ಬಳ್ಳಾರಿ ಜಿಲ್ಲಾ ಸಮಿತಿ ಹಾಗೂ ಕೂಡ್ಲಗಿ ತಾಲೂಕು ಸಮಿತಿ ಹೋರಾಟದಲ್ಲಿ ಪಾಲ್ಗೊಳ್ಳಲಿವೆ ಎಂದು ಪ್ರಕಟಣೆ ತಿಳಿಸಿದೆ.

ಡಿವೈಎಫ್‌ಐ ಘಟಕ ಸರ್ವ ಸದಸ್ಯರ ಸಭೆ

ಬಂಗಾರಪೇಟೆ : ಡಿವೈಎಫ್‌ಐ ಬಂಗಾರಪೇಟೆ ಘಟಕದ ಸರ್ವ ಸದಸ್ಯರ ಸಭೆಯು 10-1-93ರಂದು ಬೆಳಿಗ್ಗೆ 11.00 ಗಂಟೆಗೆ ಬಂಗಾರಪೇಟೆಯ ಕಿಂಗ್ ಎಡ್ವರ್ಡ್ ಹಾಲ್‌ನಲ್ಲಿ ಯಶಸ್ವಿಯಾಗಿ ನಡೆಯಿತು.

ಮನ್ಸೂರ್ ಅಹ್ಮದ್ ಸ್ವಾಗತಿಸಿದ[illegible] ತಿಪ್ಪರಾಜ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಡಿವೈಎಫ್‌ಐ ಕೋಲಾರ ಜಿಲ್ಲಾ ಮಾಜಿ ಅಧ್ಯಕ್ಷ ಪಿ.ಶ್ರೀನಿವಾಸ್ ಡಿವೈಎಫ್‌ಐ ಕಾರ್ಯಕ್ರಮ, ಸಂವಿಧಾನ ಮತ್ತು ಬಾಬ್ರಿ ಮಸೀದಿಯನ್ನು ಕೆಡವಿದ ನಂತರ ದೇಶ ಎದುರಿಸುತ್ತಿರುವ ಗಂಭೀರ ಪರಿಸ್ಥಿತಿಯನ್ನು ವಿವರಿಸಿದರು.

26 ಮಹಿಳೆಯರೂ ಸೇರಿ ಒಟ್ಟು 75 ಯುವಜನರು ಸಭೆಯಲ್ಲಿ ಭಾಗವಹಿಸಿದ್ದರು. ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ವೈವಿಧ್ಯಮಯ ಚಟುವಟಿಕೆಗಳನ್ನು ನಡೆಸಿ ಡಿವೈಎಫ್‌ಐಯನ್ನು ಬಲಪಡಿಸಲು ಪಣತೊಟ್ಟರು.

ಕೋಮು ಸಾಮರಸ್ಯಕ್ಕಾಗಿ ಹಮ್ಮಿಕೊಳ್ಳಲಾಗಿರುವ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಸರ್ವ ಸದಸ್ಯರ ಸಭೆ ನಿರ್ಧರಿಸಿತು. ಬಾಗೇಪಲ್ಲಿಯಲ್ಲಿ ನಡೆದ 4ನೇ ಜಿಲ್ಲಾ ಸಮ್ಮೇಳನ ಕೈಗೊಂಡಿರುವ ಇತರ ನಿರ್ಣಯಗಳನ್ನು ಜಾರಿಗೊಳಿಸಲು ತೀರ್ಮಾನಿಸಲಾಯಿತು. ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕಾಗಿ ಹೋರಾಡಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಕೆಳಕಂಡ ಪದಾಧಿಕಾರಿಗಳನ್ನು ಆರಿಸಲಾಯಿತು. ಜಾವೀದ್ ಪಾಶಾ - ಅಧ್ಯಕ್ಷರ, ವಿ.ಪೆರುಮಾಳ್ - ಉಪಾಧ್ಯಕ್ಷರು, ಮನ್ಸೂರ್ ಅಹ್ಮದ್ - ಕಾರ್ಯದರ್ಶಿ, ಸಿ.ರಾಮಮೂರ್ತಿ - ಜಂಟಿ ಕಾರ್ಯದರ್ಶಿ, ಎಸ್.ನಾಗರಾಜ್[illegible] ಖಜಾಂಚಿ.

ಡಿವೈಎಫ್‌ಐ ಕೋಲಾರ ಜಿಲ್ಲಾ ಸಮಿತಿ ಸದಸ್ಯ ಟಿ.ಎಸ್.ರಾಜನ್ ಮಾತನಾಡಿ ಸದಸ್ಯತ್ವದ ಗುರಿಯನ್ನು ತಲುಪಲು ಹಾಗೂ ತೀವ್ರ ಹೋರಾಟಗಳಿಗೆ ತಯಾರಾಗಲು ಕರೆ ನೀಡಿದರು.

ಖಜಾಂಚಿ ಎಸ್.ನಾಗರಾಜ್ ವಂದನೆ ಸಲ್ಲಿಸಿದರು.

ಪ್ರಧಾನಿ ಗೈದರ್ ರಾಜೀನಾಮೆ

ರಶ್ಯಾದ ಎಡ-ದೇಶಪ್ರೇಮಿ ಶಕ್ತಿಗಳ ಮೊದಲ ವಿಜಯ

ರಶ್ಯದ ಪಾರ್ಲಿಮೆಂಟಿನಲ್ಲಿ ಅಧ್ಯಕ್ಷ ಬೋರಿಸ್ ಯೆಲ್ಟ್‌ಸಿನ್ ದೊಡ್ಡ ಸೋಲು ಅನುಭವಿಸಬೇಕಾಗಿ ಬಂದಿದೆ. ಯೆಲ್ಟ್‌ಸಿನ್ ಸೂಚಿಸಿದ್ದ ಪ್ರಧಾನಮಂತ್ರಿಯ ಹೆಸರನ್ನು ಪಾರ್ಲಿಮೆಂಟು ತಿರಸ್ಕರಿಸಿತು. ಯೆಗೊರ್ ಗೈದಾರ್ ರಶ್ಯದಲ್ಲಿ ಬಂಡವಾಳಶಾಹಿಯ 'ಪ್ರತಿನಿಧಿ'. ಕಳೆದ ಕೆಲವು ವರ್ಷಗಳಿಂದ ರಶ್ಯಾವನ್ನು ಪೂರ್ಣ ಬಂಡವಾಳಶಾಹಿಯತ್ತ ತಳ್ಳುವ ಆರ್ಥಿಕ ರೀತಿಗಳ ರಣನೀತಿ ನಿರ್ಧರಿಸುವ ವ್ಯಕ್ತಿ. ಸಾಮ್ರಾಜ್ಯಶಾಹಿ ದೇಶಗಳಿಗೆ ಭಾರಿ ಬೇಕಾದವ. ಆತನನ್ನು ರಶ್ಯನ್ ಪಾರ್ಲಿಮೆಂಟು ತಿರಸ್ಕರಿಸಿದ್ದು ಗಮನಾರ್ಹ ಬೆಳವಣಿಗೆ. ಗೈದಾರ್ ಬದಲು ವಿಕ್ಟರ್ ಚೆರ್ನೋಮಿರ್ಡಿನ್‌ರನ್ನು ಪ್ರಧಾನಿಯಾಗಿ ಆರಿಸಬೇಕಾಯಿತು. ಮಂತ್ರಿಮಂಡಲದಲ್ಲೂ ಯೆಲ್ಟ್‌ಸಿನ್‌ರವರ ಬೆಂಬಲಿಗರನ್ನು ಕೆಲವರನ್ನಾದರೂ ಉಳಿಸಿಕೊಳ್ಳಲು, ಯೆಲ್ಟ್‌ಸಿನ್ ಚೀನಾ ಭೇಟಿ ಅರ್ಧಕ್ಕೆ ನಿಲ್ಲಿಸಿ ಮಾಸ್ಕೋಗೆ ಓಡಿ ಬರಬೇಕಾಯಿತು.

ಈ ಬೆಳವಣಿಗೆಯಿಂದ ಬಂಡವಾಳಶಾಹಿಯತ್ತ ರಶ್ಯವನ್ನು ಬಲವಂತವಾಗಿ ತಳ್ಳುವ ಯೆಲ್ಟ್‌ಸಿನ್ ಗ್ಯಾಂಗಿನ ಪ್ರಯತ್ನಕ್ಕೆ ತೀವ್ರ ತಡೆ ಕಂಡುಬಂದಿದೆ. ಯೆಲ್ಟ್‌ಸಿನ್ ಗ್ಯಾಂಗ್ ಮೊದಲ ಬಾರಿಗೆ ಪಾರ್ಲಿಮೆಂಟಿನಲ್ಲಿ ಅಲ್ಪಸಂಖ್ಯಾತವಾಗಿದೆ. ಅದಕ್ಕೆ ಬಹುಮತ ಇಲ್ಲ ಎಂದು ಸಾಬೀತಾಗಿದೆ. ಆಗಸ್ಟ್ 1991ರಲ್ಲಿ - ಕೇವಲ 18 ತಿಂಗಳ ಹಿಂದೆಯಷ್ಟೇ ಟ್ಯಾಂಕ್ ಏರಿ ಜನಮನ್ನಣೆ ಮಾಡಿದ್ದ ಯೆಲ್ಟ್‌ಸಿನ್ ಜನಪ್ರಿಯತೆ ತೀವ್ರವಾಗಿ ಕುಸಿದಿದೆ. 18 ತಿಂಗಳ ಬಂಡವಾಳಶಾಹಿಯತ್ತ ಪ್ರಯಣ ರಶ್ಯಕ್ಕೆ ಜನತೆಗೆ ಮತ್ತು ದುರಂತಕಾರಿ ಎಂದು ಜನರಿಗೆ ಗೊತ್ತಾಗಿದೆ. ಇವೆಲ್ಲದರ ಒಟ್ಟಾರೆ ಪರಿಣಾಮವಾಗಿ ಪ್ರಗತಿಪರ ಎಡಪಂಥೀಯರು ಮತ್ತು ದೇಶಪ್ರೇಮಿ ಸದಸ್ಯರ ಒಕ್ಕೂಟವೊಂದು ನಿರ್ಮಾಣವಾಗಿದೆ. ಈ ಒಕ್ಕೂಟದ ಜನಪ್ರಿಯತೆ ದಿನೇ ದಿನೇ ಹೆಚ್ಚುತ್ತಿದೆ.

ಈಗ ಪ್ರಧಾನಿಯಾಗಿ ನೇಮಕವಾದ ವಿಕ್ಟರ್ ಚೆರ್ನೋಮಿರ್ಡಿನ್ 'ಆರ್ಥಿಕ ಸುಧಾರಣೆ ಆಳವಾಗಿಸುವುದರಲ್ಲಿ' ನಂಬಿಕೆ ಇಟ್ಟಿದ್ದರೂ, ರಶ್ಯವನ್ನು ದುರಂತಕ್ಕೆ ತಳ್ಳಲು ತಯಾರಿಲ್ಲ. ಒಂದು ದೊಡ್ಡ ಕೈಗಾರಿಕೆಯ ಡೈರೆಕ್ಟರ್ ಆಗಿದ್ದ ವರು ಗೈದಾರ್‌ನ ಹಣಕಾಸು ನೀತಿಯನ್ನು ತೀವ್ರವಾಗಿ ಟೀಕಿಸಿದ್ದಾರೆ. ರಶ್ಯನ್ ಮಾರುಕಟ್ಟೆ ಸಟ್ಟಾ ವ್ಯಾಪಾರದ ಕೊಂಪೆಯಾಗಿದೆ ಎಂದು ಅವರು ಹೇಳಿದ್ದಾರೆ. ಸುಧಾರಣೆಯ ಹೆಸರಲ್ಲಿ, ರಶ್ಯದಲ್ಲಿ ದೊಡ್ಡ ಏಟು ಬಿದ್ದಿರುವುದು ಉತ್ಪಾದನೆಗೆ, ಅದರಲ್ಲೂ ಮೂಲಭೂತ ಕೈಗಾರಿಕೆಗಳ ಉತ್ಪನ್ನಗಳಿಗೆ. ರಶ್ಯದ ಪಾರ್ಲಿಮೆಂಟಿನಲ್ಲೂ ಉತ್ಪಾದನೆ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ಉತ್ಪಾದನಾ ವ್ಯವಸ್ಥೆಯಲ್ಲಿ ಕುಸಿತ, ರಶ್ಯದ ಸೂಪರ್ ಹಣದುಬ್ಬರದ ಮೂಲ ಎನ್ನುವ ಹೊಸ ಪ್ರಧಾನಿಯ ನೀತಿಗಳು ಗೈದಾರ್‌ನ ಬಲಪಂಥೀಯ ನೀತಿಗಳಿಂದ ಮಧ್ಯಮಾರ್ಗಕ್ಕೆ ವಾಲುತ್ತಿವೆ. ಇದು ಎಡ-ದೇಶಪ್ರೇಮಿ ಒಕ್ಕೂಟದ ಮೊದಲ ವಿಜಯವೆನ್ನಬಹುದು ಬಂಡವಾಳಶಾಹಿಯತ್ತ ರಶ್ಯ ಜಾರುವುದನ್ನು ತಡೆಯುವ ಪ್ರಯತ್ನದಲ್ಲಿ.

ಯೆಲ್ಟ್‌ಸಿನ್ ಈ ಸೋಲನ್ನು ಅನುಭವಿಸಿ ಸುಮ್ಮನೆ ಕೂತಿಲ್ಲ. ಮಧ್ಯಮಾರ್ಗಿಯ 'ಸಿವಿಕ್ ಯೂನಿಯನ್' ಪಕ್ಷದೊಡನೆ ಮೈತ್ರಿ ಗಳಿಸಿದ್ದಾರೆ. ರಶ್ಯದ 'ಸೋವಿಯತ್ ಪ್ರಜಾಪ್ರಭುತ್ವ' ಪದ್ಧತಿ ಬದಲಾಯಿಸಿ, ಪ್ರಸಕ್ತ ರಶ್ಯನ್ ಪಾರ್ಲಿಮೆಂಟನ್ನು ವಿಸರ್ಜಿಸಲು ಯೆಲ್ಟ್‌ಸಿನ್ ಗ್ಯಾಂಗ್ ಪ್ರಯತ್ನಿಸುತ್ತಿದೆ. ರಶ್ಯದ ಸಂವಿಧಾನ ಬದಲಾಯಿಸಲು ಜನಮತ ಸಂಗ್ರಹ ತಾರೀಕು ನಿರ್ಧರಿಸುವ (ಏಪ್ರಿಲ್ 11) ಮೂಲಕ ಯೆಲ್ಟ್‌ಸಿನ್ ಆನಂತರ ಕೆಲವೇ ದಿನಗಳಲ್ಲಿ ಸಭೆ ಸೇರಲಿಸುವ ರಶ್ಯನ್ ಪಾರ್ಲಿಮೆಂಟಿಗೆ ನೋಟೀಸ್ ಕೊಟ್ಟಿದ್ದಾರೆ. ಈ ಸವಾಲನ್ನು ಎಡ-ದೇಶಪ್ರೇಮಿ ಒಕ್ಕೂಟ ಎದುರಿಸಲಿದೆ. ಆರ್ಥಿಕ ಬಿಕ್ಕಟ್ಟನ್ನು ಎದುರಿಸಲು ಸಮಾಜವಾದಿ ಹಾದಿಗೆ ಮರಳುವುದು, ಯೆಲ್ಟ್‌ಸಿನ್‌ಗೆ ಸರ್ವಾಧಿಕಾರ ಕೊಡುವ ರಾಜಕೀಯ ಬದಲಾವಣೆಗಳನ್ನು ವಿರೋಧಿಸುವುದು, ಎಡ-ದೇಶಪ್ರೇಮಿ ಒಕ್ಕೂಟದ ರಣಕಹಳೆಯಾಗಲಿದೆ. ಸಮಾಜವಾದದ ಅಮೂರ್ತ ಘೋಷಣೆಗಳಿಂದ ಜನತೆಯಲ್ಲಿ ಉತ್ಸಾಹ ತುಂಬುವುದು ಸಾಧ್ಯವಿಲ್ಲ. ಕಳೆದುಹೋಗಿರುವ ಸಮಾಜವಾದಿ ಸಾಧನೆಗಳ ಪುನಃ ಸ್ಥಾಪನೆಗೆ ಎಡಶಕ್ತಿಗಳು ಹೋರಾಡಲಿವೆ. ಮಕ್ಕಳ ಆರೋಗ್ಯ ಪಾಲನೆಗೆ ಶಿಶುವಿಹಾರ ವ್ಯವಸ್ಥೆಗೆ ಮಹಿಳೆಯರ ಹೋರಾಟ, ಉಚ್ಚ ಶಿಕ್ಷಣ ದುಬಾರಿಯಾಗುವುದರ ವಿರುದ್ಧ ವಿದ್ಯಾರ್ಥಿಗಳ ಹೋರಾಟ, ಬೆಲೆಗಳ ಏರಿಕೆ ವಿರುದ್ಧ ಎಲ್ಲರನ್ನೂ ಸಂಘಟಿಸುವುದು - ಈ ಕರ್ತವ್ಯವನ್ನು ಎಡಶಕ್ತಿಗಳು ನಿಭಾಯಿಸಲಿವೆ. ಯೆಲ್ಟ್‌ಸಿನ್ ಅಂದುಕೊಂಡಷ್ಟು ಸುಲಭವಾಗಿ ರಶ್ಯದ ಸಮಾಜವಾದಿ ಪದ್ಧತಿ ಕಿತ್ತೊಗೆಯುವುದು ಸಾಧ್ಯವಿಲ್ಲ ಎಂದು ಸಾಬೀತಾಗಲಿದೆ.

ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ 14ನೇ ಮಹಾಧಿವೇಶನ

ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷದ 14ನೇ ಮಹಾಧಿವೇಶನ ಡಿಸೆಂಬರ್‌ನಲ್ಲಿ ಜರುಗಿತು. ಸೌಹಾರ್ದ ಪ್ರತಿನಿಧಿಯಾಗಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಸುರ್ಜಿತ್ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು.

ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷ ದೀರ್ಘ ಕ್ರಾಂತಿಕಾರಿ ಪರಂಪರೆ ಇರುವ ಮಹಾನ್ ಪಕ್ಷ. ಪೋರ್ಚುಗಲ್‌ನಲ್ಲಿ ಸ್ಥಾಪಿತವಾಗಿದ್ದ ಫ್ಯಾಸಿಸ್ಟ್ ಸರ್ವಾಧಿಕಾರದ ವಿರುದ್ಧ ನಾಲ್ಕು ದಶಕಗಳ ಕಾಲ ಭೂಗತವಾಗಿದ್ದು ಹೋರಾಡಿದ ಪಕ್ಷ, 70ರ ದಶಕದಲ್ಲಿ ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಕೆಳಗುರುಳಿಸಿ, ಪ್ರಜಾಪ್ರಭುತ್ವ ಸ್ಥಾಪಿಸುವಲ್ಲಿ ಪ್ರಮುಖ ಮತ್ತು ಮಹತ್ವದ ಕಾಣಿಕೆ ನೀಡಿದ ಪಕ್ಷ, ಒಂದು ಕೋಟಿ ಜನಸಂಖ್ಯೆ ಇರುವ ಪೋರ್ಚುಗಲ್‌ನಲ್ಲಿ, ಆ ಪಕ್ಷಕ್ಕೆ ಸುಮಾರು ಒಂದು ಲಕ್ಷ 63 ಸಾವಿರ ಸದಸ್ಯತ್ವವಿದೆ(1,63,506). ಪೋರ್ಚುಗಲ್‌ನ ಮೂರನೇ ಒಂದು ಭಾಗ ಆವರಿಸಿರುವ 50 ಮುನಿಸಿಪಾಲಿಟಿಗಳಲ್ಲಿ ಪಕ್ಷ ಅಧಿಕಾರದಲ್ಲಿದೆ(ಒಟ್ಟು 300 ಮುನಿಸಿಪಾಲಿಟಿಗಳಲ್ಲಿ). ರಾಜಧಾನಿ ಲಿಸ್ಬನ್‌ನಲ್ಲಿ ಕಮ್ಯುನಿಸ್ಟ್ ಸೋಶಲಿಸ್ಟ್ ರಂಗ ಅಧಿಕಾರದಲ್ಲಿದೆ. ಕಾರ್ಮಿಕ ವರ್ಗದಿಂದ ಶೇ. 55 ಸದಸ್ಯತ್ವ ಇರುವ ಪಕ್ಷದಲ್ಲಿ ಶೇ. 62 ದುಡಿಯುವ ವರ್ಗಗಳಿಂದ ಇದ್ದಾರೆ. ಕಾಲು ಭಾಗ ಸದಸ್ಯತ್ವ ಮಹಿಳೆಯರದು.

17 ಪಕ್ಷಗಳಿಂದ 56 ಸೌಹಾರ್ದ ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಮಹಾಧಿವೇಶನದ ಮುಂದೆ ರಾಜಕೀಯ ನಿರ್ಣಯವಲ್ಲದೆ, ಪಕ್ಷದ ಸಂವಿಧಾನ ಮತ್ತು ಕಾರ್ಯಕ್ರಮಗಳಿಗೆ ತಿದ್ದುಪಡಿಗಳು ಸೇರಿದ್ದವು. ಪಕ್ಷದ ಮಹಾಧಿವೇಶನದ ಮೊದಲು ಪಕ್ಷದೊಳಗಿನ ಚರ್ಚೆಯಲ್ಲಿ ಸೈದ್ಧಾಂತಿಕ, ರಾಜಕೀಯ ವಿಷಯಗಳ ಬಗ್ಗೆ ಪಕ್ಷದೊಳಗೆ ಒಮ್ಮತ ಮೂಡಿದ್ದು ಚರ್ಚೆಯಲ್ಲಿ ಕಂಡು ಬಂತು. ಚರ್ಚೆಯಲ್ಲಿ ಕಂಡು ಬಂದ ಇನ್ನೊಂದು ವಿಶೇಷವೆಂದರೆ ದೇಶವನ್ನು ಕಾಡುತ್ತಿರುವ ಎಲ್ಲಾ ಸಮಸ್ಯೆಗಳ, ಆಯಾಮಗಳ ಬಗ್ಗೆ ಪಕ್ಷದ ಸದಸ್ಯರಿಗೆ ಜ್ಞಾನವಿದ್ದದ್ದು, ಅವರು ಆ ವಿಷಯಗಳ ಬಗ್ಗೆ ಮಧ್ಯಪ್ರವೇಶಿಸುತ್ತಿರುವುದೂ ಕಂಡು ಬಂತು.

ರಾಸಾಯನಿಕ ಅಸ್ತ್ರ ಸಂಧಿಗೆ ಸಹಿ

ಶರತ್ ಚಂದ್ರ

120ಕ್ಕೂ ಹೆಚ್ಚಿನ ದೇಶಗಳು ರಾಸಾಯನಿಕ ಅಸ್ತ್ರ ಸಂಧಿಗೆ ಸಹಿ ಹಾಕಿವೆ. ಈ ಚಾರಿತ್ರಿಕ ಸಂಧಿಯ ಪ್ರಕಾರ ರಾಸಾಯನಿಕ ಅಸ್ತ್ರಗಳ ಉತ್ಪಾದನೆ, ಶೇಖರಣೆ ಹಾಗೂ ಉಪಯೋಗದ ಮೇಲೆ ಪೂರ್ಣ ಪ್ರತಿಬಂಧ ಹೇರುತ್ತದೆ. ಈ ಸಂಧಿಯ ವಿಶೇಷವೆಂದರೆ, ಇದರ ಪ್ರಕಾರ ಸಾಮೂಹಿಕ ಸಂಹಾರ ಮಾಡಬಲ್ಲ ಒಂದು ವರ್ಗದ ಮಾರಕಾಸ್ತ್ರಗಳನ್ನು ಇದು ಸಂಪೂರ್ಣವಾಗಿ ಇಲ್ಲವಾಗಿಸುತ್ತದೆ ಎಂಬುದು. ಇದು ಈವರೆಗೆ ಜಾರಿಯಲ್ಲಿದ್ದ 1925ರ ಜೇನಿವಾ ಒಪ್ಪಂದದ ಮುಂದುವರೆದ ಭಾಗ. ಒಪ್ಪಂದದ ಪ್ರಕಾರ ಈಗಾಗಲೇ ರಾಸಾಯನಿಕ ಅಸ್ತ್ರ ಹೊಂದಿರುವ ದೇಶಗಳು ಒಂದು ವೇಳಾಪಟ್ಟಿಯ ಪ್ರಕಾರ ಅದನ್ನು ನಾಶಮಾಡಬೇಕು.

ಈ ಒಪ್ಪಂದಕ್ಕೆ ಭಾರತ, ಅಮೇರಿಕ, ರಶ್ಯಾ ಸೇರಿದಂತೆ ಚೀನಾ, ಪಾಕಿಸ್ತಾನ ಸೇರಿದಂತೆ 120ಕ್ಕಿಂತ ಹೆಚ್ಚು ದೇಶಗಳು ಸಹಿ ಹಾಕಿವೆ. ಇಸ್ರೇಲ್ ಅಣ್ವಸ್ತ್ರ ನಿಷೇಧ ಒಪ್ಪಂದಕ್ಕೆ ಸಹಿ ಹಾಕದಿರುವುದರ ವಿರುದ್ಧ ಪ್ರತಿಭಟಿಸಿ, ಅರಬ್ ದೇಶಗಳು ಸಹಿ ಹಾಕಿಲ್ಲ.

ಈ ಒಪ್ಪಂದದ ಪ್ರಕಾರ ರಾಸಾಯನಿಕ ಅಸ್ತ್ರದಲ್ಲಿ ಉಪಯೋಗಿಸಬಹುದಾದ ಎಲ್ಲಾ ರಾಸಾಯನಿಕ ಉತ್ಪಾದನೆಯನ್ನು ನಿಯಂತ್ರಿಸುವ ಉದ್ದೇಶ ಹೊಂದಿರುವ ಸಂಧಿಯ ಕೆಲವು ಭಾಗಗಳನ್ನು ಸಾಮ್ರಾಜ್ಯಶಾಹಿ ದೇಶಗಳು ದುರುಪಯೋಗ ಮಾಡುವ ಸಾಧ್ಯತೆ ಇದೆ.

ಜಮಾಮಸೀದಿಯನ್ನು ಕೊಡಿಯೆಂಬ 'ಸಾಧುಗಳ ಬೇಡಿಕೆ ಅಪಾಯಕಾರಿ' ಎಡ ಪಕ್ಷಗಳ, ಜನತಾದಳದ ಖಂಡನೆ

ಅಖಿಲ ಭಾರತ ಸಾಧುಗಳ ಸಮಿತಿಯ ಹಾಗೂ ಅಯೋಧ್ಯಾ ಆಂದೋಲನದ ಪ್ರಮುಖ ಸಾಧು ಸ್ವಾಮಿ ವಾಮದೇವ್ ಜನವರಿ 6 ರಂದು ನವದೆಹಲಿಯ ಒಂದು ಪತ್ರಿಕಾ ಸಮ್ಮೇಳನದಲ್ಲಿ ಮಾತಾನಾಡುತ್ತಾ ಮಥುರಾ, ವಾರಾಣಾಸಿಯ ಮಸೀದಿಗಳೊಂದಿಗೆ ದಿಲ್ಲಿಯ ಜಾಮಾ ಮಸೀದಿಯನ್ನು ಹಿಂದೂಗಳಿಗೆ ಒಪ್ಪಿಸಬಿಡಬೇಕು ಎಂದು ಹೇಳಿದರು. ಇದು ಅತ್ಯಂತ ಉದ್ರೇಕಕಾರಿ ಹೇಳಿಕೆ ಎಂದು ಎಡಪಕ್ಷಗಳು ಮತ್ತು ಜನತಾದಳ ಬಲವಾಗಿ ಖಂಡಿಸಿದೆ.

ಅಯೋಧ್ಯಾ ಆಂದೋಲನ ಅತ್ಯಂತ ಅಪಾಯಕಾರಿ ತಿರುವು ಪಡೆಯುತ್ತಿದೆ. ವಾಮದೇವ್, ಮತ್ತಿತರ ವ್ಯಕ್ತಿಗಳು ಮಾಡಿದ ಅಪಪ್ರಚಾರಗಳನ್ನು ನಿಲ್ಲಿಸದಿದ್ದರೆ ಕೋಮು ಪರಿಸ್ಥಿತಿ ಕೈ ಮೀರಿ ಹೋಗಬಹುದು. ಕೇಂದ್ರ ಸರಕಾರ ಇಂತಹ ಪ್ರಚಾರದ ವಿರುದ್ಧ ದೃಢ ಕ್ರಮಕೈಗೊಳ್ಳಬೇಕು. ಇನ್ನು ಸಹಿಸುವುದಿಲ್ಲ ಎಂಬ ಬಲವಾದ ಎಚ್ಚರಿಕೆ ನೀಡಬೇಕು ಎಂದು ಈ ಪಕ್ಷಗಳು ಆಗ್ರಹಪಡಿಸಿವೆ. ಜನತಾದಳದ ಶರದ್‌ಯಾದವ್, ಸಿಪಿಐನ ಎಂ. ಫಾರುಕಿ ಮತ್ತು ಎ.ಬಿ.ಬರ್ಧನ್, ಸಿಪಿಐ(ಎಂ) ನ ಪ್ರಕಾಶ್ ಕಾರಾಟ್ ಮತ್ತು ಸುನಿಲ್ ಮೈತ್ರಾ, ಆರ್.ಎಸ್.ಪಿಯ ತ್ರಿದಿಬ್ ಚೌಧರಿ ಹಾಗೂ ಫಾರ್ವರ್ಡ್ ಬ್ಲಾಕ್‌ನ ಡಿ.ಡಿ. ಶಾಸ್ತ್ರಿ ಸಹಿ ಹಾಕಿದ ಹೇಳಿಕೆ ಸದ್ಭಾವನೆಯ ಎಲ್ಲಾ ಮಹಿಳೆಯರು ಪುರುಷರು, ಭಾರತ ಒಂದಾಗಿ ಉಳಿಯಬೇಕೆಂದು ಬಯಸುವವರೆಲ್ಲ ಇಂತಹ ವ್ಯಕ್ತಿಗಳ ರಾಷ್ಟ್ರವಿರೋಧಿ ಪ್ರಚಾರಗಳನ್ನು ಖಂಡಿಸಬೇಕು, ತಮಗೆ ಕಾನೂನು ಲಾಗೂ ಆಗುವುದಿಲ್ಲ ಎಂಬ ಅವರ ದರ್ಪಗಳಿಗೆ ಅವಕಾಶ ನೀಡಬಾರದು ಎಂದು ಮನವಿ ಮಾಡಿದ್ದಾರೆ.

'ದರ್ಶನ' : ಅಲಹಾಬಾದ್ ಹೈಕೋರ್ಟಿನ ತೀರ್ಪಿನ ನಿರ್ದೇಶನವನ್ನು ಗಮನಿಸಿ' ಪೊಲಿಟ್‌ಬ್ಯೂರೋ ಒತ್ತಾಯ

ಅಯೋಧ್ಯೆಯಲ್ಲಿ ಮಸೀದಿ ನಾಶದ ನಂತರ ಕಾನೂನುಬಾಹಿರವಾಗಿ ಇಟ್ಟ ಮೂರ್ತಿಗಳ "ದರ್ಶನ"ಕ್ಕೆ ಅವಕಾಶ ನೀಡುವ ಅಲಹಾಬಾದ್ ಹೈಕೋರ್ಟಿನ ಲಕ್ನೌ ಪೀಠದ ನಿರ್ಣಯ ಆ ಕಟ್ಟಡದ ಕಾನೂನುಬಾಹಿರ ನಾಶದ ನಂತರ ತೀವ್ರವಾಗಿ ಬದಲಾದ ಪರಿಸ್ಥಿತಿಯನ್ನು ಗಮನ ತೆಗೆದುಕೊಳ್ಳದಿರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ. ಸಾಕಷ್ಟು ದೂರದಿಂದಲೇ ದರ್ಶನ ನೀಡಬಹುದು ಎಂಬ ನ್ಯಾಯಾಲಯದ ಆಜ್ಞೆ ಹೇಳಿದರೂ ಇಂತಹ ಚಟುವಟಿಕೆಗಳು ಅಯೋಧ್ಯೆಯಲ್ಲಿನ ಪರಿಸ್ಥಿತಿ ಹದಗೆಡುವಂತೆ ಈ ಮೂಲಕ ದೇಶದೆಲ್ಲೆಡೆ ಗಂಭೀರ ಸ್ಥಿತಿ ಏರ್ಪಡುವಂತೆ ಮಾಡಬಹುದು.

ಪರಿಸ್ಥಿತಿಯ ಅಗತ್ಯಗಳಿಗನುಗುಣವಾಗಿ ಕಾನೂನು ವ್ಯವಸ್ಥೆಯ ಹತೋಟಿಗಾಗಿ ಸ್ವತಂತ್ರ ನಿರ್ಣಯ ಕೈಗೊಳ್ಳಲು ರಾಜ್ಯ ಅಧಿಕಾರಿಗಳಿಗೆ ಪೂರ್ಣ ಸ್ವಾತಂತ್ರ್ಯವಿದೆ ಎಂಬ ಮುಖ್ಯ ಅಂಶ ತೀರ್ಪಿನಲ್ಲಿದೆ. ಕೇಂದ್ರ ಸರಕಾರ ಈ ನಿರ್ದೇಶನದಂತೆ ಕಾರ್ಯಾಚರಣೆ ನಡೆಸಬೇಕು ಎಂದು ಪೊಲಿಟ್‌ಬ್ಯೂರೋ ಹೇಳಿದೆ. ದರ್ಶನ ಮತ್ತು ಅದಕ್ಕೆ ಪ್ರತಿಯಾಗಿ ನಮಾಜ್‌ನ ಬೇಡಿಕೆಯಿಂದ ದೇಶದಲ್ಲಿ ಆಗಲೇ ಸೂಕ್ಷ್ಮವಿರುವ ಪರಿಸ್ಥಿತಿ ಹದಗೆಡುತ್ತದೆ. ಆದ್ದರಿಂದ ಸುಪ್ರೀಂ ಕೋರ್ಟ್ ಅಂತಿಮ ನಿರ್ಣಯ ನೀಡುವವರೆಗೆ ಯಾವುದೇ ಧಾರ್ಮಿಕ ಚಟುವಟಿಕೆಗಳಿಗೆ ಕೇಂದ್ರ ಸರಕಾರವಾಗಲಿ, ರಾಜ್ಯ ಆಡಳಿತವಾಗಲಿ ಅವಕಾಶ ನೀಡಬಾರದು ಎಂಬ ಸ್ಪಷ್ಟ ನಿಲುವು ತಳೆಯಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ.

ಮಧ್ಯ ಪೂರ್ವದ ತೈಲ ಭರಿತ ಪ್ರದೇಶದ ಮೇಲೆ ಕಣ್ಣಿಟ್ಟಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯ ಮತ್ತೊಂದು ದುಷ್ಟ ಆಕ್ರಮಣ

ಇರಾಕೀ ಪ್ರದೇಶಗಳ ಮೇಲೆ ಮತ್ತೆ ಅಮೆರಿಕಾದ ವೈಮಾನಿಕ ಆಕ್ರಮಣ ಆರಂಭಿಸಿ ಸದ್ಯದ ಕಾಲಘಟ್ಟದಲ್ಲಿ ಸಾಮ್ರಾಜ್ಯಶಾಹಿ, ವಿಶೇಷವಾಗಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಆಕ್ರಮಣಕಾರೀ ರಾಜಕೀಯವನ್ನು ಸಾಬೀತುಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಇರಾಕೀ ಪ್ರದೇಶದ ಕೆಲವು ಭಾಗಗಳ ಮೇಲೆ ಇರಾಕೀ ವಿಮಾನಗಳೇ ಹಾರಾಡಬಾರದು ಎಂದು ಕೆಲವು ತಿಂಗಳ ಹಿಂದೆ ನಿರ್ಬಂಧ ಹಾಕಿ ಸಾಮ್ರಾಜ್ಯಶಾಹಿಗಳು ತಮಗೆ ರಾಷ್ಟ್ರೀಯ ಸಾರ್ವಭೌಮತೆಯ ಬಗ್ಗೆ ಎಳ್ಳಷ್ಟು ಗೌರವವಿಲ್ಲ ಎಂದು ತೋರಿಸಿಕೊಂಡಿದ್ದವು. ಕೊಲ್ಲಿಯುದ್ಧದ ನಂತರ ಮಧ್ಯಪೂರ್ವ ಪ್ರದೇಶದಲ್ಲಿ ಅಮೆರಿಕಾ ನಡೆಸಲಾರಂಭಿಸಿರುವ ಉದ್ರೇಕಕಾರಿ ಚಟುವಟಿಕೆಗಳ ಮುಂದುವರಿಕೆಯೇ ಈ ಬಾರಿಯ ಆಕ್ರಮಣ. ಇದೆಲ್ಲಾ ವಿಶ್ವಸಂಸ್ಥೆಯ ನಿರ್ಣಯಗಳ ಅಡಿಯಲ್ಲಿ ನಡೆಸಿರುವ ಕಾರ್ಯಾಚರಣೆ ಎಂದು ಸಾಮ್ರಾಜ್ಯಶಾಹಿಗಳು ಹೇಳುತ್ತಿದ್ದಾರೆ. ಆದರೆ ಅವರ ಈ ಮಾತು ಯಾರನ್ನು ಮರಳು ಮಾಡುಲು ಸಾಧ್ಯವಿಲ್ಲ ಏಕೆಂದರೆ ಇಸ್ರೇಲ್, ಅಂಗೋಲಾದ ಸಾವಿಂಬಿ ಕೂಟ ಹಾಗೂ ಇನ್ನೂ ಹಲವು ಗಲಾಟೆಯ ಪ್ರದೇಶಗಳಲ್ಲಿ ವಿಶ್ವಸಂಸ್ಥೆಯ ನಿರ್ಣಯಗಳ ಉಲ್ಲಂಘನೆಯಾಗುತ್ತಿರುವಾಗ ಅಮೇರಿಕಾ ವಿಶ್ವಸಂಸ್ಥೆಯ ನಿರ್ಣಯಗಳನ್ನು ಎತ್ತಿಹಿಡಿಯಲು ಎಂದಾದರೂ ಧಾವಿಸಿದೆಯೇ? ಹಾಗಿರುವಾಗ ಇರಾಕ್‌ನಲ್ಲಿ ಮಾತ್ರ ಈ ಧಾವಂತ ಏಕೆ? ಈ ತೈಲ ಭರಿತ ಮಧ್ಯಪೂರ್ವ ಪ್ರದೇಶದಲ್ಲಿ ತನ್ನ ಭಾರೀ ಪ್ರಮಾಣದ ಸೇನಾಪಡೆಯಿರಿಸಿಕೊಂಡು ತನ್ನ ಸೈನಿಕ ಪ್ರಾಬಲ್ಯ ಮೆರೆಸಲು ಅದಕ್ಕೆ ಎಲ್ಲಾ ತರದ ನೆವಗಳು ಬೇಕಷ್ಟೇ ಎಂಬುದು ಇದರಿಂದ ಸ್ಪಷ್ಟ. ಆದ್ದರಿಂದ ಅಮೆರಿಕಾದ ಈ ಕ್ರಮವನ್ನು ವಿಶ್ವದ ಎಲ್ಲಾ ಶಾಂತಿಪ್ರಿಯ ಶಕ್ತಿಗಳು ಖಂಡಿಸಲು ಮುಂದೆ ಬರಬೇಕು ಎಂದು ಸಿಪಿಐ(ಎಂ) ನಿರೀಕ್ಷಿಸುವುದಾಗಿ ಪೊಲಿಟ್‌ಬ್ಯೂರೋ ಹೇಳಿದೆ.

ಮುಂಬೈ ಹಿಂಸಾಚಾರ : ದೇಶದ ಪ್ರಧಾನ ಮಂತ್ರಿಗಳಿಂದ ಇಂತಹ ಆಘಾತಕಾರೀ ನಿಲುವು! -ಪಿ.ಬಿ. ಖಂಡನೆ

ಮುಂಬೈಯ ಗಂಭೀರ ಸನ್ನಿವೇಶದ ಬಗ್ಗೆ ದೇಶದ ಪ್ರಧಾನ ಮಂತ್ರಿಗಳ ನಿಲುವು ಅತ್ಯಂತ ಆಘಾತಕಾರಿ. ದೇಶಾದ್ಯಂತ ತಮ್ಮ ಉದ್ರೇಕಕಾರೀ ಹಾಗೂ ಹಿಂಸಾತ್ಮಕ ಚಟುವಟಿಕೆಗಳನ್ನು ಹೆಚ್ಚಿಸಲು ಶಿವಸೇನೆ ಮತ್ತು ಬಿ.ಜೆ.ಪಿ.ಯಂತಹ ಶಕ್ತಿಗಳಿಗೆ ನೀಡಿರುವ ಬಹಿರಂಗ ಪ್ರೋತ್ಸಾಹ ಇದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ.

ಹತ್ತು ದಿನಗಳ ಕಾಲ ಭಯಾನಕ ಹಿಂಸಾಚಾರ ಅನುಭವಿಸಿರುವ ಮುಂಬೈಗೆ ಭೇಟಿ ನೀಡಿ ಕೋಮು ಭಾವೋನ್ಮಾದದ ಗುರುತುಗಳನ್ನು ಸ್ವತಃ ಕಂಡು ಕೇಳಿದ ಮೇಲೂ ಪ್ರಧಾನಮಂತ್ರಿಗಳು ಅತ್ಯಂತ ನಿರ್ಲಕ್ಷ್ಯದ ಮನೋಭಾವ ವ್ಯಕ್ತಪಡಿಸಿದ್ದಾರೆ. ಮುಂಬೈಯ ಹಿಂಸಾಚಾರಕ್ಕೂ ಅಯೋಧ್ಯಾ ಘಟನೆಗಳಿಗೂ ಏನೂ ಸಂಬಂಧವಿಲ್ಲ ಎಂಬ ಆಶ್ಚರ್ಯಕರ ಹೇಳಿಕೆಯನ್ನು ಪುನರಾವರ್ತಿಸಿದ್ದಾರೆ. ನಗರದಲ್ಲಿ ಹಿಂಸಾಚಾರ ನಡೆಸಿದ್ದು ತಾವೇ ಎಂದು ಹೇಳಿಕೊಂಡಿದ್ದರೂ ದೇಶದ ಪ್ರಧಾನಮಂತ್ರಿಗಳು ಮಾತ್ರ ಶಿವಸೇನೆಯ ಅಥವಾ ಬಾಳಾ ಠಾಕ್ರೆಯ ಹೆಸರಿನ ಪ್ರಸ್ತಾಪವನ್ನು ಮಾಡಿಲ್ಲ. ಇದು ಆಕ್ರಮಣಕಾರೀ ಕೋಮು ಶಕ್ತಿಗಳೊಡನೆ ರಾಜಿಮಾಡಿಕೊಳ್ಳುವ ಅವರ ನಿಲುವಿಗೆ ಅನುಗುಣವಾಗಿಯೇ ಇದೆ. ಮುಖ್ಯಮಂತ್ರಿ ಸುಧಾಕರರಾವ್ ನಾಯಕ್‌ರವರ ಕ್ರಿಮಿನಲ್ ಬೇಜವಾಬ್ದಾರಿತನವನ್ನು ಟೀಕಿಸುವ ಒಂದಾದರೂ ಮಾತಂತೂ ದೂರ, ಬದಲಿಗೆ ಪ್ರಧಾನ ಮಂತ್ರಿಗಳೇ ಮುಖ್ಯಮಂತ್ರಿಗಳನ್ನು ಈ ಬೇಜವಾಬ್ದಾರಿತನದ ಆಪಾದನೆಯಿಂದ ಮುಕ್ತಗೊಳಿಸಿದ್ದಾರೆ ಎಂದು ಅತ್ಯಂತ ಖೇದದಿಂದ ಪಿ.ಬಿ. ಹೇಳಿದೆ.

ಬಿ.ಜೆ.ಪಿ. ಇನ್ನಷ್ಟು ಕೋಮುವಿಷ ಹರಡುವ, ಸಂವಿಧಾನದ ವಿರುದ್ಧ, ಕಾನೂನು ಆಳ್ವಿಕೆಯ ವಿರುದ್ಧ ಘರ್ಷಣೆಯನ್ನು ಹೆಚ್ಚಿಸುವ ನೇರ ಕಾರ್ಯಾಚರಣೆಗೆ ಕರೆ ನೀಡಿದೆ. ಪ್ರಧಾನಿ ನರಸಿಂಹರಾಯರ ಈ ಆಘಾತಕಾರೀ ನಿಲುವು ಇಂತಹ ಶಕ್ತಿಗಳಿಗೆ ಇನ್ನಷ್ಟು ಬಲ ನೀಡುತ್ತಿವೆಯಷ್ಟೇ ಎಂದು ಪೊಲಿಟ್‌ಬ್ಯೂರೋ ಖಂಡಿಸಿದೆ.

ಚುನಾವಣಾ ಮುಂದೂಡಿಕೆ ಪಿ.ಬಿ. ಖಂಡನೆ

ವಿವಿಧ ರಾಜ್ಯಗಳಲ್ಲಿನ ಲೋಕಸಭೆ ಹಾಗೂ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗಳನ್ನು ಮುಂದೂಡಿರುವ ಚುನಾವಣಾ ಆಯೋಗದ ಕ್ರಮವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ಕೋಮುಗಲಭೆಗಳಿಂದ ತ್ರಸ್ತವಾಗಿರುವ ಮಹಾರಾಷ್ಟ್ರ ಮತ್ತು ಗುಜರಾತ್ ಹೊರತುಪಡಿಸಿ ಇತರ ರಾಜ್ಯಗಳಲ್ಲಿ ಉಪಚುನಾವಣೆಗಳು ಮುಂದೂಡುರಿಸುವುದು ಯಾವುದೇ ರೀತಿಯಿಂದ ಸಮರ್ಥನೀಯವಲ್ಲ ಎಂದು ಅದು ಹೇಳಿದೆ.

ಕೇಂದ್ರ ಸರಕಾರದ ಸೂಚನೆ ಮೇರೆಗೆ ಆಯೋಗ ಈ ನಿರ್ಧಾರ ಕೈಗೊಂಡಿದೆ. ಕೋಮು ಉದ್ವಿಗ್ನತೆ ಯಾವುದೇ ರೀತಿಯಲ್ಲಿ ಬಾಧಿಸಿರದ ಒಟ್ಟಪಾಲಂ(ಕೇರಳ) ಮತ್ತು ಪಳನಿ(ತಮಿಳುನಾಡು) ಕ್ಷೇತ್ರಗಳಲ್ಲಿನ ಚುನಾವಣೆಗಳನ್ನು ಮುಂದೂಡಿರುವುದು ಹಾಸ್ಯಾಸ್ಪದ ಎಂದು ಟೀಕಿಸಿರುವ ಪೊಲಿಟ್‌ಬ್ಯೂರೋ ಕಾಂಗ್ರೆಸ್ ಹಿತಾಸಕ್ತಿಗೆ ಅನುಕೂಲವಾಗಲೆಂದು ಈ ರೀತಿ ಮಾಡಲಾಗಿದೆ ಎಂದಿದೆ.

(ಮುಂದೂಡಲ್ಪಟ್ಟ ಚುನಾವಣೆಗಳನ್ನು ಏಪ್ರಿಲ್‌ನಲ್ಲಿ ನಡೆಸಲು ಆಯೋಗ ಇದೀಗ ನಿರ್ಧರಿಸಿದೆ)

KRNM/BGS-405 MAG(2) PRB DECR 319-78/79

ದಿಲ್ಲಿಯನ್ನು ಮುಂಬೈಯಂತೆ ಉರಿಸುವ ಬಿಜೆಪಿ ಪ್ರಯತ್ನ ಸದ್ಯಕ್ಕೆ ವಿಫಲ

'ದಿಲ್ಲಿಯ ಓಖ್ಲಾ ಪ್ರದೇಶದಲ್ಲಿ ಸಾವಿರಾರು ಬಾಂಗ್ಲಾದೇಶಿಗಳು ಬಂದು ನಮ್ಮ ಸಂಪನ್ಮೂಲ ಬಳಸಿ ಕಾನೂನು-ವ್ಯವಸ್ಥೆ ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಅವರನ್ನು ಓಡಿಸುತ್ತೇವೆ' ಎಂದು ಬೊಬ್ಬೆ ಹಾಕುತ್ತಾ, ಉದ್ರೇಕಕಾರಿ ಪೋಸ್ಟರ್‌ಗಳನ್ನು ಹಾಕಿ ಬಿಜೆಪಿ ಮಂದಿ ದಿಲ್ಲಿಯಲ್ಲಿ ಕಳೆದ ವಾರದ ಮುಂಬೈಯಲ್ಲಿ ನಡೆದ ಭಯಾನಕ ಹತ್ಯಾಕಾಂಡದ ಪುನರಾವರ್ತನೆ ಮಾಡಲು ನಡೆಸಿದ ಪ್ರಯತ್ನ ಸದ್ಯಕ್ಕಂತೂ ಸಫಲವಾಗಿಲ್ಲ.

ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಹಾಗೂ ದಿಲ್ಲಿಯ ಪ್ರಮುಖ ನಾಗರಿಕರ ಪ್ರಯತ್ನ ಹಾಗೂ ದಿಲ್ಲಿಯ ಹೈಕೋರ್ಟಿನ ಆಜ್ಞೆಯಿಂದಾಗಿ ದಕ್ಷಿಣ ದೆಹಲಿಯ ಬಿಜೆಪಿ ಸಂಸತ್ ಸದಸ್ಯ ಎಂ.ಎಲ್.ಖುರಾನರ ನೇತೃತ್ವದಲ್ಲಿ ಬಿಜೆಪಿ ಯವರು ಯೋಜಿಸಿದ್ದ ಬೃಹತ್ 'ಯಾತ್ರೆ' ಒಂದು ಸಣ್ಣ ಸಭೆಯ ರೂಪಕ್ಕಿಳಿಯಿತು. ಎಡ- ಜಾತ್ಯಾತೀತ ಶಕ್ತಿಗಳ ಪ್ರಯತ್ನಗಳಿಂದಾಗಿ ಸರಕಾರವೂ ಮುಂಬೈಯಂತೆ ರಾಜಕೀಯವಾಗಿ ಈ ಸುಳ್ಳುಗಾರರನ್ನು ಎದುರಿಸುವ ಪ್ರಯತ್ನ ಮಾಡದಿದ್ದರೂ ಪೋಲೀಸ್ ಬಂದೋಬಸ್ತಂತೂ ಮಾಡಿತು. .ತಾವು ಹೋಗಬೇಕೆಂದಿದ್ದ ಐದು ಕಿ.ಮೀ. ಆಚೆಯಿದ್ದ ಓಖ್ಲಾ ಪ್ರದೇಶಕ್ಕೆ ಹೋಗಲಾಗದೆ ನಡೆದ ಸಭೆಯಲ್ಲಿ "ಈಗ ಬಿಜೆಪಿ ಬಡವರ, ದಲಿತರ ದನಿ" ಎಂದು ಬಿಜೆಪಿ ಮುಖಂಡರು ಹೇಳಿಕೊಂಡರಂತೆ. ಅಂದರೆ ಇದುವರೆಗೆ ಅದು ಯಾರ ದನಿಯಾಗಿತ್ತು ಎಂದು ಮಾತ್ರ ಹೇಳಲಿಲ್ಲ. ಡಿಸೆಂಬರ್ 6ರ ನಂತರ ಬಂದ ಪ್ರತಿಕ್ರಿಯೆಗಳಿಂದಾಗಿ ಈ ದನಿ ಬದಲಾಗಿದೆಯೇ ಎಂದೂ ಹೇಳಲಿಲ್ಲ. ಬಿಜೆಪಿ ಯೋಜನೆಯ ಪ್ರಕಾರ ಇದು ಸಾವಿರಾರು ಕೊಳಗೇರಿವಾಸಿಗಳ ಬೃಹತ್ 'ಯಾತ್ರೆ'ಯಾಗಬೇಕಿತ್ತು. ಸಭೆಯಲ್ಲಿ ಭಾಗವಹಿಸಿದವರು ಕೊಳಗೇರಿ ನಿವಾಸಿಗಳೆಂದು ಹೇಳಿಕೊಂಡ ದಕ್ಷಿಣ, ಪಶ್ಚಿಮ ದಿಲ್ಲಿಯ ಬಿಜೆಪಿ ಬೆಂಬಲಿಗರಷ್ಟೇ ಎಂದು ಪತ್ರಿಕೆಗಳು ವರದಿ ಮಾಡಿವೆ.

ತನ್ನ ಮತದಾರ ಕ್ಷೇತ್ರದಲ್ಲೇ 50 ಸಾವಿರಕ್ಕೂ ಹೆಚ್ಚು ಕಾನೂನು ಬಾಹಿರವಾಗಿ ಬಂದ ಬಾಂಗ್ಲಾದೇಶಿಯರು ಇದ್ದಾರೆ ಎಂದು ಪ್ರಚಾರ ಮಾಡುತ್ತಿದ್ದ ದಕ್ಷಿಣ ದೆಹಲಿಯ ಬಿಜೆಪಿ ಎಂ.ಪಿ. ಖುರಾನಾರ ಮಾತು ಅತಿರಂಜಿತ ಎಂದು ಈ ಪ್ರದೇಶದ ಜನ ಹೇಳುತ್ತಿದ್ದಾರೆ. ಕೆಲವು ಬಾಂಗ್ಲಾ ದೇಶೀಯರಿದ್ದಾರೆ ನಿಜ. ಆದರೆ ಖುರಾನಾರ ಸಂಖ್ಯೆಯಂತೂ ಸಂಪೂರ್ಣ ತಪ್ಪು ಎಂದಿದ್ದಾರೆ. ಬಾಂಗ್ಲಾದೇಶೀಯರನ್ನು ಸರಕಾರ ಅಲ್ಲಿಂದ ಓಡಿಸದಿದ್ದರೆ ತಾವೇ ಓಡಿಸಿ ಭಾರತದ ಕೊಳಗೇರಿ ನಿವಾಸಿಗಳು ಅಲ್ಲೇ ನೆಲೆಸುವಂತೆ ಮಾಡುತ್ತೇವೆ ಎಂದು ಈ ಎಂಪಿ ಹೇಳಿಕೊಂಡಿದ್ದರು. ಬಾಂಗ್ಲಾ ದೇಶೀ ವಲಸೆಗಾರರ ಸಮಸ್ಯೆ ಎತ್ತಿದಾಗಲೆಲ್ಲಾ ಈ ಪಕ್ಷ ಮುಸ್ಲಿಂ ವಲಸೆಗಾರರನ್ನೇ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತದೆ ಎಂಬುದೀಗ ದಿಲ್ಲಿಯ ಜನರಿಗೆ ಅನುಭವದಿಂದ ಗೊತ್ತಾಗಿರುವ ಸಂಗತಿ. ಬಿಜೆಪಿ 'ಯಾತ್ರೆ' ನಡೆಸಬೇಕೆಂದಿದ್ದ ಪ್ರದೇಶ ಮುಸ್ಲಿಂ ಬಾಹುಳ್ಯದ ಪ್ರದೇಶ. ಅಲ್ಲಿ ಈ ಅಪಪ್ರಚಾರದ ಜೊತೆಗೆ "ಜಂಗೇ ಐಲಾನ್"(ಸಮರ ದುಂದುಭಿ) ಎಂಬ ಅತ್ಯಂತ ಉದ್ರೇಕಕಾರಿ ಪೋಸ್ಟರ್‌ಗಳನ್ನು ಹಚ್ಚಲಾಗಿತ್ತು. ವಲಸೆಗಾರರ ಹೆಸರಿನಲ್ಲಿ ಕೋಮುಗಲಭೆಗೆ ನೆಲ ಹದಮಾಡುತ್ತಿದ್ದದ್ದು ಸ್ಪಷ್ಟವಾಗಿತ್ತು. ಆದ್ದರಿಂದ ಈ ಪೋಸ್ಟರ್ ವಿರುದ್ಧ ಸಾರ್ವಜನಿಕ ಪ್ರತಿಭಟನೆ ಬಂತು.

ಜನವರಿ 16ರಂದು ಸಿಪಿಐ, ಸಿಪಿಐ(ಎಂ) ಜಂಟಿ ಹೇಳಿಕೆ ನೀಡಿ ದಿಲ್ಲಿ ಆಡಳಿತ ದೃಢ ಕ್ರಮ ಕೈಗೊಳ್ಳಬೇಕು, ಕೇಂದ್ರ ಸರಕಾರ ಮೊಳಕೆಯಲ್ಲೇ ಕೋಮು ದಂಗೆಯೆಬ್ಬಿಸುವ ಈ ಹೀನ ಪ್ರಯತ್ನವನ್ನು ಚಿವುಟಿಹಾಕಬೇಕು ಎಂದು ಒತ್ತಾಯಿಸಿದವು.

ಜನವರಿ 20ರಂದು ಎಡಪಕ್ಷಗಳ ಮುಖಂಡರ ನಿಯೋಗವೊಂದು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಮುಂಬೈ ಸನ್ನಿವೇಶ ಪುನರಾವರ್ತನೆಯಾಗಲು ಬಿಡಬೇಡಿ ಎಂದು ಆಗ್ರಹಿಸುವ ಮನವಿಯನ್ನು ಅರ್ಪಿಸಿತು. ಸರಕಾರೀ ಅಂದಾಜಿನ ಪ್ರಕಾರವೂ ವ್ಯಾಪಕ ಬಾಂಗ್ಲಾ ದೇಶೀ ವಲಸೆ ಈ ಪ್ರದೇಶದಲ್ಲಿ ನಡೆದಿಲ್ಲ ಎಂಬ ಸಂಗತಿಯತ್ತ ಪ್ರಧಾನಿಗಳ ಗಮನ ಸೆಳೆದ ನಿಯೋಗ ಬಿಜೆಪಿ ಇದನ್ನು ಕೋಮುಗಲಭೆ ನಡೆಸಲು ಒಂದು ನೆಪವಾಗಿ ಬಳಸಿಕೊಳ್ಳುತ್ತಿದೆ ಎಂದಿತು. ಸರಕಾರ ಅಧಿಕೃತ ಅಂಕೆ-ಸಂಖ್ಯೆಗಳನ್ನು ಪ್ರಕಟಿಸಿ ಈ ಕಿಡಿಗೇಡಿತನವನ್ನು ಮೊಳಕೆಯಲ್ಲೇ ಚಿವುಟಿ ಹಾಕಬೇಕೆಂದು ಒತ್ತಾಯಿಸಿತು. ಮುಂದಿನ ದಿಲ್ಲಿ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟು ಈ ಯತ್ನ ಸಾಗಿದೆಯೆಂದೂ ಎಡಪಕ್ಷಗಳ ಮುಖಂಡರು ಹೇಳಿದರು. ಸಿಪಿಐನ ಎ.ಬಿ. ಬರ್ದಾನ್ ಮತ್ತು ಎಂ.ಫಾರುಕಿ, ಸಿಪಿಐ(ಎಂ)ನ ಇ.ಬಾಲಾನಂದನ್,ಸ ಸೈಫುದ್ದೀನ್ ಚೌಧುರಿ ಹಾಗೂ ಆರ್‌ಎಸ್‌ಪಿಯ ತ್ರಿದಿಬ್ ಚೌಧುರಿ ಈ ನಿಯೋಗದಲ್ಲಿದ್ದರು.

ಕೆಲವು ಪ್ರದೇಶಗಳನ್ನು ಸ್ವತಃ ಕಂಡು ಬಂದ, ಜನತಾದಳ ಮುಖಂಡ ಆರ್.ಎಸ್. ಬಿಮರಿ ಕೂಡಾ ಮುಂಬೈಯ ಹಿಂಸಾಚಾರದ ಪುನರಾವರ್ತನೆಯ ಯತ್ನ ಸಾಗಿದೆ ಎಂದು ವಿಶ್ಲೇಷಿಸಿದರು.

ಜನವರಿ 20ರಂದೇ ಪ್ರಮುಖ ಶಿಕ್ಷಣವೇತ್ತರು, ವಕೀಲರು, ಕಲಾವಿದರು, ಪತ್ರಕರ್ತರು, ವೈದ್ಯರು ಮತ್ತಿತರರು ಒಂದು ಜಂಟಿ ಹೇಳಿಕೆ ನೀಡಿ ಕೋಮುಗಲಭೆ ಭುಗಿಲೆನ್ನದಂತೆ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು. ದಿಲ್ಲಿ ವಿಶ್ವವಿದ್ಯಾಲಯದ ಉಪಕುಲಪತಿ ಉಪೇಂದ್ರ ಭಕ್ಷಿ, ನಿವೃತ್ತ ರಾಜತಾಂತ್ರಿಕ ಪಿ. ಎನ್.ಹಕ್ಸರ್, ಡಾ.ರಜನಿ ಕೊಠಾರಿ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಯೋಗೇಂದ್ರ ಅಲಗ್, ಪ್ರೋ.ಬಶಿರುದ್ದೀನ್ ಅಹ್ಮದ್, ಪ್ರೋ. ಲೋತಿಕಾ ಸರ್ಕಾರ್, ಪತ್ರಕರ್ತ ನಿಖಿಲ್ ಚಕ್ರವರ್ತಿ ಮತ್ತು ಕುಲದೀಪ್ ನಯ್ಯಾರ್, ಪ್ರೋ.ಯಶಪಾಲ್, ಪ್ರೋ. ಎಂ.ಜಿ.ಕೆ.ಮೆನನ್, ನಿವೃತ್ತ ನ್ಯಾಯಮೂರ್ತಿಗಳಾದ ತಾರ್ಕುಂಡೆ ಮತ್ತು ರಾಜೇಂದ್ರ ಸಾಚಾರ್ ಇತ್ಯಾದಿ ಪ್ರಮುಖರು ಈ ಹೇಳಿಕೆಗೆ ಸಹಿ ಮಾಡಿದ್ದಾರೆ.

ದಿಲ್ಲಿ ಹೈಕೋರ್ಟ್ ಕೂಡಾ ಬಿಜೆಪಿಯ ಈ ಕಾರ್ಯಕ್ರಮ ಒಡ್ಡಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ ಬಿಜೆಪಿ ಎಂಪಿ ಖುರಾನರ ವಕೀಲರು ಪ್ರತಿಬಂಧಕಾಜ್ಞೆ ಇರುವ ಸ್ಥಳಗಳಲ್ಲಿ ಮೆರವಣಿಗೆ, ಯಾತ್ರೆ ಇತ್ಯಾದಿ ನಡೆಸುವುದಿಲ್ಲ ಎಂದು ಭರವಸೆ ಕೊಟ್ಟ ಮೇಲೆ ಹೊರಡಿಸಿದ ಆಜ್ಞೆಯಲ್ಲಿ ಕೋಮುಗಲಭೆ ನಡೆಯದಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಪೋಲೀಸ್ ವಿಭಾಗಕ್ಕೆ ನಿರ್ದೇಶನ ನೀಡಿತ್ತು.

ಆದರೂ ಬಿಜೆಪಿ ಮನಸ್ಸು ಮಾಡಿದ್ದರೆ ಯಾರೂ ತಮ್ಮನ್ನು ಓಖ್ಲಾ ಪ್ರದೇಶದವರೆಗೆ ಹೋಗುವುದನ್ನು ತಡೆಯಲು ಸಾಧ್ಯವಿರಲಿಲ್ಲ ಎಂದು ಬಿಜೆಪಿ ಮುಖಂಡರು ಹೇಳಿಕೊಂಡಿದ್ದಾರಂತೆ! ◎

ಗಣಗಾತ್ರದ ಸಂಪುಟ ಜೆಟ್ ವೇಗದಲ್ಲಿ......

......ಪುಟ 1ರಿಂದ

ಒದ್ದೊಬ್ಬ ಮಂತ್ರಿಗೆ ವಹಿಸಲಾಗಿದೆ. ಈ ರೀತಿಯ ಹಂಚಿಕೆಯನ್ನು ನೋಡುವಾಗ ಇಷ್ಟು ದೊಡ್ಡಮಂತ್ರಿ ಮಂಡಲ ಬೇಕಿತ್ತೇ ಎಂಬ ಪ್ರಶ್ನೆ ಎದುರಾಗುತ್ತದೆ. ಬಂಡವಾಳಶಾಹಿ ಪಕ್ಷಗಳಲ್ಲಿ ಎಲ್ಲ ಜಾತಿ, ಧರ್ಮ, ಜಿಲ್ಲೆ ಉಪಜಾತಿಗಳನ್ನೆಲ್ಲಾ ತೃಪ್ತಿಪಡಿಸಬೇಕಾಗಿರುವುದರಿಂದ ಜಂಬೋ ಗಾತ್ರದ ಮಂತ್ರಿ ಮಂಡಲವನ್ನೇ ರಚಿಸಬೇಕಾಗುತ್ತದೆ. ಸಿಪಿಐ(ಎಂ) ಮುಖಂಡತ್ವದ ಪಶ್ಚಿಮ ಬಂಗಾಲದಂತಹ ಎಡರಂಗ ಸರಕಾರಗಳಲ್ಲಿ ಜಾತಿ, ಉಪಜಾತಿ, ಜಿಲ್ಲೆಗಳ ಪ್ರಾತಿನಿಧ್ಯದ ಸಮಸ್ಯೆ ಇರುವುದಿಲ್ಲ. ಕಾರ್ಯಕ್ರಮದ ಅನುಷ್ಠಾನವೇ ಪ್ರಧಾನವಾಗಿರುತ್ತದೆ. ಒಂದೇ ಪಕ್ಷದ ಮಂತ್ರಿ ಮಂಡಲಗಳನ್ನು ಆಗಾಗ ಬದಲಾಯಿಸುವ ಸಮಸ್ಯೆ ಕೂಡಾ ಇಲ್ಲ. ಆದರೆ ಕಾಂಗ್ರೆಸ್ ಸಂಸ್ಕೃತಿಯೇ ಬೇರೆ. ಈ ಮಂತ್ರಿಮಂಡಲದ ಕಾರ್ಯವೈಖರಿ ಹೇಗೆ ಎಂಬುದನ್ನು ಕೆಲವೇ ದಿವಸಗಳಲ್ಲಿ ಕಂಡು ಹಿಡಿಯಬಹುದು.

ಇಷ್ಟು ದೊಡ್ಡ ಗಾತ್ರದ ಮಂತ್ರಿ ಮಂಡಲ ರಚಿಸಿದ ವೀರಪ್ಪ ಮೋಯಿಲಿಯವರು ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳಿಗೆ ತುರ್ತು ಪರಿಹಾರ ಒದಗಿಸಬಲ್ಲರೇ? ಸರಿಯಾದ ರೀತಿಯಲ್ಲಿ ಆಹಾರ ಧಾನ್ಯ ವಿತರಣೆ, ಮುಚ್ಚಿದ ಕಾರ್ಖಾನೆಗಳ ತೆರೆಯುವಿಕೆ, ಭೂಮಿ ಪಟ್ಟಾ ವಿತರಣೆ, ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯ ಮೂಲಕ ಡೊನೇಶನ್ ಹಾವಳಿಯ ಅಂತ್ಯ, ನೀರಾವರಿ ಸಮಸ್ಯೆಗಳು, ವಸತಿ, ಕುಡಿಯುವ ನೀರು, ಹೀಗೆ ತುರ್ತಿನ ಸಮಸ್ಯೆಗಳಿಗೆ ತುರ್ತಿನ ಪರಿಹಾರದ ಅಗತ್ಯ. ಮೊಯಿಲಿಯವರ ಗಜಗಾತ್ರದ ಮಂತ್ರಿ ಮಂಡಲ ಈ ಸಮಸ್ಯೆಗಳಿಗೆ ಪರಿಹಾರ ಒದಗಿಸೀತೇ?

ಮಂಗಳೂರಿನಲ್ಲಿ ಡಿ.ವೈ.ಎಫ್.ಐ.ನಿಂದ ಕ್ರೀಡಾ ಸ್ಪರ್ಧೆಗಳು

ನಂತರ ನವಂಬರ್ 22 ರಂದು ಡಿ.ವೈ.ಎಫ್.ಐ. ಕುಲಶೇಖರ ಘಟಕದ ವತಿಯಿಂದ ಜಿಲ್ಲಾ ಮಟ್ಟದ ಪುರುಷರ ವಾಲಿಬಾಲ್ ಪಂದ್ಯಾಟವು ಕುಲಶೇಖರ ಸಿಲ್ವರ್‌ಗೇಟಿನ ಸಾರ್ವಜನಿಕ ಮೈದಾನದಲ್ಲಿ ನಡೆಯಿತು.

ಪಂದ್ಯಾಟದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ, ಮಂಗಳೂರು ನಗರ ಸಮಿತಿ ಅಧ್ಯಕ್ಷರಾದ ಸದಾಶಿವ ಶೆಟ್ಟಿಯವರು ವಹಿಸಿದ್ದರು. ಸ್ಥಳೀಯ ಯುವ ಉದ್ಯಮಿ ಜೀವನ್ ವಾಸ್ ಅವರು ಪಂದ್ಯಾಟವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಸಿ.ಐ.ಟಿ.ಯು ಮುಖಂಡ ಬಿ.ಮಾಧವ ಅವರು ಮಾತನಾಡುತ್ತಾ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತಪ್ಪ ಕ್ರೀಡಾ ನೀತಿಗಳನ್ನು ಜಾರಿಗೆ ತರುತ್ತಿದ್ದು, ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲಿ ಯುವಜನರಿಗೆ ಕ್ರೀಡೆ ಕಲ್ಲು ಕಡಲೆಯಾಗುತ್ತಿದೆ. ಈ ಸಂದರ್ಭದಲ್ಲಿ ಡಿವೈಎಫ್‌ಐ ಕ್ರೀಡೆಗೆ ಅವಕಾಶ ಮಾಡಿಕೊಡಲು ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳುತ್ತಿರುವುದನ್ನು ಪ್ರಶಂಸಿದರು. ಕೆ. ಪರಮೇಶ್ವರ ಭಟ್(ಎಲ್‌ಐಸಿ) ಮಂಗಳೂರು, ಸ್ಯೆಂಟ್ ರೇಮಂಡ್ಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಇನ್‌ವಿಯೋಲಿತ ಮತ್ತು ವಿನಯ ಕರ್ಕಡ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ ನಗರ ಸಮಿತಿ ಉಪಾಧ್ಯಕ್ಷರಾದ ನೆಲ್ಸನ್ ರೋಜ್ ಅವರು ವಹಿಸಿದ್ದರು. ಬಹುಮಾನ ವಿತರಣೆಯನ್ನು ಜೀವನ್‌ವಾಸ್ ಅವರು ನಡೆಸಿದರು. ಎಸ್.ಎಫ್.ಐ. ದ.ಕ. ಜಿಲ್ಲಾ ಕಾರ್ಯದರ್ಶಿ ಎಸ್. ರಾಜ್‌ಕುಮಾರ್, ವಿಶ್ವನಾಥ ಶೆಟ್ಟಿ ಶಕ್ತಿನಗರ, ಭಾಸ್ಕರ ಉಳ್ಳಾಲ್ ಅವರು ವೇದಿಕೆಯಲ್ಲಿದ್ದರು.

ಮಂಗಳ ಫ್ರೆಂಡ್ಸ್ ಸರ್ಕಲ್ 'ಎ' ತಂಡವು ಡಿ.ವೈ.ಎಫ್.ಐ. ಟ್ರೋಫಿ-91 ಹಾಗೂ ನಗದು ಬಹುಮಾನ ಗೆದ್ದುಕೊಂಡಿತು. ಮಂಗಳ ಫ್ರೆಂಡ್ಸ್ ಸರ್ಕಲ್ 'ಬಿ' ತಂಡವು ದ್ವಿತಿಯ ಟ್ರೋಫಿ ಪಡೆಯಿತು. ಉತ್ತಮ ಹೊಡೆತಗಾರರಾಗಿ ಮಂಗಳ 'ಎ' ತಂಡದ ಭಗವಾನ್ ದಾಸ್ ಬಜಾಲ್, ಉತ್ತಮ ಲಿಫ್ಟರ್‌ರಾಗಿ ಮನೋಜ್, ಉತ್ತಮ ಆಲ್‌ರರೌಂಡರ್ ಆಗಿ "ತಮ್ಮ" ಅವರು ಪ್ರಶಸ್ತಿಗಳನ್ನು ಪಡೆದುಕೊಂಡರು.

ಪ್ರಾರಂಭದಲ್ಲಿ ಡಿ.ವೈ.ಎಫ್.ಐ ಕುಲಶೇಖರ ಘಟಕದ ಕ್ರೀಡಾ ಕಾರ್ಯದರ್ಶಿ ವಾಸ್‌ದೇವ್ ಸ್ವಾಗತಿಸಿ ಕೊನೆಗೆ ಪೀಟರ್ ವಂದಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಡಿ.ವೈ.ಎಫ್.ಐ. ಕುಲಶೇಖರ ಘಟಕದ ಅಧ್ಯಕ್ಷರಾದ ಮುಖೇಶ್‌ರವರು ವಹಿಸಿದ್ದರು.



8ನೇ ಸಮ್ಮೇಳನದಲ್ಲಿ ಆಯ್ಕೆಗೊಂಡ ನೂತನ ಎಸ್‌ಎಫ್‌ಐ ಅಧ್ಯಕ್ಷ ವೈ. ವಂಕಟೇಶ್ವರ ರಾವ್, ಪ್ರಧಾನ ಕಾರ್ಯದರ್ಶಿ ಸುಜನ್ ಚಕ್ರವರ್ತಿ ಹಾಗೂ ಜಂಟಿ ಕಾರ್ಯದರ್ಶಿಗಳಲ್ಲೊಬ್ಬರಾದ ಕರ್ನಾಟಕದ ಜೆ.ಸಿ.ಬಯ್ಯಾರೆಡ್ಡಿಯವರು.

ಎಸ್.ಎಫ್.ಐ. 8ನೇ ರಾಷ್ಟ್ರ ಸಮ್ಮೇಳನ .....

ಪುಟ 1 ರಿಂದ ....

ಸಿಂಗ್ ಹುತಾತ್ಮರಾದ ದಿನದಂದು ಅವನ್ನು ರಾಷ್ಟ್ರಪತಿಗಳಿಗೆ ಅರ್ಪಿಸುವ ಮೊದಲು ಕನಿಷ್ಟ 25 ಲಕ್ಷ ಸಹಿಗಳನ್ನು ಎಸ್‌ಎಫ್‌ಐ ಸಂಗ್ರಹಿಸುತ್ತದೆ.

ತಿರುವನಂತಪುರದಲ್ಲಿ ಒಂದು ಬೃಹತ್ ರ್‍ಯಾಲಿಯೊಂದಿಗೆ ಜನವರಿ 12ರಂದು ಸಮ್ಮೇಳನ ಆರಂಭವಾಯಿತು. ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಈ ರ್‍ಯಾಲಿ ವಿದ್ಯಾರ್ಥಿ ಶಕ್ತಿಯನ್ನು ಎತ್ತಿ ತೋರಿಸಿತು. ಅದು ಮಧ್ಯಾಹ್ನ 3.30ರ ವೇಳೆಗೆ ವೆಲ್ಲಯಂಬಾಳಂನಿಂದ ಆರಂಭವಾಯಿತು. ಅಲೆ ಅಲೆಯಾಗಿ ಎಸ್‌ಎಫ್‌ಐನ ಶ್ವೇತ ಬಾವುಟಗಳು ಪುದರಿಕ್ಕಾಂಡಂ ಮೈದಾನದತ್ತ ಸಾಗಿದವು. ಕೇರಳದ ಎಲ್ಲಾ ಮೂಲೆ-ಮೂಲೆಗಳಿಂದ ವಿದ್ಯಾರ್ಥಿಗಳು ಬಂದಿದ್ದರು.

ಹಿರಿಯ ಮುತ್ಸದ್ದಿ ಇ.ಎಂ.ಎಸ್. ನಂಬೂದರಿಪ್ಪಾಡ್ ಸಾರ್ವಜನಿಕ ಸಭೆಯನ್ನು ಉದ್ಘಾಟಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಇ.ಕೆ.ನಯನಾರ್, ಕೇರಳ ವಿರೋಧ ಪಕ್ಷದ ಮುಖಂಡ ವಿ.ಎಸ್.ಅಚ್ಯುತಾನಂದನ್, ಸಂಸತ್ ಸದಸ್ಯರಾದ ಕಾ.ಎಂ.ಎ.ಬೇಬಿ ಹಾಗೂ ಕಾಂ. ಸುಶೀಲಾ ಗೋಪಾಲನ್ ಕೂಡಾ ಉಪಸ್ಥಿತರಿದ್ದರು.

ಪ್ರತಿನಿಧಿಗಳ ಅಧಿವೇಶನವನ್ನು ಕೋಚನೀಯನ್ ನಗರ(ಟಾಗೋರ್ ಶತಾಬ್ದಿ ಸಭಾಂಗಣ)-ದಲ್ಲಿ ಇತಿಹಾಸಕಾರ ಡಾ. ಸರ್ವೇಪಲ್ಲಿ ಗೋಪಾಲನ್ ಉದ್ಘಾಟಿಸಿದರು. 9.30 ಕ್ಕೆ ಎ.ವಿಜಯರಾಘವನ್ ಧ್ವಜಾರೋಹಣ ಮಾಡಿದರು. ಓ.ಎನ್.ವಿ. ಕುರುಪ್ ಪ್ರತಿನಿಧಿಗಳನ್ನು ಸ್ವಾಗತಿಸಿದರು. 800 ಪ್ರತಿನಿಧಿಗಳು, 82 ವೀಕ್ಷಕರು ಹಾಗೂ 56 ಕೇಂದ್ರ ಸಮಿತಿ ಸದಸ್ಯರು ನಾಲ್ಕು ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿದರು. ಅತೀ ಹೆಚ್ಚು ಪ್ರಾತಿನಿಧ್ಯ ಪಶ್ಚಿಮ ಬಂಗಾಳದಿಂದ(356)

ಸಮ್ಮೇಳನದ ಭಾಗವಾಗಿ 'ಎಸ್‌ಎಫ್‌ಐ ಇತಿಹಾಸ' ಎಂಬ ಪ್ರದರ್ಶನವಿತ್ತು. ಮಹತ್ವಪೂರ್ಣ ವಿಷಯಗಳ ಬಗ್ಗೆ ವಿಚಾರ ಸಂಕಿರಣಗಳು ಏರ್ಪಾಡಾಗಿದ್ದವು. ಎನ್. ರಾಮ್, ಮಾಲಿನಿ ಭಟ್ಟಾಚಾರ್ಯ, ಕೋಮಲ ಸ್ವಾಮಿನಾಥನ್, ಟಿ.ಕೆ.ರಾಮಕೃಷ್ಣನ್, ಸುಕುಮಾರ್ ಅಳಿಕ್ಕೋಡ್, ಜೈಪಾಲ್ ರೆಡ್ಡಿ, ಇ.ಎಂ.ಎಸ್., ಸೀತಾರಾಂ ಯೆಚೂರಿ, ಬಿಷಪ್ ಪೌಲೋಸ್ ಮಾರ್ ಪೌಲೋಸ್ ಮುಂತಾದವರು ವಿವಿಧ ಸೆಮಿನಾರ್‌ಗಳಲ್ಲಿ ಭಾಗವಹಿಸಿದರು.

ಕೇಂದ್ರ ಸಮಿತಿಯ ಕರಡು ವರದಿಯನ್ನು ಚರ್ಚಿಸಲು ಸಮ್ಮೇಳನ ಮೂರು ಪ್ರತ್ಯೇಕ ಆಯೋಗಗಳನ್ನು ರಚಿಸಿತು. ಶಿಕ್ಷಣದ ಕುರಿತಾದ ಆಯೋಗದ ನೇತೃತ್ವವನ್ನು ಮರಿಯಮ್ ಬೂಟ್‌ವಾಲಾ ವಹಿಸಿದ್ದರು. ವಿದ್ಯಾರ್ಥಿ ಆಂದೋಲನ ಕುರಿತಾದ ಆಯೋಗಕ್ಕೆ ಬ್ರತಿನ್ ಸೆನ್ ಗುಪ್ತಾ ಹಾಗೂ ಸಂಘಟನೆಯ ಕುರಿತು ವೈ.ವಿ.ರಾವ್ ಮುಖಂಡರಾಗಿದ್ದರು. ಆಯೋಗ 16 ಗುಂಪುಗಳಲ್ಲಿ ಚರ್ಚೆ ನಡೆಸಿತು.

ಪದಾಧಿಕಾರಿಗಳು :

ವೈ.ವೆಂಕಟೇಶ್ವರರಾವ್(ಆಂಧ್ರಪ್ರದೇಶ)ರನ್ನು ಭಾರತ ವಿದ್ಯಾರ್ಥಿ ಫೆಡರೇಷನ್‌ನ ಅಧ್ಯಕ್ಷರಾಗಿಯೂ, ಸುಜನ್ ಚಕ್ರವರ್ತಿ(ಪಶ್ಚಿಮ ಬಂಗಾಳ)-ಯವರನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ 8ನೇ ರಾಷ್ಟ್ರೀಯ ಸಮ್ಮೇಳನ ಶನಿವಾರ ಮುಕ್ತಾಯವಾಗುವ ಮೊದಲು ಆರಿಸಿತು.

ಸಮ್ಮೇಳನ ಎ.ಪ್ರದೀಪ್ ಕುಮಾರ್(ಕೇರಳ), ಕಪಿಲ್ ಘೋಷ್(ಪಶ್ಚಿಮ ಬಂಗಾಳ), ಮರಿಯಂ ಬೂಟ್‌ವಾಲಾ(ಮಹಾರಾಷ್ಟ್ರ), ಗುಣಶೇಖರನ್(ತಮಿಳುನಾಡು), ಕೆ.ಎನ್. ಬಾಲಗೋಪಾಲ್(ಕೇರಳ), ಸಮರ್ ಚಕ್ರವರ್ತಿ(ಪಶ್ಚಿಮ ಬಂಗಾಳ) ಹಾಗೂ ದಿನೇಶ್ ಕುಮಾರ್(ಬಿಹಾರ) ಇವರನ್ನು ಉಪಾಧ್ಯಕ್ಷರನ್ನಾಗಿಯೂ, ಬ್ರತಿನ್ ಸೆನ್ ಗುಪ್ತಾ(ಪಶ್ಚಿಮ ಬಂಗಾಳ), ಯು.ಪಿ.ಜೊಸೆಫ್(ಕೇರಳ), ಸುಬಿರ್ ಚೌಧರಿ(ಪಶ್ಚಿಮ ಬಂಗಾಳ), ಬಿ.ವೆಂಕಟ್(ಆಂಧ್ರಪ್ರದೇಶ), ಕೆ.ಪಿ.ವಿಜಯಕುಮಾರ್(ಕೇರಳ), ರಾಜೇಶ್‌ಯಾದವ್(-ಹಿಮಾಚಲ ಪ್ರದೇಶ), ಜೆ.ಸಿ.ಬಯ್ಯಾರೆಡ್ಡಿ(ಕರ್ನಾಟಕ) ಹಾಗೂ ಝಾಕಿರ್ ಆಲಿ ಇವರುಗಳನ್ನು ಜಂಟಿ ಕಾರ್ಯದರ್ಶಿಗಳಾಗಿ ಆರಿಸಿತು. 78 ಸದಸ್ಯರುಳ್ಳ ಕೇಂದ್ರ ಸಮಿತಿಯನ್ನು ಸಮ್ಮೇಳನ ಆರಿಸಿದೆ.

ಪದಾಧಿಕಾರಿಗಳಲ್ಲೊಬ್ಬರಾಗಿ ಆರಿಸಲ್ಪಟ್ಟ ಜೆ.ಸಿ.ಬಯ್ಯಾರೆಡ್ಡಿಯವರಲ್ಲದೆ ಕರ್ನಾಟಕದಿಂದ ಎಸ್.ಎಫ್.ಐನ . ಕೇಂದ್ರ ಸಮಿತಿಗೆ ಶಾಂತಾರಾಂ ನಾಯಕ್ ಹಾಗೂ ಎಲ್.ಮಂಜುನಾಥ್ ಕೂಡಾ ಆಯ್ಕೆಯಾಗಿದ್ದಾರೆ.

ಹೊಸ ಪ್ರಕಟಣೆಗಳು

ಖೋಟಾ ಹಿಂದೂವಾದಿಗಳ ನಿಜ ಸ್ವರೂಪ

ಕಾವಿ ಶರಟುಗಳ ಹಸಿ ಹಸಿ ಸುಳ್ಳುಗಳಿಗೆ ಮಾರುತ್ತರ – ಬೆಲೆ ರೂ. 2.00

ಪ್ರಕಟಣೆ : ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ

ಅಯೋಧ್ಯೆ

ವ್ಯಂಗ್ಯ ಚಿತ್ರಕಾರರ ಕಣ್ಣಲ್ಲಿ

'ಐಕ್ಯರಂಗ' ಪ್ರಕಟಣೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ತಾನಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ. : 2364..
ಸಂಪಾದಕರು : ಪಿ.ರಾಮಚಂದ್ರರಾವ್